**ಸಂಪುಟ:** 05 **ಸಂಚಿಕೆ:** 73 **ಪುಟಗಳು:** 08 **ಮಂಗಳವಾರ** 27 ಮೇ 2025
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833
₹5

**ಮುಂಜಾನೆ ಮಾತು**

ಒಂದು ವಸ್ತುವನ್ನು ಅತಿಯಾಗಿ ಬಯಸಿ ಅದನ್ನು ಪಡೆಯದಿದ್ದರೆ, ಕೋಪವು ವ್ಯಕ್ತಿಯ ಬುದ್ಧಿವಂತಿಕೆಯನ್ನು ಕೆಡಿಸುತ್ತದೆ ಮತ್ತು ಅದು ಇತರರಿಗಿಂತ ತನಗೇ ಹೆಚ್ಚು ಹಾನಿ ಮಾಡುತ್ತದೆ.

# ಉದಯ ವಾಹಿನಿ

UV
ಸರ್ವ ಸಮಾನತೆಯ
ಕನ್ನಡ ದಿನಪತ್ರಿಕೆ

## ಎಚ್‌ಎಎಲ್ ಮೇಲೆ ಕಣ್ಣಿಟ್ಟ ಆಂಧ್ರ ಸಿಎಂ ಚಂದ್ರಬಾಬು ನಾಯ್ಡು

• **ಉದಯವಾಹಿನಿ, ಬೆಂಗಳೂರು**

ಕೇಂದ್ರದಲ್ಲಿ ನರೇಂದ್ರ ಮೋದಿ ಸರ್ಕಾರದ ಪ್ರಮುಖ ಪಾಲುದಾರ ಪಕ್ಷವಾದ ತೆಲುಗುದೇಶಂ ಪಾರ್ಟಿಯು, ಹೊಸ ಲಾಬಿಯನ್ನು ಮಾಡುತ್ತಿದೆ. ಇದನ್ನು ಕರ್ನಾಟಕ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್, ಅವರು ಪ್ರಯತ್ನಿಸುತ್ತಿರುವುದು ನಿಜ ಎನ್ನುವ ಕಳವಳವನ್ನೂ ವ್ಯಕ್ತ ಪಡಿಸಿದ್ದಾರೆ. ಆಂಧ್ರ ಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು, ಎಚ್‌ಎಎಲ್ ಸಂಸ್ಥೆಯ ಎಎಂಸಿಎ ಮತ್ತು ಎಲ್ಸಿ ಉತ್ಪಾದನಾ ಘಟಕವನ್ನು ಬೆಂಗಳೂರಿನಿಂದ, ಆಂಧ್ರಕ್ಕೆ ಶಿಫ್ಟ್ ಮಾಡಲು ಭಾರೀ ಲಾಬಿಯನ್ನು ಮಾಡುತ್ತಿದ್ದಾರೆ. ಬೆಂಗಳೂರಿನಿಂದ ಎಚ್‌ಎಎಲ್ ಪ್ರೊಡಕ್ಟ್ ಉತ್ಪಾದನೆಯನ್ನು ಆಂಧ್ರಕ್ಕೆ ಸ್ಥಳಾಂತರ ಮಾಡಲು ಜಾಗವನ್ನೂ ಚಂದ್ರಬಾಬು ನಾಯ್ಡು ಗುರುತಿಸಿಯಾಗಿದೆ. ಬೆಂಗಳೂರಿನಿಂದ ಸುಮಾರು ಒಂದೂವರೆ ಗಂಟೆ ಪ್ರಯಾಣದ ಲೇಪಾಕ್ಷಿ – ಮಡಕಶಿರಾ ಭಾಗದಲ್ಲಿ ಹತ್ತು ಸಾವಿರ ಎಕರೆ ಭೂಮಿಯನ್ನು ನಾಯ್ಡು ಸರ್ಕಾರ ಮೀಸಲಿಟ್ಟಿದ್ದಾರೆ.

## ಬಲವಂತ ಭೂಸ್ವಾಧೀನ ಮಾಡಿದರೆ ವಿಷ ಕುಡಿಯುತ್ತೇವೆ!

• **ಉದಯವಾಹಿನಿ, ರಾಮನಗರ**

ಬಿಡದಿ ಟೌನ್‌ಶಿಪ್‌ಗೆ ರೈತರು ಭೂಮಿ ಕೊಡಲು ಸಿದ್ಧರಿಲ್ಲ. ಬಲವಂತವಾಗಿ ಭೂಮಿ ವಶಪಡಿಸಿಕೊಳ್ಳಲು ಮುಂದಾದರೆ ವಿಷ ಕುಡಿಯಲು ಸಿದ್ಧರಿದ್ದೇವೆ ಎಂದು ಬೈರಮಂಗಲ, ಕಂಚುಗಾರನಹಳ್ಳಿ ರೈತರ ಭೂ ಹಿತರಕ್ಷಣಾ ಸಂಘ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಜಿಬಿಡಿಎ) ಅಧಿಕಾರಿಗಳಿಗೆ ನೇರವಾಗಿ ಎಚ್ಚರಿಕೆ ಸಂದೇಶ ರವಾನಿಸಿದೆ. ಬಿಡದಿ ಸಮಗ್ರ ಉಪನಗರ ಯೋಜನೆಗೆ ಭೂಸ್ವಾಧೀನ ಪಡಿಸಿಕೊಳ್ಳುವ ಸಂಬಂಧ ಆಕ್ಷೇಪಣೆಗೆ ವಿಚಾರಣೆ ನಡೆಸುವ ಕುರಿತು ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಭೂ ಮಾಲೀಕರಿಗೆ ನೋಟಿಸ್ ಜಾರಿಮಾಡಿರುವ ಹಿನ್ನೆಲೆಯಲ್ಲಿಬಿಡದಿ ಹೋಬಳಿ ಹೊಸೂರು ಗ್ರಾಮದಲ್ಲಿಸೋಮವಾರ ಬೈರಮಂಗಲ, ಕಂಚುಗಾರನಹಳ್ಳಿ ರೈತರ ಭೂ ಹಿತರಕ್ಷಣಾ ಸಂಘದ ನೇತೃತ್ವದಲ್ಲಿ ರೈತರ ಸಮಾಲೋಚನೆ ಸಭೆ ಆಯೋಜಿಸಲಾಗಿತ್ತು.

## ಅಧಿಕ ಆಸ್ತಿ ಹೊಂದಿದ್ದ ಸರ್ಕಾರಿ ನೌಕರನಿಗೆ 4 ವರ್ಷ ಜೈಲು ಶಿಕ್ಷೆ

• **ಉದಯವಾಹಿನಿ, ಬೆಂಗಳೂರು**

ಭ್ರಷ್ಟಾಚಾರ ಪ್ರತಿಬಂಧಕ ಕಾಯಿದೆಯ ಪ್ರಕರಣದಲ್ಲಿ ಜಿಲ್ಲಾಧಿಕಾರಿಗಳ ಕಚೇರಿಯ ಡಿ ಗ್ರೂಪ್ ನೌಕರನಿಗೆ 4 ವರ್ಷ ಜೈಲು ಶಿಕ್ಷೆ, 10 ಲಕ್ಷ ರೂ. ದಂಡ ಹಾಗೂ 1.35 ಕೋಟಿ ರೂ. ಮೌಲ್ಯದ ಆಸ್ತಿ ಮುಟ್ಟುಗೋಲಿಗೆ ಆದೇಶಿಸಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ತೀರ್ಪು ನೀಡಿದೆ. ಚಿಕ್ಕಬಳ್ಳಾಪುರ ಜಿಲ್ಲಾಧಿಕಾರಿ ಕಚೇರಿಯಲ್ಲಿ ಡಿ ಗ್ರೂಪ್ ನೌಕರನಾಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀರಾಮಯ್ಯ ವಿರುದ್ಧ ಆದಾಯಕ್ಕಿಂತಲೂ ಅಧಿಕ ಆಸ್ತಿ ಸಂಪಾದಿಸಿದ್ದರ ಬಗ್ಗೆ ಜಿಲ್ಲಾ ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಲೋಕಾಯುಕ್ತ ಪೊಲೀಸರು ತನಿಖೆ ಕೈಗೊಂಡು ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದರು. ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ವಿಚಾರಣೆ ನಡೆದು ಶ್ರೀರಾಮಯ್ಯ ವಿರುದ್ಧದ ಆರೋಪ ಸಾಬೀತಾಗಿತ್ತು. ಈ ಪ್ರಕರಣದಲ್ಲಿ ಚಿಕ್ಕಬಳ್ಳಾಪುರದ ಲೋಕಾಯುಕ್ತ ಪೊಲೀಸ್ ಠಾಣೆಯ ಡಿವೈಎಸ್ಪಿ ಸಿ.ಎನ್ ಬೋಪಯ್ಯ, ಡಿ.ಅಶೋಕ್ ಅವರು ತನಿಖಾಧಿಕಾರಿಗಳಾಗಿದ್ದರು. ವಿಶೇಷ ಸಾರ್ವಜನಿಕ ಅಭಿಯೋಜಕರಾಗಿ ಗೋವಿಂದರೆಡ್ಡಿ ನ್ಯಾಯಾಲಯದಲ್ಲಿ ವಾದ ಮಂಡನೆ ಮಾಡಿದ್ದರು.

## ಬಿಜೆಪಿ ಎಂಎಲ್‌ಸಿ ರವಿಕುಮಾರ್ ವಿರುದ್ಧ ಎಫ್‌ಐಆರ್ ದಾಖಲು

• **ಉದಯವಾಹಿನಿ, ಕಲಬುರಗಿ**

ಬಿಜೆಪಿಯ 'ಕಲಬುರಗಿ ಚಲೋ' ಪ್ರತಿಭಟನೆ ವೇಳೆ ಜಿಲ್ಲಾಧಿಕಾರಿ ವಿರುದ್ಧ ಹಾಗೂ ಇತರ ಪೊಲೀಸ್ ಅಧಿಕಾರಿಗಳ ವಿರುದ್ಧ ಅವಹೇಳಕಾರಿ ಹೇಳಿಕೆ, ಜಿಲ್ಲಾ ಉಸ್ತುವಾರಿ ಸಚಿವರಿಗೆ ಸಾರ್ವಜನಿಕವಾಗಿ ಬೆದರಿಕೆ, ಜಾತಿ ನಿಂದನೆ ಮಾಡಿದ ಆರೋಪದ ಮೇರೆಗೆ ವಿಧಾನ ಪರಿಷತ್ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ ವಿರುದ್ಧ ದೂರು ದಾಖಲಾಗಿದೆ. ನಗರದ ನಿವಾಸಿ, ಸಮಾಜ ಸೇವಕ ದತ್ತಾತ್ರೇಯ ಇಕ್ಕಳಕಿ ದೂರಿನ ಮೇರೆಗೆ ಇಲ್ಲಿನ ಸ್ಟೇಷನ್ ಬಜಾರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ನ್ಯಾಯಾಲಯದಲ್ಲಿ ವಾದಮಂಡನೆ ಮಾಡಿದ್ದರು. ದೂರಿನ ಅನ್ವಯ ಬಿಎನ್‌ಎಸ್ ಕಲಂ 197, 224, 299, 302, 351, 353 ಮತ್ತು ಎಸ್‌ಸಿ– ಎಸ್‌ಟಿ ಆಕ್ಟ್ ಕಲಂ 3(1)(ಆರ್) ಪ್ರಕಾರ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ. ಎನ್. ರವಿ ಕುಮಾರ ಆಡಿರುವ ಮಾತುಗಳನ್ನು ಐಎಎಸ್ ಅಧಿಕಾರಿಗಳ ಸಂಘ– ಕರ್ನಾಟಕ ಖಂಡಿಸಿದೆ. ಈ ಬಗ್ಗೆ ಬಹಿರಂಗ ಕ್ಷಮೆಗೂ ಒತ್ತಾಯಿಸಿದೆ.

● **ಕೋವಿಡ್ ಹೆಚ್ಚಳ: ಶಿಕ್ಷಕರು, ಪೋಷಕರಿಗೆ ಸಿಎಂ ಸಿದ್ದರಾಮಯ್ಯ ಮಹತ್ವದ ಸಂದೇಶ; ಈ ಲಕ್ಷಣಗಳಿದ್ರೆ ಶಾಲೆಯಿಂದ ವಾಪಸ್!** ● **ಕೊರೋನಾ ಹೆಚ್ಚಳ ಹಿನ್ನೆಲೆ ಶಿಕ್ಷಕರು, ಪೋಷಕರಿಗೆ ಸಿಎಂ ಸಿದ್ದರಾಮಯ್ಯ ಮಹತ್ವದ ಸಂದೇಶ.** ● **ಸೋಂಕಿನ ಲಕ್ಷಣಗಳಿರುವ ಮಕ್ಕಳು ಶಾಲೆಗೆ ಬಂದಿದ್ದರೆ ವಾಪಸ್ ಕಳಿಸುವಂತೆ ಶಾಲಾ ಶಿಕ್ಷಕರಿಗೆ ಸೂಚನೆ.** ● **ಅಗತ್ಯ ಸಿದ್ಧತೆ ಮಾಡಿಕೊಳ್ಳಲು ಆರೋಗ್ಯ ಇಲಾಖೆ ಸಚಿವರು, ಅಧಿಕಾರಿಗಳಿಗೆ ಸಿಎಂ ಸಂದೇಶ.**

# ಕರುನಾಡಲ್ಲಿ ಕೊರೋನಾ ಆಟ ಅಧಿಕಾರಿಗಳಿಗೆ ಸಿಎಂ ಪಾಠ

**ಕೊರೋನಾ ಸೋಂಕಿನ ಪ್ರಮುಖ ಲಕ್ಷಣಗಳು**

- ಶೀತ, ನೆಗಡಿ
- ಕೆಮ್ಮು
- ಜ್ವರ
- ತೀವ್ರ ಉಸಿರಾಟ ಸಮಸ್ಯೆ
- ಮೈಕೈ ನೋವು, ತೀವ್ರ ಆಯಾಸ



**98 ಪಾಸಿಟಿವ್ ಪ್ರಕರಣಗಳು ವರದಿ**

ಕೇರಳ. ಮಹಾರಾಷ್ಟ್ರದಿಂದ ಕರ್ನಾಟಕದಿಂದ ಓಡಾಡಲು ಯಾವುದೇ ನಿರ್ಬಂಧ ಇಲ್ಲ. ರಾಜ್ಯದಲ್ಲಿ ಒಟ್ಟು 98 ಪಾಸಿಟಿವ್ ಪ್ರಕರಣಗಳು ವರದಿಯಾಗಿದ್ದು, ಈ ಪೈಕಿ 47 ಕೇಸ್‌ಗಳು ಸಕ್ರಿಯವಾಗಿವೆ. ವಯಸ್ಸಾದವರು, ಬಾಣಂತಿಯರು ಹಾಗೂ ಗರ್ಭಿಣಿಯರು ಮಾಸ್ಕ್ ಧರಿಸಿದರೆ ಒಳ್ಳೆಯದು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು



• **ಉದಯವಾಹಿನಿ, ಬೆಂಗಳೂರು**

ಕರ್ನಾಟಕದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಳವಾಗುತ್ತಿರುವ ಹಿನ್ನೆಲೆ ಶಾಲಾ ಶಿಕ್ಷಕರು, ಪೋಷಕರು ಹಾಗೂ ವಿದ್ಯಾರ್ಥಿಗಳಿಗೆ ಮಹತ್ವದ ಸಂದೇಶವನ್ನು ಸಿಎಂ ಸಿದ್ದರಾಮಯ್ಯ ನೀಡಿದ್ದಾರೆ. ಸೋಂಕಿನ ಲಕ್ಷಣಗಳು ಇದ್ದರೆ ಶಾಲೆಗೆ ಕಳುಹಿಸುವುದು ಬೇಡ ಎಂದು ಪೋಷಕರಿಗೆ ತಿಳಿಸಿದ್ದಾರೆ.

ಒಂದು ವೇಳೆ ಅಂತಹ ಮಕ್ಕಳು ಶಾಲೆಗೆ ಬಂದಿದ್ದರೆ ವಾಪಸ್ ಕಳಿಸುವಂತೆ ಶಾಲಾ ಶಿಕ್ಷಕರಿಗೆ ಸೂಚಿಸಿದ್ದಾರೆ.

ಸಿದ್ದರಾಮಯ್ಯ ಅವರು ಆರೋಗ್ಯ ಇಲಾಖೆ ಸಚಿವರು, ಅಧಿಕಾರಿಗಳ ಜತೆ ಸಭೆ ನಡೆಸಿದರು. ಸಭೆಯಲ್ಲಿ ಅಧಿಕಾರಿಗಳು, ತಜ್ಞರು ಮತ್ತು ಸಚಿವರುಗಳಿಂದ ಮಾಹಿತಿ ಪಡೆದ ಮುಖ್ಯಮಂತ್ರಿಗಳು ಹಲವು ಸೂಚನೆಗಳನ್ನು ನೀಡಿದರು.

**ಸೋಂಕಿನ ಲಕ್ಷಣಗಳಿದ್ದರೆ ಶಾಲೆಯಿಂದ ಮನೆಗೆ:** ಶೀತ, ನೆಗಡಿ, ಜ್ವರ ಇರುವ ಮಕ್ಕಳನ್ನು ಪೋಷಕರು ಶಾಲೆಗೆ ಕಳುಹಿಸದಿರುವುದು ಆರೋಗ್ಯಕರ. ಶಾಲೆಗಳೂ ಈ ಬಗ್ಗೆ ಗಮನ ಹರಿಸಿ ಜ್ವರ, ಶೀತ, ನೆಗಡಿ ಇರುವ ಮಕ್ಕಳನ್ನು ವಾಪಾಸ್ ಪೋಷಕರ ಮೂಲಕ ಮನೆಗೆ ಕಳುಹಿಸಬೇಕು ಎಂದು ಸಿಎಂ ಸೂಚನೆ ನೀಡಿದ್ದಾರೆ.

**ಕರ್ನಾಟಕ ಸೇರಿ ಇತರೆ ಜಿಲ್ಲೆಗಳಲ್ಲಿ ಎಷ್ಟಿದೆ ಪ್ರಕರಣ?** ಕಳೆದ ಜನವರಿಯಿಂದಲೂ ಕೊರೋನಾ ಪ್ರಕರಣಗಳು ಅಲ್ಲಲ್ಲಿ ಒಂದೂ ಎರಡು ಕಾಣಬರುತ್ತಿದ್ದು, ಮೇ ತಿಂಗಳಲ್ಲಿ ಉಲ್ಬಣವಾಗಿದ್ದು ಮೇ ತಿಂಗಳ ನಾಲ್ಕನೇ ವಾರಕ್ಕೆ 62 ಪ್ರಕರಣಗಳು ವರದಿಯಾಗಿವೆ. ಆದರೆ ಗಂಭೀರ ಎನ್ನುವಂತಹ ಪ್ರಕರಣಗಳ ಸಂಖ್ಯೆ ಒಂದು ಮಾತ್ರ ಇದೆ.ಕೋವಿಡ್ ಪ್ರಕರಣಗಳಲ್ಲಿ ತಪಾಸಣೆ ಕಾರ್ಯ ಈಗಾಗಲೇ ನಡೆಯುತ್ತಿದೆ. ನೆರೆಯ ರಾಜ್ಯಗಳಾದ ಕೇರಳದಲ್ಲಿ 95, ತಮಿಳು ನಾಡಿನಲ್ಲಿ 66, ಮಹಾರಾಷ್ಟ್ರಗಳಲ್ಲಿ 56 ಪ್ರಕರಣಗಳು ವರದಿಯಾಗಿವೆ ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ಸಿಎಂ ಸಿದ್ದರಾಮಯ್ಯಗೆ ಸೂಚನೆ ನೀಡಿದರು.

**ಸದ್ಯಕ್ಕೆ ಶಾಲೆ ಕಾಲೇಜು ಬಂದ್ ಇಲ್ಲ**

ಕೋವಿಡ್ ಇದ್ದರೂ ಸದ್ಯ ಶಾಲಾ ಕಾಲೇಜುಗಳನ್ನ ಬಂದ್ ಮಾಡುವ ಪರಿಸ್ಥಿತಿ ಇಲ್ಲ. ಈ ಬಗ್ಗೆ ಕೇಂದ್ರದಿಂದ ಯಾವುದೇ ಸೂಚನೆಗಳು ಬಂದಿಲ್ಲ. ಆದ್ರೆ ತಯಾರಿ ಮಾಡಿಕೊಂಡಿರಿ ಎಂದು ಸೂಚನೆ ಕೊಟ್ಟಿದ್ದಾರೆ ಎಂದು ದಿನೇಶ್ ಗುಂಡೂರಾವ್ ತಿಳಿಸಿದರು.

**ಸಿಎಂ ಸಿದ್ದರಾಮಯ್ಯ ನೀಡಿದ ಇತರೆ ಸೂಚನೆಗಳೇನು?**

- ಸದ್ಯಕ್ಕೆ ಆತಂಕ ಪಡುವ ಅಗತ್ಯವಿಲ್ಲ. ಆದರೆ, ಮುಂಚಿತವಾಗಿಯೇ ಮುಂದೆ ಸಂಭವಿಸಬಹುದಾದ ಪರಿಸ್ಥಿತಿಯನ್ನು ಅವಲೋಕಿಸಿ ಅಗತ್ಯವಾದ ಎಲ್ಲಾ ಸವಲತ್ತು, ಸಲಕರಣೆಗಳನ್ನು ಸಜ್ಜುಗೊಳಿಸಿಟ್ಟುಕೊಳ್ಳಬೇಕು.
- ಸದ್ಯಕ್ಕೆ ಆತಂಕ ಪಡುವ ಪರಿಸ್ಥಿತಿ ಬಂದಿಲ್ಲವಾದರೂ ವೆಂಟಿಲೇಟರ್, ಆಕ್ಸಿಜನ್, ಔಷಧ ಸೇರಿ ಇತ್ಯಾದಿ ಅಗತ್ಯಗಳನ್ನು ಸಿದ್ದಪಡಿಸಿಟ್ಟುಕೊಳ್ಳಿ.
- ವಯಸ್ಸಾದವರು, ಗರ್ಭಿಣಿಯರು, ಹೃದಯ ಸಂಬಂಧಿ, ಶ್ವಾಸಕೋಶ ಸಮಸ್ಯೆ ಇರುವವರು ಮುನ್ನೆಚ್ಚರಿಕೆ ಕ್ರಮವಾಗಿ ಮಾಸ್ಕ್ ಧರಿಸುವುದು ಒಳ್ಳೆಯದು. ಈ ಬಗ್ಗೆ ಅರಿವು ಮೂಡಿಸಬೇಕು. ಪ್ರತೀ ವಾರ ಅಥವಾ ಅಗತ್ಯ ಬಿದ್ದರೆ ಮೂರು ದಿನಕ್ಕೊಮ್ಮೆ ಪರಿಸ್ಥಿತಿಯ ಪರಿಶೀಲನೆ ನಡೆಸುತ್ತಾ ತೀವ್ರ ನಿಗಾ ಇಡಬೇಕು.
- ಗರ್ಭಿಣಿಯರಲ್ಲಿ ಆರೋಗ್ಯ ಸಮಸ್ಯೆ ಕಂಡುಬಂದರೆ, ಅವರನ್ನು ಒಂದು ಆಸ್ಪತ್ರೆಯಿಂದ ಮತ್ತೊಂದು ಆಸ್ಪತ್ರೆಗೆ ವರ್ಗಾಯಿಸುವುದನ್ನು ನಿಲ್ಲಿಸಿ, ಎಲ್ಲಾ ಆಸ್ಪತ್ರೆಗಳಲ್ಲೂ ಅಗತ್ಯ ವ್ಯವಸ್ಥೆ ಮಾಡಿಕೊಂಡಿರಬೇಕು.
- ಎಂತಹುದೇ ಪರಿಸ್ಥಿತಿ ಎದುರಿಸಲು ಸರ್ವ ಸನ್ನದ್ಧವಾಗಿರಿ.
- ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದಂತೆ, ಎಂತಹುದೇ ಪರಿಸ್ಥಿತಿ ಎದುರಿಸಲು. ಆಸ್ಪತ್ರೆಗಳಲ್ಲಿ ಹಾಸಿಗೆ, ಆಕ್ಸಿಜನ್ ವೆಂಟಿಲೇಟರ್ ಸೇರಿದಂತೆ ಮೂಲಭೂತ ಸೌಕರ್ಯಗಳು ಕಡ್ಡಾಯವಾಗಿರುವಂತೆ ಕ್ರಮ ತೆಗೆದುಕೊಳ್ಳಬೇಕು.
- ಬಾಣಂತಿ ಹಾಗೂ ಮಕ್ಕಳ ಆರೋಗ್ಯ ಬಗ್ಗೆ ವಿಶೇಷ ಕಾಳಜಿ ವಹಿಸಿ.
- ಸಾರ್ವಜನಿಕರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಕೊರೋನಾ ಸಹಾಯವಾಣಿ ಪ್ರಾರಂಭಿಸಿ.
- ಮುಂದಿನ ದಿನಗಳಲ್ಲಿ ಅವಶ್ಯಕತೆ ಕಂಡು ಬಂದರೆ ವಿಮಾನ ನಿಲ್ದಾಣಗಳಲ್ಲಿ ಹೊರಗಡೆಯಿಂದ ಬರುವ ಪ್ರಯಾಣಿಕರಿಗೆ ತಪಾಸಣಾ ಘಟಕಗಳನ್ನು ಪ್ರಾರಂಭಿಸಲು ಕ್ರಮ ವಹಿಸಿ.
- ಯಾವುದೇ ಕಾರಣಕ್ಕೂ ನಿರ್ಲಕ್ಷ್ಯ ಧೋರಣೆ ಇರಬಾರದು. ಎಲ್ಲಾ ಜಿಲ್ಲೆಗಳಲ್ಲೂ ಜಿಲ್ಲಾ ಆಸ್ಪತ್ರೆಗಳೂ ಸರ್ವ ಸನ್ನದ್ಧವಾಗಿರಿ.
- ಆರೋಗ್ಯ ಇಲಾಖೆ ಸಿಬ್ಬಂದಿ ರಜಾ ಹಾಕಿ ತೆರಳದೆ ಕೇಂದ್ರ ಸ್ಥಾನದಲ್ಲಿಯೇ ಇದ್ದು ಕಾರ್ಯ ನಿರ್ವಹಿಸಬೇಕು.
- ಸಾಮಾಜಿಕ ಮಾಧ್ಯಮಗಳ ಮೂಲಕ ಕಾಲ ಕಾಲಕ್ಕೆ ಸಾರ್ವಜನಿಕರಿಗೆ ಮಾಹಿತಿ ನೀಡಬೇಕು.

**ಮಾಸ್ಕ್ ಧರಿಸಿದ್ರೆ ಒಳ್ಳೆಯದು**

ರಾಜ್ಯದಲ್ಲಿ ಕೋವಿಡ್ 19 ಪ್ರಕರಣಗಳ ಸಂಖ್ಯೆ ಹೆಚ್ಚಳ ಆಗುತ್ತಿದೆ. ಆದರೂ ಮಾಸ್ಕ್ ಧರಿಸುವಂತೆ ಕಡ್ಡಾಯ ಮಾಡುವುದಿಲ್ಲ. ಮಾಸ್ಕ್ ಧರಿಸುವುದನ್ನು ಕಡ್ಡಾಯ ಮಾಡೋಕೆ ಆಗುವುದಿಲ್ಲ. ಆದರೆ ಜನರು ಮುನ್ನಚ್ಚರಿಕೆಯ ಕ್ರಮವಾಗಿ ಮಾಸ್ಕ್ ಧರಿಸಿದ್ರೆ ಒಳ್ಳೆಯದು. ಐಸಿಯು, ವೆಂಟಿಲೇಟರ್ ಮೇಲೆ ಯಾರು ಇಲ್ಲ. ಸದ್ಯಕ್ಕೆ ಯಾರು ಆತಂಕ ಪಡಬಾರದು. ಆದರೆ ಜನರು ಸಹ ಎಚ್ಚರಿಕೆಯಿಂದ ಇರಬೇಕು. ಗಂಭೀರ ಸ್ವರೂಪದ ಕೋವಿಡ್ ರೂಪಾಂತರಗಳು ಕಂಡು ಬಂದಿಲ್ಲ ಎಂದು ಆರೋಗ್ಯ ಸಚಿವರು ತಿಳಿಸಿದರು.

## ಮೆಟ್ರೋ ಕಾಮಗಾರಿ ರಸ್ತೆಗಳಲ್ಲಿ ಟ್ರಾಫಿಕ್ ಸಮಸ್ಯೆ: ಸುಗಮ ಸಂಚಾರಕ್ಕೆ ರಸ್ತೆ ವಿಲೀನ

• **ಉದಯವಾಹಿನಿ, ಬೆಂಗಳೂರು**

ಮೆಟ್ರೋ ಕಾಮಗಾರಿ ನಡೆಯುತ್ತಿರುವ ಪ್ರಮುಖ ರಸ್ತೆಗಳಲ್ಲಿ ವಾಹನಗಳ ಸುಗಮ ಸಂಚಾರಕ್ಕೆ ನೆರವಾಗಲು ಮುಖ್ಯರಸ್ತೆ ಹಾಗೂ ಸರ್ವೀಸ್ ರಸ್ತೆಗಳನ್ನು ವಿಲೀನ ಮಾಡುವ ಸಂಬಂಧ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ನಗರದಲ್ಲಿ ಸ್ಥಳ ಪರಿಶೀಲನೆ ನಡೆಸಿದರು.

ಹೆಬ್ಬಾಳ ಜಂಕ್ಷನ್ ನಿಂದ ಸಿಲ್ಕ್ ಬೋರ್ಡ್ ವರೆಗೆ ಮೆಟ್ರೋ ಮಾರ್ಗದಲ್ಲಿ ಬರುವ ಮಹದೇವಪುರ ಹಾಗೂ ಮಾರತಹಳ್ಳಿ ಮೇಲ್ಸೇತುವೆ ಬಳಿ ವೀಕ್ಷಣೆ ಮಾಡಿದರು.

ಇತ್ತೀಚೆಗೆ ನಡೆದ ಗ್ರೇಟರ್ ಬೆಂಗಳೂರು ಸಭೆಯಲ್ಲಿ ಬೆಂಗಳೂರಿನ ಪ್ರಮುಖ ರಸ್ತೆಗಳಲ್ಲಿ ಮೆಟ್ರೋ ಕಾಮಗಾರಿಯಿಂದ ಆಗುತ್ತಿರುವ ಸಂಚಾರ ದಟ್ಟಣೆ ನಿವಾರಿಸಿ, ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲು ಮುಖ್ಯರಸ್ತೆ ಹಾಗೂ ಸರ್ವೀಸ್ ರಸ್ತೆಗಳ ನಡುವೆ ಇರುವ ರಸ್ತೆ ವಿಭಜಕ (ಡಿವೈಡರ್) ತೆರವುಗೊಳಿಸಲು ತೀರ್ಮಾನ ಮಾಡಲಾಗಿತ್ತು.





**ಬೆಂಗಳೂರಿನ ಶಾಸಕರ ಜತೆ ಚರ್ಚೆ**

ಈ ವಿಚಾರವಾಗಿ ಈಗಾಗಲೇ ಬೆಂಗಳೂರಿನ ಶಾಸಕರ ಜತೆ ಚರ್ಚೆ ಮಾಡಿ, ಅವರ ಅಭಿಪ್ರಾಯವನ್ನು ಪಡೆಯಲಾಗಿದ್ದು, ಸುಮಾರು 40–50 ಕಿ.ಮೀ ಉದ್ದದ ರಸ್ತೆಗಳಲ್ಲಿ ಮುಖ್ಯರಸ್ತೆ ಹಾಗೂ ಸರ್ವೀಸ್ ರಸ್ತೆಗಳನ್ನು ವಿಲೀನಗೊಳಿಸಲು ತೀರ್ಮಾನಿಸಲಾಗಿದೆ. ಮೆಟ್ರೋ ರೈಲು ಯೋಜನೆ ಹಿನ್ನೆಲೆಯಲ್ಲಿ ಮುಖ್ಯ ರಸ್ತೆಯ ಬಹುತೇಕ ಭಾಗ ಕಾಮಗಾರಿ ಉದ್ದೇಶಕ್ಕೆ ಬಳಕೆಯಾಗುತ್ತಿದ್ದು ವಾಹನಗಳು ಸುಗಮವಾಗಿ ಸಾಗಲು ಸಾಧ್ಯವಾಗದೆ ಸಂಚಾರ ದಟ್ಟಣೆ ಹೆಚ್ಚಾಗುತ್ತಿತ್ತು. ಈ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ. ನಗರದ ಹಲವು ಕಡೆಗಳಲ್ಲಿ ಮೆಟ್ರೋ ಕಾಮಗಾರಿ ನಡೆಯುತ್ತಿದೆ. ಆದರೆ ಇದರಿಂದ ಟ್ರಾಫಿಕ್ ಸಮಸ್ಯೆ ತೀವ್ರವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಇದನ್ನು ತಡೆಗಟ್ಟುವ ನಿಟ್ಟಿನಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ.

**ಜನ ಹೈರಾಣು:** ಬೆಂಗಳೂರಿನಲ್ಲಿ ಮೆಟ್ರೋ ಇದ್ದರೂ ಟ್ರಾಫಿಕ್ ಸಮಸ್ಯೆಗೆ ಮುಕ್ತಿ ಸಿಗುತ್ತಿಲ್ಲ. ದಿನದಿಂದ ದಿನಕ್ಕೆ ಟ್ರಾಫಿಕ್ ಸಮಸ್ಯೆ ಬಿಗಡಾಯಿಸುತ್ತಲೇ ಇದೆ. ಇದಕ್ಕೆ ಶೀಘ್ರದಲ್ಲೇ ಒಂದು ಪರಿಹಾರ ನೀಡಿ ಎಂಬುವುದು ಜನ ಆಗ್ರಹವಾಗಿದೆ. ಈ ನಡುವೆ ಬೆಂಗಳೂರಿನಲ್ಲಿ ಮಳೆಯ ಅಬ್ಬರವೂ ತೀವ್ರಗೊಳ್ಳುತ್ತಿದೆ. ಅಲ್ಲಲ್ಲಿ ರಸ್ತೆ ಕಾಮಗಾರಿಯಿಂದಾಗಿ ವಾಹನ ಸವಾರರು ಪರದಾಡುವಂತಾಗಿದೆ.

ಈ ನಿಟ್ಟಿನಲ್ಲಿ ಮೆಟ್ರೋ ರೈಲು ಯೋಜನೆ ಹಿನ್ನೆಲೆಯಲ್ಲಿ ಮುಖ್ಯರಸ್ತೆಯ ಬಹುತೇಕ ಭಾಗ ಕಾಮಗಾರಿ ಉದ್ದೇಶಕ್ಕೆಬಳಕೆಯಾಗುತ್ತಿದ್ದು ವಾಹನಗಳು ಸುಗಮವಾಗಿ ಸಾಗಲು ಸಾಧ್ಯವಾಗದೆ ಇರುವುದರಿಂದಾಗಿ ಟ್ರಾಫಿಕ್ ಸಮಸ್ಯೆ ಹಲವು ಕಡೆಗಳಲ್ಲಿ ತೀವ್ರಗೊಳ್ಳುತ್ತಿದೆ. ಈ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಡಿಕೆಶಿ ತಿಳಿಸಿದ್ದಾರೆ.

# ಕರಾವಳಿ ಸೇರಿದಂತೆ 8 ಜಿಲ್ಲೆಗಳಿಗೆ ರೆಡ್ ಅಲರ್ಟ್, ಇಂದು ಭಾರಿ ಮಳೆ ಆರ್ಭಟ

● **ಉತ್ತರ ಕನ್ನಡ, ಉಡುಪಿ ಮತ್ತು ದಕ್ಷಿಣ ಕನ್ನಡ, ಚಿಕ್ಕಮಗಳೂರು, ಕೊಡಗು ಮತ್ತು ಶಿವಮೊಗ್ಗ ಜಿಲ್ಲೆಗೆ ರೆಡ್ ಅಲರ್ಟ್**

• **ಉದಯವಾಹಿನಿ, ಬೆಂಗಳೂರು**

ವಾಯುಭಾರ ಕುಸಿತದಿಂದಾಗಿ ಒಂದು ವಾರ ಮುಂಚಿತವಾಗಿ ಶನಿವಾರ ರಾಜ್ಯ ಪ್ರವೇಶಿಸಿದ ನೈಋತ್ಯ ಮುಂಗಾರು ಎರಡನೇ ದಿನವೂ ಆರ್ಭಟ ಮುಂದುವರಿಸಿದೆ. ಒಳನಾಡಿನ ಜಿಲ್ಲೆಗಳಿಗೂ ಮಾನ್ಸೂನ್ ವ್ಯಾಪಿಸಿದ್ದು, ಅನೇಕ ಕಡೆ ಅವಾಂತರ ಸೃಷ್ಟಿಯಾಗಿದೆ. ಭಾರಿ ಮಳೆ ಮುಂದುವರಿಯುವ ಸಾಧ್ಯತೆ ಇದೆ.

**6 ಜಿಲ್ಲೆಗಳಿಗೆ ರೆಡ್ ಅಲರ್ಟ್:** ಮುಂದಿನ ಒಂದು ವಾರ ರಾಜ್ಯದಲ್ಲಿ ವ್ಯಾಪಕ ಮಳೆಯಾಗಲಿದೆ. ಇದೇ ವೇಳೆ ಅರಬ್ಬಿ ಸಮುದ್ರದಲ್ಲಿ ವಾಯುಭಾರ ಕುಸಿತದ ಹಿನ್ನೆಲೆಯಲ್ಲಿ ಕರಾವಳಿ ಮತ್ತು ಒಳನಾಡಿನ ಕೆಲವು ಜಿಲ್ಲೆಗಳಲ್ಲಿ ಮೇ 28ರವರೆಗೆ ವ್ಯಾಪಕ ಮಳೆಯಾಗಲಿದ್ದು, ಹಲವು ಜಿಲ್ಲೆಗಳಿಗೆ ಹವಾಮಾನ ಇಲಾಖೆ ಎಚ್ಚರಿಕೆಯ ಮುನ್ಸೂಚನೆ ನೀಡಿದೆ. ಉತ್ತರ ಕನ್ನಡ, ಉಡುಪಿ ಮತ್ತು ದಕ್ಷಿಣ ಕನ್ನಡ, ಚಿಕ್ಕಮಗಳೂರು, ಕೊಡಗು ಮತ್ತು ಶಿವಮೊಗ್ಗ ಜಿಲ್ಲೆಗೆ ಮೇ ಮೇ 26ಕ್ಕೆ ರೆಡ್ ಅಲರ್ಟ್ ನೀಡಲಾಗಿದೆ. ಧಾರವಾಡ, ಗದಗ, ಹಾವೇರಿ, ಹಾಸನ, ಮೈಸೂರು ಜಿಲ್ಲೆಗೆ ಯೆಲ್ಲೊ ಅಲರ್ಟ್ ಘೋಷಿಸಲಾಗಿದೆ.

**ಬೆಂಗಳೂರಿಗೆ ಯೆಲ್ಲೊ ಅಲರ್ಟ್:** ಬೆಂಗಳೂರಲ್ಲಿ ಬೆಳ್ಳಂಬೆಳಗ್ಗೆ ಮಳೆಯಾಗುತ್ತಿದೆ, ಸೋಮವಾರ ಹಾಗೂ ಮಂಗಳವಾರ ಯೆಲ್ಲೋ ಅಲರ್ಟ್ ಘೋಷಣೆಯಾಗಿತ್ತು, ಮಳೆ ಮುನ್ನೆಚ್ಚರಿಕೆ ವಹಿಸುವಂತೆ ಹವಾಮಾನ ಇಲಾಖೆ ಮುನ್ಸೂಚನೆ ಕೊಟ್ಟಿದೆ.

**5 ಜಿಲ್ಲೆಗಳಲ್ಲಿ ರೆಡ್ ಅಲರ್ಟ್:** ಉತ್ತರ ಕನ್ನಡ, ಶಿವಮೊಗ್ಗ, ಉಡುಪಿ, ಚಿಕ್ಕಮಗಳೂರು, ದಕ್ಷಿಣ ಕನ್ನಡ ಜಿಲ್ಲೆಗಳಿಗೆ ಅತಿಭಾರೀ ಮಳೆ ಮುನ್ಸೂಚನೆ ಇದೆ. ಬೆಳಗಾವಿ, ಕೊಡಗು, ಹಾಸನ,ಕಲ್ಬುರ್ಗಿ ಜಿಲ್ಲೆಗಳಿಗೆ ಭಾರೀ ಮಳೆ ಸೂಚನೆ ಹಿನ್ನೆಲೆ ಆರೆಂಜ್ ಅಲರ್ಟ್ ನೀಡಲಾಗಿದೆ. ಉಳಿದ ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಕೊಡಲಾಗಿದೆ.

**ದೇಶಾದ್ಯಂತ ಮಳೆ ಅವಾಂತರ**

● ದಿಲ್ಲಿ ವಿಮಾನನಿಲ್ದಾಣ ದ ಟರ್ಮಿನಲ್ 1 ಬಳಿ ಚಾವಣಿ ಭಾಗಶಃ ಕುಸಿತ ● 49 ವಿಮಾನಗಳ ಸಂಚಾರ ಮಾರ್ಗ ಬದಲು, 650 ವಿಮಾನಗಳು ವಿಳಂಬ ● ಭಾರಿ ಗಾಳಿ–ಮಳೆಗೆ ಹೊಳೆಯಂತಾದ ನಗರದ ರಸ್ತೆಗಳು, ಹಲವು ಪ್ರದೇಶ ಜಲಾವೃತ ● ಹಿಮಾಚಲ ಪ್ರದೇಶದ ರಾಂಪುರದಲ್ಲಿ ಮೇಘಸ್ಫೋಟ, ಕೊಚ್ಚಿ ಹೋದ ವಾಹನಗಳು ● ಉತ್ತರ ಪ್ರದೇಶದ ಘಾಜಿಯಾಬಾದ್ ನಲ್ಲಿ ಮಳೆಗೆ ಪೊಲೀಸ್ ಠಾಣೆ ಮೇಲ್ಛಾವಣಿ ಕುಸಿತ, ಪಿಎಸ್‌ಐ ಸಾವು


**ಕೊಡಗಿನಲ್ಲಿ ಮಳೆ ಅಬ್ಬರ:** **ತ್ರಿವೇಣಿ ಸಂಗಮ ಭರ್ತಿ:** ಕೊಡಗು ಜಿಲ್ಲೆಯಾದ್ಯಂತ ಭಾರೀ ಮಳೆ ಮುಂದುವರಿದಿದ್ದು, ಜನಜೀವನ ಸಂಪೂರ್ಣ ಅಸ್ತವ್ಯಸ್ತವಾಗಿದೆ. ಮಡಿಕೇರಿ ಮತ್ತು ವಿರಾಜಪೇಟೆ, ಪೊನ್ನಂಪೇಟೆ ತಾಲ್ಲೂಕು ವ್ಯಾಪ್ತಿಯಲ್ಲಿ ಭಾರೀ ಮಳೆಯಾಗುತ್ತಿದ್ದು, ನದಿ ತೊರೆಗಳು ಉಕ್ಕಿ ಹರಿಯುತ್ತಿವೆ. ಕಳೆದ ಹಲವು ವರ್ಷಗಳಲ್ಲೇ ಮೊದಲ ಬಾರಿ ಎಂಬಂತೆ ಮೇ ತಿಂಗಳಿನಲ್ಲಿಯೇ ಭಾಗಮಂಡಲ ತ್ರಿವೇಣಿ ಸಂಗಮ ಭರ್ತಿಯಾಗಿದ್ದು, ಸಂಗಮದ ಎದುರಿನ ನೂತನ ಉದ್ಯಾನ, ಪಕ್ಕದ ಗದ್ದೆಗಳೆಲ್ಲವೂ ಸಂಪೂರ್ಣ ಜಲಾವೃತವಾಗಿದೆ. ದಕ್ಷಿಣ ಕನ್ನಡ ಜಿಲ್ಲಾದ್ಯಂತ ಭಾರಿ ವರುಣಾರ್ಭಟಕ್ಕೆ ಜನಜೀವನ ಅಸ್ತವ್ಯಸ್ತಗೊಂಡಿದೆ. ಕಡಲ ತೀರದಲ್ಲಿ ಕಡಲ್ಕೊರೆತ ಶುರುವಾಗಿದ್ದು, ಅಪಾಯದ ಕರೆಗಂಟೆ ಬಾರಿಸಿದೆ.

ಜಿಲ್ಲೆಯಲ್ಲಿ ಒಂದೇ ದಿನ 20ಕ್ಕೂ ಅಧಿಕ ಮನೆಗಳಿಗೆ ಹಾನಿಯಾದರೆ 300ಕ್ಕೂ ಹೆಚ್ಚು ವಿದ್ಯುತ್ ಕಂಬಗಳು ಮುರಿದು ಬಿದ್ದಿವೆ. ಜಿಲ್ಲೆಯ ಬಹುತೇಕ ನದಿಗಳ ಹರಿವಿನ ಮಟ್ಟ ಏರಿಕೆಯಾಗಿದ್ದು, ತಗ್ಗು ಪ್ರದೇಶಗಳಿಗೆ ನೀರು ನುಗ್ಗಿದೆ.

ಚಲಿಸುತ್ತಿದ್ದ ಕಾರಿನ ಮೇಲೆ ಬೃಹತ್ ಮರವೊಂದು ಬಿದ್ದ ಘಟನೆ ಸುಬ್ರಹ್ಮಣ್ಯ–ಉಡುಪಿ ರಾಜ್ಯ ಹೆದ್ದಾರಿಯ ಕಡಬ ತಾಲ್ಲೂಕಿನ ನೂಜಿಬಾಳ್ತಿಲದಲ್ಲಿ ನಡೆದಿದೆ. ಅದೃಷ್ಟವಶಾತ್ ಕಾರಿನಲ್ಲಿದ್ದವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

**ಬಿರುಗಾಳಿ, ನೆರೆಗೆ ಇಬ್ಬರು ಬಲಿ**

ಚಿಕ್ಕಮಗಳೂರಿನಲ್ಲಿ ಮರ ಬಿದ್ದು ಆಟೋ ಚಾಲಕ ಮೃತಪಟ್ಟರೆ, ಕಾರವಾರದಲ್ಲಿ ಕಾಳಿ ನದಿಯಲ್ಲಿ ವ್ಯಕ್ತಿಯೊಬ್ಬರು ಕೊಚ್ಚಿ ಹೋಗಿದ್ದಾರೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ನೀರು ತುಂಬಿದ ಗುಂಡಿ ರಸ್ತೆಗಳಿಂದ ಜಾರಿ ಮೂರು ಕಾರುಗಳು ನದಿ ಪಾಲಾಗಿವೆ. ಕೊಡಗು, ಶಿವಮೊಗ್ಗ, ಕರಾವಳಿ ಜಿಲ್ಲೆಗಳಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಂಡು ಕತ್ತಲು ಆವರಿಸಿದೆ. ನದಿ ತೊರೆಗಳು ತುಂಬಿ ಹರಿಯುತ್ತಿದ್ದು, ತುಂಗಾ ಸೇರಿದಂತೆ ಕೆಲವು ಜಲಾಶಯಗಳು ಮುಂಗಾರಿಗೆ ಮೊದಲೇ ಭರ್ತಿಯಾಗಿವೆ.



**ಉಡುಪಿ – ದಕ್ಷಿಣ ಕನ್ನಡದ ಅಂಗನವಾಡಿಗಳಿಗೆ ರಜೆ**


ತೀವ್ರ ಮಳೆ ಹಿನ್ನೆಲೆ – ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಅಂಗನವಾಡಿಗಳಿಗೆ ರಜೆ ಘೋಷಿಸಲಾಗಿದೆ. ಇನ್ನು ಉಡುಪಿ ಜಿಲ್ಲೆಯಲ್ಲಿ ಉತ್ತಮ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಅಂಗನವಾಡಿಗಳಿಗೆ ರಜೆ ಘೋಷಿಸಿ ಜಿಲ್ಲಾಧಿಕಾರಿ ಆದೇಶ ಹೊರಡಿಸಿದ್ದಾರೆ. ಕೊಡಗು ಜಿಲ್ಲೆಯಲ್ಲಿ ಕಳೆದ ಎರಡು ದಿನಗಳಿಂದ ಭಾರೀ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಕೊಡಗು ಜಿಲ್ಲಾಡಳಿತದೊಂದಿಗೆ ಸಮಾಲೋಚಿಸಿ ಕೊಡಗು ವಿಶ್ವ ವಿದ್ಯಾನಿಲಯದ ವ್ಯಾಪ್ತಿಗೆ ಒಳಪಡುವ ಎಲ್ಲಾ ಘಟಕ ಸರಕಾರಿ ಹಾಗೂ ಸಂಯೋಜಿತ ಮಹಾವಿದ್ಯಾಲಯಗಳಿಗೆ ಮೇ 26 ಹಾಗೂ 27ರಂದು ರಜೆ ಘೋಷಣೆ ಮಾಡಿ ಕೊಡಗು ವಿವಿ ಕುಲಪತಿ ಡಾ.ಅಶೋಕ್ ಸಂಗಪ್ಪ ಆಲೂರ ಆದೇಶಿಸಿದ್ದಾರೆ. ಜಿಲ್ಲೆಯಲ್ಲಿ ರೆಡ್ ಅಲರ್ಟ್ ಘೋಷಿಸಿರುವುದರಿಂದ ಹಾಗೂ ಹೆಚ್ಚಿನ ಗಾಳಿ ಮಳೆ ಇರುವುದರಿಂದ ಅಂಗನವಾಡಿ ಮಕ್ಕಳ ಸುರಕ್ಷತೆಯ ದೃಷ್ಟಿಯಿಂದ ಮೇ 26 ಹಾಗೂ 27ರಂದು ಎಲ್ಲಾಅಂಗನವಾಡಿ ಕೇಂದ್ರಗಳಿಗೆ ರಜೆ ಘೋಷಿಸಲಾಗಿದೆ ಎಂದು ಜಿಲ್ಲಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ರಾಷ್ಟ್ರೀಯ ವಿಪತ್ತು ನಿರ್ವಹಣ ಪಡೆ**

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳೆದ ಮೂರು ದಿನಗಳಿಂದ ಭಾರಿ ಮಳೆ ಸುರಿಯುತ್ತಿದೆ. ಇದರಿಂದ ಜನಜೀವನ ಅಸ್ತವ್ಯಸ್ತಗೊಂಡಿದೆ. ರೆಡ್ ಅಲರ್ಟ್ ಘೋಷಿಸಿರುವ ಹಿನ್ನೆಲೆ ಎನ್‌ಡಿಆರ್‌ಎಫ್ ಹಾಗೂ ಎಸ್‌ಡಿಆರ್‌ಎಫ್ ತಂಡಗಳನ್ನು ನಿಯೋಜಿಸಲಾಗಿದೆ. ಎನ್‌ಡಿಆರ್‌ಎಫ್ ತಂಡವನ್ನು ಪುತ್ತೂರಿನಲ್ಲಿ ನಿಯೋಜಿಸಲಾಗಿದೆ. ಎಸ್‌ಡಿಆರ್‌ಎಫ್ ತಂಡಗಳನ್ನು ಮಂಗಳೂರು ಮತ್ತು ಸುಬ್ರಹ್ಮಣ್ಯದಲ್ಲಿ ನಿಯೋಜಿಸಲಾಗಿದೆ.

**ಈ ದಿನದ ದರ** | ಪೆಟ್ರೋಲ್: 103.50 ₹/L | ಡೀಸೆಲ್ : 90.03 ₹/L | ಬಂಗಾರ: ₹9,764/Gram24ct ₹8,950/Gram22ct | ಬೆಳ್ಳಿ: ₹100.00/Gram

# ಭರತನಾಟ್ಯ ಪ್ರದರ್ಶನ



• ಉದಯವಾಹಿನಿ, ಬೆಂಗಳೂರು

ಜಯನಗರ 5ನೇ ಬಡಾವಣೆಯ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಪರಮಪೂಜ್ಯ ಶ್ರೀ ಶ್ರೀ ಸುಬುಧೇಂದ್ರ ತೀರ್ಥ ಶ್ರೀಪಾದಂಗಳವರ ಆದೇಶದಂತೆ ಶ್ರೀಮಠದ ಹಿರಿಯ ವ್ಯವಸ್ಥಾಪಕರಾದ ಶ್ರೀ ಆರ್ ಕೆ ವಾದೀಂದ್ರಾಚಾರ್ಯರ ನೇತೃತ್ವದಲ್ಲಿ ಮೇ 29, ಗುರುವಾರ ಸಂಜೆ 5-30ಕ್ಕೆ ಶ್ರೀಮತಿ ಮಂಜುಶ್ರೀ ಸಂತೋಷ್ ಅವರ ನಿರ್ದೇಶನದಲ್ಲಿ ನಾಟ್ಯ ಸಿಂಚನ ಸಂಗೀತ ಮತ್ತು ನೃತ್ಯ ಶಾಲೆಯ ವಿದ್ಯಾರ್ಥಿಗಳಿಂದ ಭರತನಾಟ್ಯ ಪ್ರದರ್ಶನ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಶ್ರೀ ನಂದಕಿಶೋರ್ ಆಚಾರ್ಯರು ತಿಳಿಸಿದ್ದಾರೆ. ಸ್ಥಳ : ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 11ನೇ ಮುಖ್ಯರಸ್ತೆ, 45ನೇ ಅಡ್ಡರಸ್ತೆ, ಜಯನಗರ 5ನೇ ಬಡಾವಣೆ, ಬೆಂಗಳೂರು41

# ಬಿ.ಎಂ.ಶ್ರೀ. ಪ್ರತಿಷ್ಠಾನ: ಗಾಯನ ಸ್ಪರ್ಧೆಗೆ ಅರ್ಜಿ ಆಹ್ವಾನ

• ಉದಯವಾಹಿನಿ, ಬೆಂಗಳೂರು

ಬಿ.ಎಂ.ಶ್ರೀ. ಪ್ರತಿಷ್ಠಾನವು ನಾದಯೋಗಿ ಭೈರವಿ ಕೆಂಪೇಗೌಡ ದತ್ತಿ ಅಶ್ರಯದಲ್ಲಿ 15ರಿಂದ 20 ವರ್ಷದ ಒಳಗಿನವರಿಗೆ ಭೈರವಿ ರಾಗದಲ್ಲಿ ಗಾಯನ ಸ್ಪರ್ಧೆ' ಹಮ್ಮಿಕೊಂಡಿದೆ.ಕೆ. ಮೋಹನ್ ದೇವ್ ಆಳ್ವ ಮತ್ತು ಎಂ.ಕೆ. ಶೈಲಜಾ ಆಳ್ವ ಅವರು ಈ ದತ್ತಿ ಸ್ಥಾಪಿಸಿದ್ದಾರೆ. ಸ್ಪರ್ಧೆಯು ಜೂನ್ 8ರಂದು ನಡೆಯಲಿದೆ. ಪ್ರಥಮ ಬಹುಮಾನ 4 ಸಾವಿರ, ದ್ವಿತೀಯ ಬಹುಮಾನ ರೂ.3 ಸಾವಿರ, ತೃತೀಯ ಬಹುಮಾನ 2 ಸಾವಿರ ನಗದು ಒಳಗೊಂಡಿದೆ. ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ಬಯಸುವವರು ಜೂನ್ 5ರ ಸಂಜೆ 5 ಗಂಟೆಯೊಳಗೆ ಎನ್. ಆರ್. ಕಾಲೊನಿಯಲ್ಲಿರುವ ಬಿ.ಎಂ.ಶ್ರೀ. ಪ್ರತಿಷ್ಠಾನದ ಕಚೇರಿಯಲ್ಲಿ ಹೆಸರು ನೋಂದಾಯಿಸಿಕೊಳ್ಳಬೇಕು. ಅರ್ಜಿಗಳು ಪ್ರತಿಷ್ಠಾನದ ಕಚೇರಿಯಲ್ಲಿ ದೊರೆಯುತ್ತವೆ ಎಂದು ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಹಣ, ಚಿನ್ನ ಪಡೆದು ಪರಾರಿಯಾದ ಪತಿ ಪೊಲೀಸ್ ಠಾಣೆಗೆ ದೂರು ನೀಡಿದ ಪತ್ನಿ

• ಉದಯವಾಹಿನಿ, ಬೆಂಗಳೂರು

ಪ್ರೀತಿಸಿ ಮದುವೆಯಾದ ಬಳಿಕ ಸಂಸಾರಕ್ಕೆ ಹೊಸ ಮನೆ ಮಾಡುವುದಾಗಿ ಹಣ, ಚಿನ್ನ ಪಡೆದು ಪರಾರಿಯಾಗಿರುವ ಪತಿ ವಿರುದ್ಧ ಪಶ್ಚಿಮ ವಿಭಾಗದ ಮಹಿಳಾ ಪೊಲೀಸ್ ಠಾಣೆಗೆ ಪತ್ನಿ ದೂರು ನೀಡಿದ್ದಾರೆ. ಮದುವೆಯಾದ ಮೂರೇ ತಿಂಗಳಿಗೆ ಪತಿ ಹೇಮಂತ್ ತನ್ನನ್ನು ತೊರೆದು ಹೋಗಿದ್ದು, ನ್ಯಾಯ ಕೊಡಿಸುವಂತೆ ಸಂತ್ರಸ್ತೆ ಪೊಲೀಸ್ ಠಾಣೆಯ ಮೆಟ್ಟಿಲೇರಿದ್ದಾರೆ. ಕುಣಿಗಲ್ ಮೂಲದ ಸಂತ್ರಸ್ತೆ, ನಗರದ ಮಾಲ್ ವೊಂದರಲ್ಲಿ ಕೆಲಸ ಮಾಡುವ ವೇಳೆ ಹೇಮಂತ್ ಪರಿಚಯವಾಗಿ ಪರಸ್ಪರ ಪ್ರೀತಿಸಿ ಫೆಬ್ರುವರಿಯಲ್ಲಿ ದೇವಸ್ಥಾನವೊಂದರಲ್ಲಿ ಮದುವೆಯಾಗಿದ್ದರು. ಬಳಿಕ ಸ್ನೇಹಿತನ ಕೊಠಡಿಯಲ್ಲಿ ಇಬ್ಬರೂ ಸಂಸಾರ ನಡೆಸುತ್ತಿದ್ದರು. ಹೊಸ ಮನೆ ಮಾಡುವುದಾಗಿ ಹಣ ಮತ್ತು ಚಿನ್ನ ಪಡೆದಿದ್ದ ಹೇಮಂತ್, ತನ್ನನ್ನು ಗರ್ಭಿಣಿ ಮಾಡಿ ಈಗ ಚಾರಿತ್ರ್ಯ ಸರಿ ಇಲ್ಲ ಎಂದು ದೂರ ಮಾಡಿದ್ದಾನೆ ಎಂದು ಸಂತ್ರಸ್ತೆ ಆರೋಪಿಸಿದ್ದಾರೆ. ಹೇಮಂತ್ ಕುಟುಂಬದವರು ಸಹ ಹಣಕ್ಕಾಗಿ ಕಿರುಕುಳ ನೀಡುತ್ತಿದ್ದಾರೆ. ಪತಿ ಜೊತೆ ಜೀವನ ನಡೆಸಲು ಅವಕಾಶ ಮಾಡಿಕೊಡಬೇಕು ಎಂದು ಮನವಿ ಮಾಡಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

# ಶಿಕ್ಷಣದ ಗುಣಮಟ್ಟ ಸುಧಾರಿಸಲು ಡಿಸಿಎಂ ನೇತೃತ್ವದಲ್ಲಿ ಸಂಪುಟ ಉಪಸಮಿತಿ ರಚನೆ

• ಉದಯವಾಹಿನಿ, ಬೆಂಗಳೂರು

ಕರ್ನಾಟಕದಾದ್ಯಂತದ ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಣದ ಗುಣಮಟ್ಟದ ಒಟ್ಟಾರೆ ಸುಧಾರಣೆಯ ಕುರಿತು ಅಧ್ಯಯನ ಮಾಡಿ ಸಂಪುಟಕ್ಕೆ ವರದಿ ಸಲ್ಲಿಸಲು ರಾಜ್ಯ ಸರ್ಕಾರ ಡಿಕೆಶಿ ಅಧ್ಯಕ್ಷತೆಯಲ್ಲಿ ಸಂಪುಟ ಉಪಸಮಿತಿಯನ್ನು ರಚಿಸಿದೆ ಎಂದು ಉನ್ನತ ಶಿಕ್ಷಣ ಸಚಿವ ಎಂ ಸಿ ಸುಧಾಕರ್ ತಿಳಿಸಿದ್ದಾರೆ.

ಸಂಪುಟ ಉಪಸಮಿತಿ ಈಗಾಗಲೇ ಎರಡು ಸಭೆಗಳನ್ನು ನಡೆಸಿದ್ದು, ಮಾಹಿತಿಯನ್ನು ಸಂಗ್ರಹಿಸುವ ಪ್ರಕ್ರಿಯೆಯು ಪ್ರಗತಿಯಲ್ಲಿದೆ ಎಂದು ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್ ಜೊತೆಗಿನ ವಿಶೇಷ ದೂರವಾಣಿ ಸಂಭಾಷಣೆಯಲ್ಲಿ ತಿಳಿಸಿದ್ದಾರೆ. ಸಮಿತಿಯು ತನ್ನ ವರದಿಯನ್ನು ಸಂಪುಟಕ್ಕೆ ಸಲ್ಲಿಸುವ ಮೊದಲು ಒಂದು ಅಥವಾ ಎರಡು ಸಭೆಗಳನ್ನು ನಡೆಸಬಹುದು ಎಂದು ಅವರು ಹೇಳಿದರು. ಸಮಿತಿಯು ಎಲ್ಲಾ ವಿಶ್ವವಿದ್ಯಾಲಯಗಳ ಪ್ರಸ್ತುತ ಸ್ಥಿತಿಯನ್ನು, ಅವುಗಳ ಹಣಕಾಸು ಶೈಕ್ಷಣಿಕ ಪರಿಸ್ಥಿತಿಗಳು ಮತ್ತು ಬ್ಯಾಕ್‌ಲಾಗ್ , ನಿಯಮಿತ ಹುದ್ದೆಗಳು ಸೇರಿದಂತೆ ಖಾಲಿ ಹುದ್ದೆಗಳ ಬಗ್ಗೆ ಅಧ್ಯಯನ ಮಾಡುತ್ತದೆ. ಕೆಲವು ವಿಶ್ವವಿದ್ಯಾಲಯಗಳಲ್ಲಿ ಹೊಸ ಕೋರ್ಸ್‌ಗಳನ್ನು ಪರಿಚಯಿಸಲಾಗಿದೆ ಮತ್ತು ವಿಶ್ವವಿದ್ಯಾಲಯಗಳಲ್ಲಿನ ಕೆಲವು ಕೋರ್ಸ್‌ಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿದೆ ಎಂದು ಸಚಿವರು ಹೇಳಿದರು. ವಿದ್ಯಾರ್ಥಿಗಳ ಸಂಖ್ಯೆಯ ಆಧಾರದ ಮೇಲೆ ಮಂಜೂರಾದ ಹುದ್ದೆಗಳ ಸಂಖ್ಯೆಯನ್ನು ಕಡಿಮೆ ಮಾಡುವುದನ್ನು, ಹೊಸ ಕೋರ್ಸ್‌ಗಳಿಗೆ ಹೆಚ್ಚಿನ ಹುದ್ದೆಗಳನ್ನು ರಚಿಸುವುದನ್ನು ಸಮಿತಿಯು ಅಧ್ಯಯನ ಮಾಡಬೇಕು. ಪ್ರಸ್ತುತ, ಸರ್ಕಾರಿ ಸ್ವಾಮ್ಯದ ವಿಶ್ವವಿದ್ಯಾಲಯಗಳಲ್ಲಿ ವಿವಿಧ ಹುದ್ದೆಗಳಿಗೆ 3,000 ಹುದ್ದೆಗಳು ಖಾಲಿ ಇವೆ. ಸಂಪುಟ ಉಪಸಮಿತಿಯು ಸಂಪುಟಕ್ಕೆ ಸಮಗ್ರ ವರದಿಯನ್ನು ನೀಡಬೇಕಾಗಿದೆ. ಈ ಉದ್ದೇಶಕ್ಕಾಗಿ, ಹಣಕಾಸು ಇಲಾಖೆಯ ತಜ್ಞರನ್ನು ಸಹ ಸಮಿತಿಯಲ್ಲಿ ಸೇರಿಸಲಾಗಿದೆ.

# ಕಾಂಗ್ರೆಸ್ ಸರ್ಕಾರ ಸರ್ವಾಧಿಕಾರಿಗಿಂತ ಕೆಟ್ಟದಾಗಿ ವರ್ತಿಸುತ್ತಿದೆ

## ಸರ್ಕಾರ ರಾಜ್ಯ ಬಿಜೆಪಿ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡಿದ ನಂತರ ಬಿಜೆಪಿ ನಾಯಕ ಪ್ರಲ್ಹಾದ್ ಜೋಶಿ ಪ್ರತಿಕ್ರಿಯೆ

• ಉದಯವಾಹಿನಿ, ಬೆಂಗಳೂರು

ಕರ್ನಾಟಕದಲ್ಲಿ ಕಾಂಗ್ರೆಸ್ ಜನರ ಧ್ವನಿಯನ್ನು ಅಡಗಿಸುತ್ತಿದೆ. ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಸರ್ವಾಧಿಕಾರಿಗಿಂತಲೂ ಕೆಟ್ಟದಾಗಿ ವರ್ತಿಸುತ್ತಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಆರೋಪಿಸಿದ್ದಾರೆ. ಕರ್ನಾಟಕದ ಕಾಂಗ್ರೆಸ್ ಸರ್ಕಾರ ರಾಜ್ಯ ಬಿಜೆಪಿ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡಿದ ನಂತರ ಬಿಜೆಪಿ ನಾಯಕ ಪ್ರಲ್ಹಾದ್ ಜೋಶಿ ಈ ಪ್ರತಿಕ್ರಿಯೆ ನೀಡಿದ್ದಾರೆ. ರಾಜ್ಯ ಸರ್ಕಾರದ ಎರಡು ವರ್ಷಗಳ ವೈಫಲ್ಯದ ಬಗ್ಗೆ ಚಾರ್ಜ್ ಶೀಟ್ ಎಂಬ ಶೀರ್ಷಿಕೆಯಡಿಯಲ್ಲಿ ದೃಶ್ಯ ಮಾಧ್ಯಮ ಮತ್ತು ಮುದ್ರಣ ಮಾಧ್ಯಮಗಳಲ್ಲಿ ತನ್ನ ಅಭಿಯಾನದ ಮೂಲಕ ಬಿಜೆಪಿ ತಪ್ಪು ಮಾಹಿತಿ, ವಿರೂಪ ಮತ್ತು ಸುಳ್ಳುಗಳಲ್ಲಿ ತೊಡಗಿದೆ ಎಂದು ಕರ್ನಾಟಕ ಸರ್ಕಾರ ತನ್ನ ಅಧಿಕೃತ ಅಧಿಸೂಚನೆಯಲ್ಲಿ ಆರೋಪಿಸಿತ್ತು.

ಕರ್ನಾಟಕದ ವಿರೋಧ ಪಕ್ಷ ಬಿಜೆಪಿ ಈ ಕ್ರಮವನ್ನು ಕರ್ನಾಟಕದಲ್ಲಿ ತುರ್ತು ಪರಿಸ್ಥಿತಿಯ ಎರಡನೇ ಅಧ್ಯಾಯದ ಆರಂಭ ಎಂದು ಟೀಕಿಸಿದೆ. ಕರ್ನಾಟಕದಲ್ಲಿ ಭಿನ್ನಾಭಿಪ್ರಾಯವನ್ನು ಹತ್ತಿಕ್ಕಿದ್ದಕ್ಕಾಗಿ ಬಿಜೆಪಿ ಕಾಂಗ್ರೆಸ್ ಅನ್ನು ಟೀಕಿಸಿದೆ. ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ರಾಜ್ಯ ಸರ್ಕಾರವನ್ನು ಸರ್ವಾಧಿಕಾರಿ ಎಂದು ಕರೆದಿದ್ದಾರೆ. ರಾಜ್ಯ ಬಿಜೆಪಿ ವಿರುದ್ಧ ಮಾನನಷ್ಟ ಮೊಕದ್ದಮೆ



**ವಿರೋಧ ಪಕ್ಷ ಬಿಜೆಪಿ ಈ ಕ್ರಮ**

ಹೂಡಿದ ನಂತರ ಪ್ರಲ್ಹಾದ್ ಜೋಶಿ ಹೇಳಿಕೆ ನೀಡಿದ್ದಾರೆ. ಕಾಂಗ್ರೆಸ್ ಪಕ್ಷ ಸತ್ಯಗಳನ್ನು ತಪ್ಪಾಗಿ ಪ್ರತಿನಿಧಿಸುತ್ತಿದೆ ಎಂದು ಬಿಜೆಪಿ ಆರೋಪಿಸಿದೆ. ಕರ್ನಾಟಕದಲ್ಲಿ ಜನರ ಧ್ವನಿಯನ್ನು ಕಾಂಗ್ರೆಸ್ ಅಡಗಿಸುತ್ತಿದೆ ಎಂದು ಬಿಜೆಪಿ ಇಂದು ಆರೋಪಿಸಿದೆ. ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ರಾಜ್ಯ ಸರ್ಕಾರವು ಸರ್ವಾಧಿಕಾರಿಗಿಂತ ಕೆಟ್ಟದಾಗಿ ವರ್ತಿಸುತ್ತಿದೆ ಎಂದು ಹೇಳಿದ್ದಾರೆ. ಈ ಬಗ್ಗೆ ಎಕ್ಸ್ ಪೋಸ್ಟ್‌ನಲ್ಲಿ ಪ್ರಲ್ಹಾದ್ ಜೋಶಿ, ಕಾಂಗ್ರೆಸ್ ಸರ್ಕಾರ ಟಿವಿ ವಾಹಿನಿಯ ನಿರೂಪಕರನ್ನು ಹೆದರಿಸಲು ಪ್ರಯತ್ನಿಸುತ್ತಿದೆ ಎಂದು ಹೇಳಿಕೊಂಡಿದ್ದು, ಕಾಂಗ್ರೆಸ್ ಪಕ್ಷವನ್ನು ವೈಫಲ್ಯಗಳು, ಭ್ರಷ್ಟಾಚಾರ, ಕರ್ನಾಟಕದ ಆರ್ಥಿಕತೆ ಮತ್ತು ರಾಜಕೀಯಕ್ಕೆ ಆಗಿರುವ ಹಾನಿಯ ಬಗ್ಗೆ ಮಾತನಾಡುವುದು ಏಕೆ ಭಯ ಹುಟ್ಟಿಸುತ್ತದೆ ಎಂದು ಕೇಳಿದೆ. ಒಂದು ಪ್ರಶ್ನೆ ನನ್ನನ್ನು ಕಾಡುತ್ತಿದೆ, ಕರ್ನಾಟಕವು ಹಿಟ್ಲರ್

**ಪೊಲೀಸ್ ಮತ್ತು ಕಾನೂನಿನ ಹೆಸರಿನಲ್ಲಿ ನೀವು ವಿರೋಧ ಪಕ್ಷಗಳನ್ನು ಮೌನಗೊಳಿಸಬಹುದು ಎಂದು ನೀವು ಭಾವಿಸಿದರೆ ಅದು ನಿಮ್ಮ ಮೂರ್ಖತನದ ಪರಮಾವಧಿಯಾಗಿದೆ ಎಂದು ಅವರು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ಕರ್ನಾಟಕದಲ್ಲಿ ತುರ್ತು ಪರಿಸ್ಥಿತಿಯ 2ನೇ ಅಧ್ಯಾಯ ಪ್ರಾರಂಭವಾಗಿದೆ. ಕರ್ನಾಟಕ ಕಾಂಗ್ರೆಸ್ ಸರ್ಕಾರವು ಶೀಘ್ರದಲ್ಲೇ ಪ್ರಜಾಪ್ರಭುತ್ವ, ಕರ್ನಾಟಕದ ಜನರು, ವಿರೋಧ ಪಕ್ಷಗಳು ಮತ್ತು ಮಾಧ್ಯಮಗಳು ಅದನ್ನು ಹಿಮ್ಮೆಟ್ಟಿಸುವ ಶಕ್ತಿಯನ್ನು ಹೊಂದಿವೆ ಎಂದು ನೋಡುತ್ತದೆ ಎಂದು ಅವರು ಹೇಳಿದ್ದಾರೆ.**

ಕಾಲದಂತೆ ಸರ್ವಾಧಿಕಾರವಾಗಿ ಮಾರ್ಪಟ್ಟಿದೆಯೇ ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಪ್ರಶ್ನಿಸಿದ್ದಾರೆ. ಸಂವಿಧಾನ, ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ವಿಚಾರಗಳನ್ನು ಅನುಸರಿಸುವುದಾಗಿ ಹೇಳಿಕೊಳ್ಳುವ ಕಾಂಗ್ರೆಸ್ ಸರ್ಕಾರ ಯಾವುದೇ ಸರ್ವಾಧಿಕಾರಿಗಿಂತ ಕೆಟ್ಟದಾಗಿ ವರ್ತಿಸುತ್ತಿದೆ ಎಂದು ಅವರು ಆರೋಪಿಸಿದ್ದಾರೆ. ಸಿದ್ದರಾಮಯ್ಯನವರೇ, ಜನರ ಧ್ವನಿಯನ್ನು


**ಬಿಜೆಪಿ ನಾಯಕ ಬಿ.ವೈ. ವಿಜಯೇಂದ್ರ ವಿರೋಧ ಪಕ್ಷಗಳನ್ನು ಮೌನಗೊಳಿಸುವುದರ ವಿರುದ್ಧ ಎಚ್ಚರಿಕೆ ನೀಡಿದ್ದಾರೆ. ಮೋದಿ ಸರ್ಕಾರದ 11ನೇ ವಾರ್ಷಿಕೋತ್ಸವವನ್ನು ಕಾಂಗ್ರೆಸ್ ಟೀಕಿಸಿತ್ತು. ಮೋದಿ ಸರ್ಕಾರದಿಂದ ಜನರು ತೊಂದರೆಗೀಡಾಗಿದ್ದಾರೆ ಎಂದು ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ.**

ಅಡಗಿಸುವುದು ಸಂವಿಧಾನದ ಭಾಗವೇ ನೀವು ಮತ್ತು ಡಿಕೆಶಿ ಟೀಕೆಗಳನ್ನು ಕೇಳಲು ಏಕೆ ಹೆದರುತ್ತೀರಿ ನಿಮ್ಮ ವೈಫಲ್ಯಗಳು, ಭ್ರಷ್ಟಾಚಾರ ಮತ್ತು ಕರ್ನಾಟಕದ ಆರ್ಥಿಕತೆ, ರಾಜಕೀಯಕ್ಕಾದ ಹಾನಿಯ ಬಗ್ಗೆ ಮಾತನಾಡುವುದು ನಿಮ್ಮನ್ನು ಏಕೆ ಹೆದರಿಸುತ್ತದೆ ಎಂದು ಕರ್ನಾಟಕದ ಧಾರವಾಡ ಲೋಕಸಭಾ ಕ್ಷೇತ್ರದ ಸಂಸದ, ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಪ್ರಶ್ನಿಸಿದ್ದಾರೆ. ನೀವು ಅಧಿಕಾರಕ್ಕೆ ಅಂಟಿಕೊಳ್ಳಲು ಪ್ರಯತ್ನಿಸುತ್ತಿರುವಂತೆ ತೋರುತ್ತಿದೆ. ನಿಮ್ಮ ಹತಾಶೆಯನ್ನು ನಾವು ನೋಡುತ್ತೇವೆ. ಆದರೆ, ಕರ್ನಾಟಕವು ಈ ಸರ್ವಾಧಿಕಾರದಂತಹ ವರ್ತನೆ ಅಥವಾ ಮೊಘಲ್ ಶೈಲಿಯ ಆಡಳಿತವನ್ನು ಎಂದಿಗೂ ಒಪ್ಪುವುದಿಲ್ಲ ಎಂದು ಪ್ರಲ್ಹಾದ್ ಜೋಶಿ ಹೇಳಿದ್ದಾರೆ.

# ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ನಗದು, ಚಾಕು ಪತ್ತೆ

• ಉದಯವಾಹಿನಿ, ಬೆಂಗಳೂರು

ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ನಡೆಸಿದ ಶೋಧದ ದಾಳಿ ವೇಳೆ ನಗದು, ಚಾಕು ಮತ್ತು ಮೊಬೈಲ್ ಪತ್ತೆಗೆ ಸಂಬಂಧಿಸಿದಂತೆ ಜೈಲು ಮತ್ತು ಕರ್ನಾಟಕ ಕೈಗಾರಿಕಾ ಭದ್ರತಾ ಪಡೆ (ಕೆಎಸ್‌ಐಎಸ್‌ಎಫ್) ಅಧಿಕಾರಿ ಹಾಗೂ ಸಿಬ್ಬಂದಿಯ ವಿಚಾರಣೆ ನಡೆಸಲು ಆಗ್ನೇಯ ವಿಭಾಗದ ಪೊಲೀಸರು ಸಿದ್ಧತೆ ನಡೆಸಿದ್ದಾರೆ.ಕೈದಿಗಳು ಮೊಬೈಲ್, ಸೇರಿದಂತೆ ನಿಷೇಧಿತ ವಸ್ತುಗಳನ್ನು ಬಳಸುತ್ತಿರುವುದು ದಾಳಿ ವೇಳೆ ಪತ್ತೆಯಾಗಿತ್ತು. ಇದಕ್ಕೆ ಸಿಬ್ಬಂದಿ ಹಾಗೂ ಅಧಿಕಾರಿಗಳ ಲೋಪವೇ ಕಾರಣ ಎಂಬುದು ಮೇಲ್ನೋಟಕ್ಕೆ ಗೊತ್ತಾಗಿದೆ ಎಂದು ಮೂಲಗಳು ತಿಳಿಸಿವೆ.ಅಗ್ನಿಯ ವಿಭಾಗದ ಹುಳಿಮಾವು, ಬಂಡೆಪಾಳ್ಯ, ಬೇಗೂರು. ಎಲೆಕ್ಟ್ರಾನಿಕ್ ಸಿಟಿ ಹಾಗೂ ಪರಪ್ಪನ ಅಗ್ರಹಾರ ಠಾಣೆ ಇನ್‌ಸ್ಪೆಕ್ಟರ್‌ಗಳು ಮತ್ತು ಸಿಬ್ಬಂದಿ ಸೇರಿ 175 ಮಂದಿಯ ತಂಡ ದಾಳಿ ನಡೆಸಿತ್ತು. ಕೈದಿಗಳ ಬ್ಯಾರಕ್‌ಗಳಲ್ಲಿ 16 ಸಾವಿರ ನಗದು, ಒಂದು ಮೊಬೈಲ್, ಒಂದು ಇಂಡಕ್ಷನ್ ಹಾಗೂ ನಾಲ್ಕು ಚಾಕುಗಳು ಪತ್ತೆಯಾಗಿದ್ದವು. ಜೈಲಿನ



ಸಿಬ್ಬಂದಿ ಹಾಗೂ ಕೆಎಸ್‌ಐಎಸ್‌ಎಫ್ ಅಧಿಕಾರಿಗಳು ಕೈದಿಗಳೊಂದಿಗೆ ಶಾಮೀಲಾಗಿರುವ ಕಾರಣ ನಿಷೇಧಿತ ವಸ್ತುಗಳು ಬಳಕೆಯಾಗುತ್ತಿವೆ ಎಂದು ಪೊಲೀಸರು ಆರೋಪಿಸಿದ್ದಾರೆ. ದಾಳಿ ಸಂಬಂಧ ಎಲೆಕ್ಟ್ರಾನಿಕ್ ಸಿಟಿ ಉಪ ವಿಭಾಗದ ಎಸಿಪಿ ಕೆ.ಎಂ.ಸತೀಶ್ ನೀಡಿರುವ ದೂರಿನ ಮೇರೆಗೆ ಪರಪ್ಪನ ಅಗ್ರಹಾರ ಠಾಣೆಯಲ್ಲಿ ಜೈಲು ಸಿಬ್ಬಂದಿ ಹಾಗೂ ಕೆಎಸ್‌ಐಎಫ್ ಅಧಿಕಾರಿಗಳ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಪ್ರಕರಣದಲ್ಲಿ ಕೈದಿಗಳಾದ ಚಲುವ, ಇರ್ಷಾದ್, ಆಕಾಶ್ ಹಾಗೂ ಮಾರುತಿ ಅವರನ್ನು ಸಹ ಆರೋಪಿಗಳನ್ನಾಗಿ ಪರಿಗಣಿಸಲಾಗಿದೆ. ಜೈಲಿನಲ್ಲಿ ನಿಷೇಧಿತ ವಸ್ತುಗಳ

**ಜೈಲಿನಲ್ಲಿ ಹೊಡೆದಾಟ ಪ್ರಕರಣ ದಾಖಲಾಗಿತ್ತು. ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಜೈಲಿನಲ್ಲಿ ಶೋಧ ನಡೆಸಲಾಗಿದೆ. ನಗದು, ಮೊಬೈಲ್ ಪತ್ತೆಯಾಗಿರುವ ಸಂಬಂಧ ಪ್ರಕರಣ ದಾಖಲಾಗಿದ್ದು, ತನಿಖೆ ಕೈಗೊಳ್ಳಲಾಗಿದೆ ಎಂದು ಆಗ್ನೇಯ ವಿಭಾಗದ ಡಿಸಿಪಿ ಸಾರಾ ಫಾತಿಮಾ ತಿಳಿಸಿದರು.**

ಬಳಕೆಗೆ ಜೈಲು ಅಧಿಕಾರಿಗಳು ಅವಕಾಶ ಕಲ್ಪಿಸಿರುವುದು ಕಾನೂನು ಬಾಹಿರ.

ಈ ನಿಟ್ಟಿನಲ್ಲಿ ಅಧಿಕಾರಿಗಳ ವಿರುದ್ಧವೂ ಪ್ರಕರಣ ದಾಖಲಿಸಲಾಗಿದೆ. ಸಂಬಂಧ ತನಿಖೆ ಚುರುಕುಗೊಂಡಿದ್ದು, ಕರ್ತವ್ಯಲೋಪವೆಸಗಿರುವ ಅಧಿಕಾರಿ, ಸಿಬ್ಬಂದಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಲಾಗುವುದು. ಕೈದಿಗಳಿಂದಲೂ ಮಾಹಿತಿ ಸಂಗ್ರಹಿಸಲಾಗುವುದು ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

# ಲಕ್ಷಾಂತರ ಮೌಲ್ಯದ ಚಿನ್ನಾಭರಣ ದೋಚಿ ಹಂತಕ ಎಸ್ಕೇಪ್

• ಉದಯವಾಹಿನಿ, ಬೆಂಗಳೂರು

ಮಹಿಳೆಯನ್ನು ಹತ್ಯೆಗೈದು ಲಕ್ಷಾಂತರ ಮೌಲ್ಯದ ಚಿನ್ನಾಭರಣದೊಂದಿಗೆ ಹಂತಕ ಎಸ್ಕೇಪ್ ಆದ ಘಟನೆ ಬೆಂಗಳೂರಿನ ಕಾಟನ್ ಪೇಟೆ ದರ್ಗಾ ರಸ್ತೆಯಲ್ಲಿ ನಡೆದಿದೆ. ಲತಾ (40) ಕೊಲೆಯಾದ ಮಹಿಳೆ. ಲತಾ ಪತಿ ಹೋಲ್‌ಸೇಲ್ ಬಟ್ಟೆ ವ್ಯಾಪಾರಿಯಾಗಿ ಕೆಲಸ ಮಾಡುತ್ತಿದ್ದರು.



ಮನೆಯಲ್ಲಿ ಯಾರು ಇಲ್ಲದ ವೇಳೆ ಹತ್ಯೆ ನಡೆದಿದ್ದು, ಕೊಲೆ ಬಳಿಕ ಲಕ್ಷಾಂತರ ಮೌಲ್ಯದ ಚಿನ್ನಭರಣ ದೋಚಿ ಹಂತಕ ಪರಾರಿಯಾಗಿದ್ದಾನೆ. ಮಗಳು ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದು, ಮಗ ಶಾಲೆಗೆ ಹೋಗಿದ್ದ. ಮನೆಯಲ್ಲಿ ಲತಾ ಒಬ್ಬಳೇ ಇದ್ದ ವೇಳೆ ಕೊಲೆ ನಡೆದಿದೆ. ಮಧ್ಯಾಹ್ನ ಪತಿ ಪ್ರಕಾಶ್ ಮನೆಗೆ ಬಂದ ವೇಳೆ ಕೊಲೆಯಾಗಿರೋದು ಬೆಳಕಿಗೆ ಬಂದಿದೆ. ಮಗಳ ಮದುವೆಗೆ ಎಂದು ಲತಾ ಕುಟುಂಬ ಹಂತ ಹಂತವಾಗಿ ಚಿನ್ನಾಭರಣ ಖರೀದಿ ಮಾಡಿತ್ತು. ಕೊಲೆ ಬಳಿಕ ಹಂತಕ ಈ ಚಿನ್ನಾಭರಣ ಸಹಿತ ಅಲ್ಲಿಂದ ಕಾಲ್ಕಿತ್ತಿದ್ದಾನೆ. ಉಸಿರುಗಟ್ಟಿಸಿ ಕೊಲೆ ಮಾಡಿರುವ ಶಂಕೆ ವ್ಯಕ್ತವಾಗಿದೆ. ಕಾಟನ್ ಪೇಟೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಕಾಟನ್ ಪೇಟೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ

# ಭಾರತದಲ್ಲಿ ಶೇ 23ರಷ್ಟು ಶಾಲಾ ಮಕ್ಕಳಲ್ಲಿ ಸಮೀಪದೃಷ್ಟಿ ಸಮಸ್ಯೆ

• ಉದಯವಾಹಿನಿ, ಬೆಂಗಳೂರು

ಭಾರತದಲ್ಲಿ ಶೇ 23ರಷ್ಟು ಶಾಲಾ ಮಕ್ಕಳು ಸಮೀಪದೃಷ್ಟಿ ಸಮಸ್ಯೆಯಿಂದ ಬಳಲುತ್ತಿದ್ದಾರೆ. 2050ರ ವೇಳೆಗೆ ಇದು ಶೇ 53 ತಲುಪುವ ಸಾಧ್ಯತೆ ಇದೆ ಎಂದು ಭಾರತದ ಸಮುದಾಯ ನೇತ್ರಶಾಸ್ತ್ರಜ್ಞರ ಸಂಘ (ಎಸಿಒಐಎನ್) ತಿಳಿಸಿದೆ.ಮಕ್ಕಳಿಗೆ ತಮಗೆ ದೃಷ್ಟಿ ಸಮಸ್ಯೆ ಇದೆ ಎಂಬುದು ತಿಳಿದಿರುವುದಿಲ್ಲ. ಮಗುವಿಗೆ ಶಾಲೆಯಲ್ಲಿ ಓದಲು ಕಷ್ಟವಾದ ಮೇಲೆ ಪೋಷಕರಿಗೆ ಗೊತ್ತಾಗುತ್ತದೆ. ನಗರ ಪ್ರದೇಶಗಳಲ್ಲಿ ಮಕ್ಕಳಲ್ಲಿ ಸಮೀಪದೃಷ್ಟಿ ಹೆಚ್ಚಾಗುತ್ತಿದೆ ಎಂದು ಸಮೀಪದೃಷ್ಟಿ ಜಾಗೃತಿ ವಾರ ಆಚರಣೆಯಲ್ಲಿ ನೇತ್ರ ತಜ್ಞರು ತಿಳಿಸಿದ್ದಾರೆ.

ರಾಜೀವ್ ಗಾಂಧಿ ಆರೋಗ್ಯ ಮತ್ತು ವಿಜ್ಞಾನ ವಿಶ್ವವಿದ್ಯಾಲಯದ



ಉದಯವಾಹಿನಿ ಚಿತ್ರ

ಜರ್ನಲ್ ಅಧ್ಯಯನದ ಪ್ರಕಾರ, 'ಗ್ರಾಮೀಣ ಪ್ರದೇಶಕ್ಕಿಂತ ನಗರಗಳಲ್ಲಿ ದೃಷ್ಟಿ ದೋಷ ಹೆಚ್ಚಿದೆ. ಬೆಂಗಳೂರಿನ ನಗರದಲ್ಲಿ 5ವರ್ಷದಿಂದ 8 ವರ್ಷ ವಯಸ್ಸಿನ ಮಕ್ಕಳಲ್ಲಿ ಸುಮಾರು ಶೇ 13, 9-15 ವಯೋಮಾನದವರಲ್ಲಿ ಶೇ 40 ಕ್ಕಿಂತ ಹೆಚ್ಚು ಮಕ್ಕಳು ಸಮೀಪ ದೃಷ್ಟಿಯಿಂದ ಬಳಲುತ್ತಿದ್ದಾರೆ' ಎಂದು ನೇತ್ರತಜ್ಞರು ಮಾಹಿತಿ ನಿಡಿದ್ದಾರೆ.

ಸ್ಮಾರ್ಟ್‌ಫೋನ್, ಟ್ಯಾಬ್ಲೆಟ್‌ಗಳ ಪರದೆ ನೋಡುವುದರಲ್ಲಿ ಹೆಚ್ಚು ಸಮಯ ಕಳೆಯುವುದು, ಹೊರಾಂಗಣ ಆಟದಲ್ಲಿ ಕಡಿಮೆ ತೊಡಗಿಕೊಂಡಿರುವುದು ಇದಕ್ಕೆ ಮುಖ್ಯ ಕಾರಣ ಎಂದು ನೇತ್ರಧಾಮ ಸೂಪರ್ ಸ್ಪೆಷಾಲಿಟಿ ಕಣ್ಣಿನ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕಿ ಡಾ. ಸವಿತಾ ಅರುಣ್ ತಿಳಿಸಿದರು.

ಮಗು ತುಂಬಾ ಹತ್ತಿರದಿಂದ ಟಿ.ವಿ ನೋಡಲು ಪ್ರಾರಂಭಿಸಿದಾಗ, ಪುಸ್ತಕಗಳನ್ನು ಕಣ್ಣಿಗೆ ಹತ್ತಿರ ಹಿಡಿದಿಟ್ಟುಕೊಂಡು ಓದುವಾಗ, ಶಾಲೆಯಲ್ಲಿ ಬೋರ್ಡ್ ಮೇಲೆ ಬರೆದಿದ್ದು ಕಾಣಿಸುತ್ತಿಲ್ಲ ಎಂದು ದೂರಿದಾಗ ಮಾತ್ರ ಸಮೀಪ ದೃಷ್ಟಿಯ ಚಿಹ್ನೆಗಳನ್ನು ಪೋಷಕರು ಗಮನಿಸುತ್ತಾರೆ. ಮಗುವಿಗೆ ಸಮಸ್ಯೆ ಆರಂಭವಾದಾಗಲೇ ಪತ್ತೆ ಹಚ್ಚಿದರೆ ಪರಿಹಾರ ಕಂಡುಕೊಳ್ಳುವುದು ಸುಲಭ ಎಂದು ಅವರು ಮಾಹಿತಿ ನೀಡಿದರು.

# ಬಾಕಿ ಹಣ ಬಿಡುಗಡೆಗೆ ಕೇಂದ್ರಕೆ ಪ್ರಿಯಾಂಕ್ ಖರ್ಗೆ ಪತ್ರ

• ಉದಯವಾಹಿನಿ, ಬೆಂಗಳೂರು

ಕರ್ನಾಟಕದಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ವೇತನ ಪಾವತಿಸಲು, ಸಾಮಾಗ್ರಿ ಖರೀದಿ ಮತ್ತಿತರ ವೆಚ್ಚ ಭರಿಸಲು ಬಾಕಿ ಇರುವ ಹಣವನ್ನು ಬಿಡುಗಡೆ ಮಾಡಬೇಕು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರು ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರಿಗೆ ಪತ್ರ ಬರೆದಿದ್ದಾರೆ.

ಲಕ್ಷಗಟ್ಟಲೆ ಗ್ರಾಮೀಣ ಕಾರ್ಮಿಕರ ಜೀವನೋಪಾಯದ ಭದ್ರತೆ ಖಾತ್ರಿ ಮಾತ್ರವಲ್ಲದೆ, ಆಡಳಿತಾತ್ಮಕ ದಕ್ಷತೆ ಮತ್ತು ಮಹತ್ವದ ರಾಷ್ಟ್ರೀಯ ಕಾರ್ಯಕ್ರಮದಲ್ಲಿ ನಂಬಿಕೆ ಉಳಿಸಿಕೊಳ್ಳಲು ಸಮಯೋಚಿತ ಬಾಕಿ ವಿತರಣೆ ಅತ್ಯಗತ್ಯ ಎಂದು ಪತ್ರದಲ್ಲಿ ಅವರು ತಿಳಿಸಿದ್ದಾರೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ಯಾವುದೇ ಸಾಮಾಗ್ರಿ ನಿಧಿ ಬಿಡುಗಡೆ ಮಾಡಿಲ್ಲ. ಇದರಿಂದಾಗಿ ರೂ.



787.20 ಕೋಟಿ ಬಿಲ್ ಬಾಕಿ ಉಳಿದಿದೆ. ಹೆಚ್ಚುವರಿಯಾಗಿ, ಸುಮಾರು ರೂ. 600 ಕೋಟಿ ರೂ.ಗಳ ವೇತನ ಬಾಧ್ಯತೆಗಳು ಬಾಕಿ ಉಳಿದಿವೆ ಎಂದು ಅವರು ಮಾಹಿತಿ ನೀಡಿದ್ದಾರೆ. MGN-REGS ಯೋಜನೆಯಡಿ ಅನುದಾನ ಬಿಡುಗಡೆಯಲ್ಲಿ ನಿರಂತರ ವಿಳಂಬದ ಬಗ್ಗೆ ಕಳವಳ ವ್ಯಕ್ತಪಡಿಸಿದ ಖರ್ಗೆ, ಗ್ರಾಮೀಣಾಭಿವೃದ್ಧಿ ಕಮಿಷನರೇಟ್ ಎಲ್ಲಾ ಅಗತ್ಯ ಪ್ರಮಾಣಪತ್ರಗಳು ಮತ್ತು ಪೂರಕ ದಾಖಲೆಗಳನ್ನು ಗ್ರಾಮೀಣಾಭಿವೃದ್ಧಿ ಸಚಿವಾಲಯಕ್ಕೆ ಸಲ್ಲಿಸಿದೆ ಎಂದು ತಿಳಿಸಿದ್ದಾರೆ ಪ್ರಿಯಾಂಕ್ ಖರ್ಗೆ ಪ್ರಕಾರ, ಡಿಸೆಂಬರ್ 2024 ರಿಂದ ಕ್ಷೇತ್ರ ಮಟ್ಟದ ಸಿಬ್ಬಂದಿ ಮತ್ತು ಕಾರ್ಯನಿರ್ವಾಹಕರ ವೇತನವನ್ನು ಪಾವತಿಸಲಾಗಿಲ್ಲ. ಈ ವಿಳಂಬವು ಕಾರ್ಯಾಚರಣೆ, ಮೇಲ್ವಿಚಾರಣೆ ಮತ್ತು ಯೋಜನೆಯ ಅನುಷ್ಠಾನದ ಮೇಲೆ ತೀವ್ರ ಪರಿಣಾಮ ಬೀರುತ್ತಿದೆ ಎಂದು ಅವರು ಹೇಳಿದ್ದಾರೆ.

# ಶೌಚಾಲಯ ಬಳಕೆಗೆ ಶುಲ್ಕ, ಪ್ರಯಾಣಿಕರ ಪ್ರತಿಭಟನೆ!

• ಉದಯವಾಹಿನಿ, ಬೆಂಗಳೂರು

ನಗರದ ಮೆಟ್ರೋ ನಿಲ್ದಾಣಗಳಲ್ಲಿ ಶೌಚಾಲಯ ಬಳಕೆಗೆ ಪ್ರಯಾಣಿಕರಿಂದ ಶುಲ್ಕ ವಸೂಲಿ ಮಾಡುತ್ತಿರುವುದರ ಹಿನ್ನೆಲೆಯಲ್ಲಿ ಬೆಂಗಳೂರು ಮೂಲದ ವಕೀಲರು ಹಾಗೂ ಕಾರ್ಯಕರ್ತೆಯರ ನೇತೃತ್ವದಲ್ಲಿ ನಮ್ಮ ಮೆಟ್ರೋ ಪ್ರಯಾಣಿಕರು ಸೋಮವಾರ ಹೈಕೋರ್ಟ್ ಮೆಟ್ರೋ ನಿಲ್ದಾಣದ ಬಳಿ ಪ್ರತಿಭಟನೆ ನಡೆಸಿದರು. ಬೆಂಗಳೂರು ಮೆಟ್ರೋ ರೈಲು ಕಾರ್ಪೊರೇಷನ್ ಲಿಮಿಟೆಡ್ 12 ನಿಲ್ದಾಣಗಳಲ್ಲಿನ ಶೌಚಾಲಯಗಳ ನಿರ್ವಹಣೆಯನ್ನು ಸುಲಭ್ ಇಂಟರ್‌ನ್ಯಾಶನಲ್‌ಗೆ ಹೊರಗುತ್ತಿಗೆ ನೀಡಿದ್ದು, ಇದೀಗ ಬಳಕೆದಾರರಿಂದ ಮೂತ್ರ ವಿಸರ್ಜನೆಗೆ ರೂ. 2, ಶೌಚಾಲಯಕ್ಕೆ 5 ರೂ. ವಸೂಲಿ ಮಾಡಲಾಗುತ್ತಿದೆ. ಇತ್ತೀಚಿನ ಶೇ. 71 ರಷ್ಟು ಮೆಟ್ರೋ ಪ್ರಯಾಣ ದರ ಹೆಚ್ಚಳದ ನಂತರ ಇದೀಗ ಶೌಚಾಲಯ ಬಳಕೆಗೆ ಶುಲ್ಕ ವಿಧಿಸಿರುವುದು ದೈನಂದಿನ ಪ್ರಯಾಣಿಕರಿಗೆ ಹೊರೆಯಾಗಿದ್ದು, ಶೌಚಾಲಯದಂತಹ ಮೂಲಭೂತ



ಉದಯವಾಹಿನಿ ಚಿತ್ರ

ಸೌಕರ್ಯಗಳು ಉಚಿತವಾಗಿರಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದ್ದಾರೆ.

ಶೌಚಾಲಯ ಬಳಕೆಗೆ ಶುಲ್ಕ ವಿಧಿಸಿರುವುದು ಹೆಚ್ಚುವರಿ ಹೊರೆಯಾಗಲಿದೆ. ಶುದ್ಧ ಶೌಚಾಲಯಗಳು ಕುಡಿಯುವ ನೀರು ಮೂಲಭೂತ ಅವಶ್ಯಕತೆಗಳಾಗಿವೆ, ಪ್ರೀಮಿಯಂ ಸೇವೆಗಳಲ್ಲ ಎಂದು 2015 ರಿಂದ ಮೆಟ್ರೋದಲ್ಲಿ ಉಚಿತ ಮೂಲ ಸೌಕರ್ಯಕ್ಕಾಗಿ ಹೋರಾಟ ನಡೆಸುತ್ತಿರುವ ಟಿ ನರಸಿಂಹ ಮೂರ್ತಿ ಹೇಳಿದರು.

ಈ ಕುರಿತ ಕ್ರಿಮಿನಲ್ ಮೊಕದ್ದಮೆಯ ವಿಚಾರಣೆ ಇನ್ನೂ 8ನೇ ಹೆಚ್ಚುವರಿ ಮುಖ್ಯ

**2015ರ ಮೇ 1ರಂದು ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೇಂದ್ರ ನಗರಾಭಿವೃದ್ಧಿ, ವಸತಿ ಮತ್ತು ನಗರ ಬಡತನ ನಿರ್ಮೂಲನೆ ಸಚಿವರಾಗಿದ್ದ ಎಂ.ವೆಂಕಯ್ಯ ನಾಯ್ಡು ಅವರು ನಾಗಸಂದ್ರ ಮೆಟ್ರೊ ನಿಲ್ದಾಣದ ಉದ್ಘಾಟನೆ ಸಂದರ್ಭದಲ್ಲಿಯೇ ಈ ಬೇಡಿಕೆ ಎತ್ತಿದ್ದೆ. ಈ ಸಂದರ್ಭದಲ್ಲಿ ನನ್ನನ್ನು ಬಂಧಿಸಲಾಗಿತ್ತು ಎಂದು ಅವರು ತಿಳಿಸಿದರು.**

ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ಮುಂದೆ ಬಾಕಿ ಉಳಿದಿದ್ದು, ಮುಂದಿನ ವಿಚಾರಣೆಯನ್ನು ಜೂನ್ 17 ಕ್ಕೆ ನಿಗದಿಪಡಿಸಲಾಗಿದೆ. BMRCL ವಿರುದ್ಧ ಲೋಕಾಯುಕ್ತಕ್ಕೆ ಪ್ರತ್ಯೇಕ ದೂರು ಸಲ್ಲಿಸಿದ್ದೇನೆ ಎಂದು ಅವರು ತಿಳಿಸಿದರು.

# ಕಂಟೋನ್ಮೆಂಟ್ ರೈಲು ನಿಲ್ದಾಣದಲ್ಲಿ ನಿರ್ಮಾಣ ಕಾಮಗಾರಿ

## ಕೇರಳದಿಂದ ತನ್ನ ವೃದ್ಧ ಪೋಷಕರೊಂದಿಗೆ ನಿಲ್ದಾಣಕ್ಕೆ ಬಂದ ಪ್ರಯಾಣಿಕ ಅನಿಲ್ ಕುಮಾರ್ ಹೇಳಿಕೆ

• ಉದಯವಾಹಿನಿ, ಬೆಂಗಳೂರು

ಬೆಂಗಳೂರು ಕಂಟೋನ್ಮೆಂಟ್ ರೈಲು ನಿಲ್ದಾಣದಲ್ಲಿ ಬೃಹತ್ ಕಾಮಗಾರಿ ನಡೆಯುತ್ತಿರುವುದರಿಂದ ಮಿಲ್ಲರ್ಸ್ ರಸ್ತೆ ಹಾಗೂ ವಸಂತನಗರ ಕಡೆಯಿಂದ ಬರುವ ಪ್ರಯಾಣಿಕರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ದುಪ್ಪಟ್ಟು ಹಣ ಪೀಕುವ ಆಟೋ ಚಾಲಕರು ಮತ್ತು ಮೂಲಭೂತ ಸೌಕರ್ಯಗಳ ಕೊರತೆಯಿಂದ ನಿಲ್ದಾಣ ಅನೇಕರಿಗೆ, ವಿಶೇಷವಾಗಿ ಹಿರಿಯ ನಾಗರಿಕರು ಮತ್ತು ಹೊರಗಡೆಯಿಂದ ಬರುವ ಪ್ರಯಾಣಿಕರಿಗೆ ದುಃಸ್ವಪ್ನವಾಗಿ ಮಾರ್ಪಟ್ಟಿದೆ.

**ಪ್ರಯಾಣಿಕರನ್ನು ಇಳಿಸಿ, ಹಾಗೆಯೇ ತೆರಳುವ ಆಟೋ ಚಾಲಕರು:** ನಿರ್ಮಾಣ ಕಾಮಗಾರಿಯಿಂದಾಗಿ ಮುಖ್ಯ ಪ್ರವೇಶ ದ್ವಾರವನ್ನು ನಿರ್ಬಂಧಿಸಲಾಗಿದೆ. ಇದರಿಂದಾಗಿ ಹೆಚ್ಚಿನ ಆಟೋ ಮತ್ತು ಕ್ಯಾಬ್ ಚಾಲಕರು ಈಗ ರೈಲುಗಳು ಮಿಲ್ಲರ್ಸ್ ರಸ್ತೆಯ ಕಡೆಯಿಂದ ಕಾರ್ಯನಿರ್ವಹಿಸುತ್ತವೆ ಅಂತಾ ಹೇಳಿ ಪ್ರಯಾಣಿಕರನ್ನು ಹಿಂಬದಿಯ ಗೇಟ್‌ನಲ್ಲಿ ಇಳಿಸುತ್ತಿವೆ. ಆದರೆ ಇಲ್ಲಿಯೂ ಕಾಮಗಾರಿ ನಡೆಯುತ್ತಿದ್ದು, ಪ್ಲಾಟ್ ಫಾರಂಗೆ ಸರಿಯಾಗಿ ತೆರಳಲು ಸಾಧ್ಯವಾಗುತ್ತಿಲ್ಲ. ಆಟೋ ಚಾಲಕರು



ಉದಯವಾಹಿನಿ ಚಿತ್ರ

**ತುರ್ತಾಗಿ ತಾತ್ಕಾಲಿಕ ಪರಿಹಾರಕ್ಕೆ ಒತ್ತಾಯ**

ಪ್ರಯಾಣಿಕರನ್ನು ಇಳಿಸಿ, ಹಾಗೆಯೇ ಹೊರಡುತ್ತಾರೆ.

ಹೀಗಾಗಿ ಅನೇಕರು - ವಿಶೇಷವಾಗಿ ನಿಲ್ದಾಣದ ಬಗ್ಗೆ ಗೊತ್ತಿಲ್ಲದವರು ಸರಿಯಾದ ದಾರಿ ತಿಳಿಯದೆ ತೀವ್ರವಾಗಿ ಪರದಾಡುವಂತಾಗಿದೆ.

ಭಾರವಾದ ಲಗೇಜ್‌ಗಳು, ವೃದ್ದರು ಅಥವಾ ಮಕ್ಕಳೊಂದಿಗೆ ಬಂದಿರುವ ಪ್ರಯಾಣಿಕರು ಯಾವುದೇ ನೆರವು ಅಥವಾ ಮಾರ್ಗದರ್ಶನ ಸಿಗದೆ ಹೆಣಗಾಡುವಂತಾಗಿದೆ.

**ತುರ್ತಾಗಿ ತಾತ್ಕಾಲಿಕ ಪರಿಹಾರಕ್ಕೆ ಒತ್ತಾಯ:** ಈ ಸಂಬಂಧ ರೈಲ್‌ಮದಾದ್ ಮೂಲಕ ಮೊದಲು ದೂರನ್ನು ಕಳುಹಿಸಲಾಗಿದೆ. ಆದರೆ ಸರಿಯಾದ ಪ್ರತಿಕ್ರಿಯೆ ಬಾರದ ಹಿನ್ನೆಲೆಯಲ್ಲಿ ತುರ್ತಾಗಿ ತಾತ್ಕಾಲಿಕ ಪರಿಹಾರಕ್ಕೆ ಒತ್ತಾಯಿಸಿ

**ಪ್ಲಾಟ್‌ಫಾರ್ಮ್ 1 ಮತ್ತು 2 ಎರಡೂ ಕಳಪೆ ಸ್ಥಿತಿಯಲ್ಲಿವೆ. ಎರಡೂ ಬದಿಯ ಕಟ್ಟಡಗಳನ್ನು ಕೆಡವಲಾಗಿದೆ. ಸಂಪೂರ್ಣ ವಾಕ್‌ವೇಗೆ ಯಾವುದೇ ಮೇಲ್ಛಾವಣಿ ಇಲ್ಲ. ಅಲ್ಲಿ ಯಾವುದೇ ಕುರ್ಚಿಗಳಿಲ್ಲ. ವೃದ್ಧರು ಪ್ರತಿದಿನ ತಾಸುಗಟ್ಟಲೇ ತುಂಬಾ ಕಷ್ಟಪಡುತ್ತಾರೆ ಎಂದು ಇತ್ತೀಚಿಗೆ ಕೇರಳದಿಂದ ತನ್ನ ವೃದ್ಧ ಪೋಷಕರೊಂದಿಗೆ ನಿಲ್ದಾಣಕ್ಕೆ ಬಂದ ಪ್ರಯಾಣಿಕ ಅನಿಲ್ ಕುಮಾರ್ ಹೇಳಿದರು.**

ರೈಲ್ವೇ ಮಂಡಳಿಗೆ ಎರಡನೇ ದೂರನ್ನು ಕಳುಹಿಸಲಾಗಿದೆ ಎಂದು ಕುಮಾರ್ TNIE ಗೆ ತಿಳಿಸಿದರು.

ಹಿರಿಯ ನಾಗರಿಕರು ಅಥವಾ ಅನಾರೋಗ್ಯದ ಪ್ರಯಾಣಿಕರಿಗೆ ನಿಲ್ದಾಣ ಪ್ರವೇಶಿಸುವ ಮುನ್ನವೇ ಸಮಸ್ಯೆಗಳು ಆರಂಭವಾಗುತ್ತವೆ ಎನ್ನುತ್ತಾರೆ ಸಾಫ್ಟ್‌ವೇರ್ ಎಂಜಿನಿಯರ್ ಮಹೇಶ್ ಎಂ.

**ಪ್ರಯಾಣಿಕರನ್ನು ವಂಚಿಸುವ ಆಟೋ ಚಾಲಕರು:** ಆಟೋ ಚಾಲಕರು ಪ್ರಯಾಣಿಕರನ್ನು ಮೂರ್ಖರನ್ನಾಗಿ ಮಾಡುತ್ತಾರೆ ಮತ್ತು ಹೆಚ್ಚಿನ ದರವನ್ನು ವಿಧಿಸುತ್ತಾರೆ, ರಸ್ತೆಗಳು ಕೆಟ್ಟ ಸ್ಥಿತಿಯಲ್ಲಿವೆ, ಆದರೆ ಪ್ರಯಾಣಿಕರನ್ನು ಕೆಲವು ಮೀಟರ್

**ಕಂಟೋನ್ಮೆಂಟ್ ರೈಲು ನಿಲ್ದಾಣ ನಿರ್ಮಾಣ ಮುಗಿಯಲು ವರ್ಷಗಳು ಬೇಕಾಗಬಹುದು. ತಾತ್ಕಾಲಿಕ ಶೆಡ್‌ಗಳು, ಹಿರಿಯರಿಗೆ ಬ್ಯಾಟರಿ ವಾಹನಗಳು, ಹೆಚ್ಚಿನ ಆಸನಗಳು ಮತ್ತು ಸ್ಪಷ್ಟ ಮಾಹಿತಿ ಫಲಕಗಳನ್ನೊಳಗೊಂಡ ತಾತ್ಕಾಲಿಕ ಪರಿಹಾರಗಳನ್ನು ಸರ್ಕಾರ ಒದಗಿಸಬೇಕು ಎಂದು ಅವರು ಸಲಹೆ ನೀಡಿದರು. ಸಾಮಾನ್ಯವಾಗಿ, ಪ್ಲಾಟ್‌ಫಾರ್ಮ್ 2ರ ಪ್ರವೇಶವು ನೀರಿನಿಂದ ತುಂಬಿರುತ್ತದೆ, ಕೊಳಕು ಚರಂಡಿ ನೀರು ರಸ್ತೆಯ ಮೇಲೆ ತುಂಬಿರುತ್ತದೆ. ಮಿಲ್ಲರ್ಸ್ ರಸ್ತೆ ಮೂಲಕ ಆಗಮಿಸುವ ಜನರು ಇಂತಹ ದಾರಿ ಮೂಲಕವೇ ರೈಲು ನಿಲ್ದಾಣದ ಒಳಗಡೆ ಹೋಗಬೇಕು. ಆಸನಗಳ ಸಂಖ್ಯೆಯೂ ಕಡಿಮೆಯಿದೆ ಎಂದು ಪ್ರಯಾಣಿಕರು ತಿಳಿಸಿದರು.**

ದೂರದಲ್ಲಿಯೇ ಇಳಿಸಿ, ಮುಂದೆ ಹೋಗಲು ನಿರಾಕರಿಸುತ್ತಾರೆ. ಎಷ್ಟೋ ಜನರಿಗೆ ದೂರ ಎಷ್ಟಿದೆ ಎಂಬುದು ಗೊತ್ತಿರುವುದಿಲ್ಲ. ಹಣ ನೀಡಿದ ಬಳಿಕ ಭಾರವಾದ ಸಾಮಾನುಗಳನ್ನು ಸಾಗಿಸುವ ಮಾರ್ಗವನ್ನು ಕಂಡುಕೊಳ್ಳಬೇಕಾಗಿದೆ.

# ಆರೋಪಿಗಳ ಸ್ಥಿರಾಸ್ತಿ ಮುಟ್ಟುಗೋಲು ಹಾಕಿದ ಇಡಿ

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ರಾಜ್ಯ ಭೋವಿ ಅಭಿವೃದ್ಧಿ ನಿಗಮದ ಬಹುಕೋಟಿ ಹಗರಣದ ಆರೋಪಿಗಳಿಗೆ ಸೇರಿದ 26.27 ಕೋಟಿ ಮೌಲ್ಯದ ಸ್ಥಿರಾಸ್ತಿಯನ್ನು ಜಾರಿ ನಿರ್ದೇಶನಾಲಯ ಮುಟ್ಟುಗೋಲು ಹಾಕಿಕೊಂಡಿದೆ. ಪ್ರಕರಣದ ಆರೋಪಿಗಳಾದ ಬಿ.ಕೆ.ನಾಗರಾಜಪ್ಪ. ಆರ್.ಲೀಲಾವತಿ, ಇತರೆ ಆರೋಪಿಗಳಿಗೆ ಸೇರಿದ ಆಸ್ತಿಯನ್ನು ಅಕ್ರಮ ಹಣ ವರ್ಗಾವಣೆ ಕಾಯ್ದೆಯಡಿ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದು ಜಾರಿ ನಿರ್ದೇಶನಾಲಯ ತಿಳಿಸಿದ್ದು, ತನಿಖೆ ಮುಂದುವರೆಸಿದೆ.





**ಏನಿದು ಹಗರಣ:** ಭೋವಿ ಸಮುದಾಯದ ಅಭ್ಯುದಯಕ್ಕೆ ಸರ್ಕಾರವು ಭೋವಿ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಿದೆ. 2021-22ನೇ ಸಾಲಿನಲ್ಲಿ ಉದ್ಯಮಿಗಳಿಗೆ ಸಾಲ ನೀಡುವಾಗ ಅಕ್ರಮ ನಡೆದಿದ್ದು, ಲಕ್ಷಾಂತರ ರೂ. ಸಾಲಕೊಡಿಸುವುದಾಗಿ ಸಾರ್ವಜನಿಕರ ದಾಖಲೆ ದುರ್ಬಳಕೆ ಜೊತೆಗೆ 10 ಕೋಟಿ ರೂಪಾಯಿಗೂ ಹೆಚ್ಚು ಹಣ ಅಕ್ರಮವಾಗಿ ವರ್ಗಾವಣೆ ಮಾಡಿದ್ದ ಆರೋಪ ಕೇಳಿಬಂದಿತ್ತು.

ಪ್ರಕರಣ ಮುಚ್ಚಿಹಾಕಲು ನಿಗಮದ ಅಧೀಕ್ಷಕ ಸುಬ್ಬಪ್ಪ, ಭೋವಿ ಅಭಿವೃದ್ಧಿ ನಿಗಮದ ಲೆಕ್ಕಪತ್ರ ಕಡತ, ನಗದು ಪುಸ್ತಕಗಳು, ಯೋಜನಾ ಕಡತ, ಬ್ಯಾಂಕ್ ಚೆಕ್ ಸೇರಿದಂತೆ 200ಕ್ಕೂ ಹೆಚ್ಚು ಕಡತಗಳನ್ನು ಕಳವು ಮಾಡಿದ್ದ ಕುರಿತು ಬೆಂಗಳೂರು ಗ್ರಾಮಾಂತರ, ಕಲಬುರಗಿ ಜಿಲ್ಲೆಯಲ್ಲಿ ದೂರು ದಾಖಲಾಗಿದ್ದವು.

ಇನ್ನು, ಪ್ರಕರಣದ ತನಿಖೆಯನ್ನು ಸಿಐಡಿ ಮತ್ತು ಲೋಕಾಯುಕ್ತ ಕೂಡ ನಡೆಸಿವೆ. ಸಿಐಡಿ ತನಿಖೆ ವೇಳೆ 2018-2023ರವರೆಗೆ ಐದು ವರ್ಷಗಳಲ್ಲಿ ಸುಮಾರು 90 ಕೋಟಿ ರೂಪಾಯಿಗೂ ಅಧಿಕ ಮೊತ್ತದ ಅಕ್ರಮ ನಡೆದಿರುವುದು ಬಯಲಾಗಿತ್ತು.


## ಅಂತರಾಳದಿಂದ... EDITORIAL

# ಪ್ರವಾಸಿಗರ ಮೇಲೆಯೇ ಗೂಬೆ ಕೂರಿಸುತ್ತಿರುವ ಕೇಂದ್ರ ಸರಕಾರ

ಪಹಲ್ಗಾಮ್‌ನಲ್ಲಿ ಉಗ್ರರು ಅಮಾಯಕರ ಮೇಲೆ ನಡೆಸಿದ ಬರ್ಬರ ದಾಳಿಯ ಹಿಂದಿರುವ ಭದ್ರತಾ ವೈಫಲ್ಯ ಕೇಂದ್ರ ಸರಕಾರವನ್ನು ಇರಿಯುತ್ತಲೇ ಇದೆ. ಆಪರೇಷನ್ ಸಿಂಧೂರದ ಮೂಲಕ ಬೃಹತ್ ಕಾರ್ಯಾಚರಣೆಯಿಂದ ಈ ವೈಫಲ್ಯವನ್ನು ತುಂಬಬಹುದು ಎನ್ನುವ ಕೇಂದ್ರ ಸರಕಾರದ ನಿರೀಕ್ಷೆಯೂ ಹುಸಿಯಾಗಿದೆ. ಪಹಲ್ಗಾಮ್‌ನಲ್ಲಿ ಅಮಾಯಕರ ಮೇಲೆ ದಾಳಿ ನಡೆಸಿದ ಉಗ್ರರನ್ನು ಬಂಧಿಸುವುದಕ್ಕೋ, ಕೊಂದು ಹಾಕುವುದಕ್ಕೋ ಸರಕಾರಕ್ಕೆ ಇನ್ನೂ ಸಾಧ್ಯವಾಗಿಲ್ಲ. ಈಗಾಗಲೇ ಅವರ ಬಂಧನಕ್ಕೆ ಸರಕಾರ ಬಲೆ ಬೀಸಿದೆ. ಮಾಹಿತಿ ನೀಡಿದವರಿಗೆ ಬಹುಮಾನವನ್ನೂ ಘೋಷಿಸಿದೆ. ಇದೇ ಸಂದರ್ಭದಲ್ಲಿ ಪಹಲ್ಗಾಮ್‌ನ ಕಳಂಕವನ್ನು ತೊಳೆದುಕೊಳ್ಳುವ ಭಾಗವಾಗಿ, ಬಿಜೆಪಿಯೊಳಗಿರುವ ಕೆಲವು ನಾಯಕರು ಬೇಜವಾಬ್ದಾರಿಯುತ ಹೇಳಿಕೆಗಳನ್ನು ನೀಡುತ್ತಾ ಸರಕಾರಕ್ಕೆ ಇನ್ನಷ್ಟು ಮುಜುಗರವನ್ನು ತರುತ್ತಿದ್ದಾರೆ. ಆಪರೇಷನ್ ಸಿಂಧೂರದಲ್ಲಿ ಭಾಗವಹಿಸಿದ ಕರ್ನಲ್ ಸೋಫಿಯಾ ಖುರೇಶಿಯವರನ್ನು ಪಹಲ್ಗಾಮ್ ಭಯೋತ್ಪಾದಕರ ಸೋದರಿ ಎಂದು ಕರೆದ ಮಧ್ಯಪ್ರದೇಶದ ಸಚಿವ ವಿಜಯ್ ಶಾ ಈಗಾಗಲೇ ಸುಪ್ರೀಂಕೋರ್ಟ್‌ನಿಂದ ತೀವ್ರ ತರಾಟೆಗೀಡಾಗಿದ್ದಾರೆ. ಮಾತ್ರವಲ್ಲ ಆತನ ಹೇಳಿಕೆಯ ವಿರುದ್ಧ ತನಿಖೆ ನಡೆಸಲು ಆದೇಶ ನೀಡಿದೆ. ನನ್ನ ದೇಹದಲ್ಲಿ ಹರಿಯುತ್ತಿರುವುದು ರಕ್ತವಲ್ಲ, ಸಿಂಧೂರ ಎಂಬ ಹೇಳಿಕೆಯನ್ನು ನೀಡಿರುವ ಪ್ರಧಾನಿ ಮೋದಿ ಆಪರೇಷನ್ ಸಿಂಧೂರದಲ್ಲಿ ಭಾಗವಹಿಸಿದ ಕರ್ನಲ್ ಬಗ್ಗೆ ತನ್ನ ಪಕ್ಷದ ನಾಯಕನೊಬ್ಬ ನೀಡಿರುವ ಹೇಳಿಕೆಯ ಬಗ್ಗೆ ಈ ವರೆಗೆ ತುಟಿ ಬಿಚ್ಚಿಲ್ಲ. ಆತನ ವಿರುದ್ಧ ಯಾವುದೇ ಕ್ರಮ ತೆಗೆದುಕೊಂಡಿಲ್ಲ.

**ಮಹಿಳೆಯರು ಪ್ರಧಾನಿ ಮೋದಿಯವರ ಅಗ್ನಿಪಥ ಯೋಜನೆಯಡಿಯಲ್ಲಿ ತರಬೇತಿ ಪಡೆದು, ಪಹಲ್ಗಾಮ್‌ನಲ್ಲಿ ಉಗ್ರರನ್ನು ವೀರೋಚಿತವಾಗಿ ಎದುರಿಸಿದ್ದರೆ ದೈನ್ಯತೆಯ ಸಾವು ಅವರ ಗಂಡಂದಿರಿಗೆ ಬರುತ್ತಿರಲಿಲ್ಲ ಎಂದು ಅವರು ಹೇಳಿದ್ದಾರೆ. ಪ್ರವಾಸಿಗರು ದೈನ್ಯತೆಯಿಂದ ಇದ್ದ ಕಾರಣ ಹತ್ಯೆಗೀಡಾದರು. ಪ್ರಧಾನಿಯವರ ಯೋಜನೆಯಡಿ ತರಬೇತಿ ಪಡೆದು ದಾಳಿಕೋರರ ಜತೆ ಸಂಘರ್ಷಕ್ಕೆ ಇಳಿದಿದ್ದರೆ ಅಷ್ಟು ಸಂಖ್ಯೆಯಲ್ಲಿ ಸಾವು ಸಂಭವಿಸುತ್ತಿರಲಿಲ್ಲ. ಪ್ರವಾಸಿಗರು ಮೂಲ ಸಲಕರಣೆಗಳಾದ ಬಡಿಗೆಯನ್ನು ಹೊಂದಿ, ದಾಳಿಕೋರರ ವಿರುದ್ಧ ಹೋರಾಟ ನಡೆಸಿದ್ದರೆ ಸಾವಿನ ಸಂಖ್ಯೆ ಐದರಿಂದ ಆರಷ್ಟೇ ಆಗುತ್ತಿತ್ತು. ಮೂವರು ಉಗ್ರರನ್ನು ಸಾಯಿಸಬಹುದಿತ್ತು ಎಂದು ಅವರು ಕಾರ್ಯಕ್ರಮವೊಂದರಲ್ಲಿ ಹೇಳಿದ್ದಾರೆ.**

ಕನಿಷ್ಠ ಆತನನ್ನು ಸಚಿವ ಸ್ಥಾನದಿಂದಲಾದರೂ ಕೆಳಗಿಳಿಸಿ, ಆಪರೇಷನ್ ಸಿಂಧೂರದ ಘನತೆಯನ್ನು ಎತ್ತಿ ಹಿಡಿಯಬೇಕಾಗಿತ್ತು. ಅಂತಹದೇನೂ ಘಟಿಸಿಲ್ಲ. ಅದರ ಬೆನ್ನಿಗೇ ಬಿಜೆಪಿ ಮುಖಂಡ, ರಾಜ್ಯ ಸಭಾ ಸದಸ್ಯ ರಾಮಚಂದ್ರ ಜಾಂಗ್ರ ಪಹಲ್ಗಾಮ್‌ನಲ್ಲಿ ಉಗ್ರರ ದಾಳಿಗೆ ಬಲಿಯಾದ ಕುಟುಂಬಗಳ ಬಗ್ಗೆ ಕೇವಲವಾಗಿ ಮಾತನಾಡಿ ವಿವಾದಕ್ಕೀಡಾಗಿದ್ದಾರೆ. ಪಹಲ್ಗಾಮ್‌ನಲ್ಲಿ ಕೇವಲ ನಾಲ್ಕೇ ನಾಲ್ಕು ಉಗ್ರರು ಸೇರಿ ಇಪ್ಪತ್ತೈದಕ್ಕೂ ಅಧಿಕ ಪ್ರವಾಸಿಗರನ್ನು ಬರ್ಬರವಾಗಿ ಕೊಂದು ಹಾಕುವುದಕ್ಕೆ ಮುಖ್ಯ ಕಾರಣ ಭದ್ರತಾ ಲೋಪ ಆ ಪ್ರವಾಸಿ ತಾಣದಲ್ಲಿ ಹೆಸರಿಗೂ ಒಬ್ಬನೇ ಒಬ್ಬನನ್ನು ಗಸ್ತಿಗೆಂದು ಸರಕಾರ ನೇಮಿಸಿರಲಿಲ್ಲ. ಇದರ ಲಾಭವನ್ನು ಉಗ್ರರು ತಮ್ಮದಾಗಿಸಿ, ತಮ್ಮ ಕೃತ್ಯವನ್ನು ಸಾಧಿಸಿದರು. ಒಂದು ರೀತಿಯಲ್ಲಿ ಪ್ರವಾಸಿಗರನ್ನು ಸರಕಾರವೇ ಹುಲಿ ಬಾಯಿಗೆ ಕೊಟ್ಟಿತು. ಆದರೆ ರಾಮಚಂದ್ರ ಜಾಂಗ್ರ ಪ್ರಕಾರ, ಮಹಿಳೆಯರು ಸೂಕ್ತ ತರಬೇತಿ ಪಡೆದು,




ಉಗ್ರರ ವಿರುದ್ಧ ಪ್ರತಿದಾಳಿ ನಡೆಸದೇ ಇರುವುದೇ ಪಹಲ್ಗಾಮ್‌ನ ಮಾರಣಹೋಮಕ್ಕೆ ಕಾರಣವಂತೆ. ಅವರ ಪ್ರಕಾರ, ಪಹಲ್ಗಾಮ್‌ನಲ್ಲಿ ಭದ್ರತಾ ಲೋಪದ ಹೊಣೆಯನ್ನು ಸತ್ತವರ ಪತ್ನಿಯರೇ ಹೊರಬೇಕು. ಅಲ್ಲಿ ಪ್ರವಾಸ ಹೋದ ಅಮಾಯಕರ ರಕ್ಷಣೆಗೂ ಸರಕಾರಕ್ಕೂ ಯಾವ ಸಂಬಂಧವೂ ಇಲ್ಲ. ಕಾಶ್ಮೀರಕ್ಕೆ ಪ್ರವಾಸ ಹೊರಡುವ ಮೊದಲು ಎಲ್ಲಾ ಪ್ರವಾಸಿಗರು ಅಗ್ನಿಪಥ ಯೋಜನೆಯಡಿಯಲ್ಲಿ ತರಬೇತಿ ಪಡೆಯಬೇಕು. ಪ್ರವಾಸಕ್ಕೆ ಹೋಗುವಾಗ ಅವರು ತಮ್ಮ ಬಳಿ ಕಡ್ಡಾಯವಾಗಿ ಬಡಿಗೆಗಳನ್ನು ಇಟ್ಟುಕೊಳ್ಳಬೇಕು ಮತ್ತು ಉಗ್ರರ ವಿರುದ್ಧ ವೀರಾವೇಶದಿಂದ ಹೋರಾಡಿ ಪ್ರಾಣಾರ್ಪಣೆ ಮಾಡಬೇಕು. ಈ ಹೇಳಿಕೆಯ ಮೂಲಕ ಪಹಲ್ಗಾಮ್‌ನಲ್ಲಿ ಭಯೋತ್ಪಾದಕರ ದಾಳಿಗೆ ತಮ್ಮವರನ್ನು ಕಳೆದುಕೊಂಡ ಮಹಿಳೆಯರನ್ನೇ ಕಟಕಟೆಯಲ್ಲಿ ನಿಲ್ಲಿಸಿದಂತಾಗಿದೆ. ಪಹಲ್ಗಾಮ್‌ನಲ್ಲಿ ಪ್ರವಾಸಿಗರಿಗೆ ಭದ್ರತೆಯನ್ನು ನೀಡುವುದು ಸರಕಾರದ ಕೆಲಸ ಎನ್ನುವುದು ಈ ಬಿಜೆಪಿ ನಾಯಕನಿಗೆ ಗೊತ್ತಿದ್ದಂತಿಲ್ಲ. ಕನಿಷ್ಠ ಅಗ್ನಿಪಥ ಯೋಜನೆ ಎಂದರೇನು ಎನ್ನುವುದರ ಬಗ್ಗೆಯೂ ಈತನಿಗೆ ಅರಿವಿಲ್ಲ. ಈ ಯೋಜನೆಯ ವಿರುದ್ಧ ದೇಶದ ಯುವಕರು, ಸೇನಾಕಾಂಕ್ಷಿಗಳು, ನಿವೃತ್ತ ಸೈನಿಕರು ಯಾಕೆ ಅಸಮಾಧಾನ ಹೊಂದಿದ್ದಾರೆ ಎನ್ನುವುದರ ಅರಿವೂ ಈತನಿಗಿಲ್ಲ. ಸೇನಾ ವೆಚ್ಚವನ್ನು ಕಡಿತ ಮಾಡುವ ಉದ್ದೇಶದಿಂದ ನಾಲ್ಕು ವರ್ಷಗಳ ಗುತ್ತಿಗೆ ಆಧಾರದಲ್ಲಿ ಯುವಕರನ್ನು ಸೇನೆಗೆ ನೇಮಕ ಮಾಡುವ ಯೋಜನೆಯ ಬಗ್ಗೆ ಈಗಾಗಲೇ ದೇಶಾದ್ಯಂತ ಆಕ್ರೋಶಗಳು ಕೇಳಿ ಬರುತ್ತಿವೆ. ಸೂಕ್ತ ತರಬೇತಿಯಿಲ್ಲದ ಈ ಯುವಕರನ್ನು ಸೇನೆಗೆ, ಯುದ್ಧಕ್ಕೆ ಬಳಸಿಕೊಳ್ಳುವುದು ಮತ್ತು ಯಾವುದೇ ಸೇನೆಯ ಪೂರ್ಣ ಸವಲತ್ತುಗಳನ್ನು ನೀಡದೆ ಇರುವುದರ ಬಗ್ಗೆ ಆಕ್ಷೇಪಗಳು ವ್ಯಕ್ತವಾಗಿವೆ. ಈ ಯೋಜನೆ ಬೇರೆ ಬೇರೆ ರೀತಿಯಲ್ಲಿ ದುರುಪಯೋಗವಾಗುವ ಬಗ್ಗೆಯೂ ತಜ್ಞರು ಆತಂಕ ವ್ಯಕ್ತಪಡಿಸಿದ್ದಾರೆ.

# ಪ್ರಧಾನಿ ಪಂಡಿತ್ ಜವಾಹರ್ ಲಾಲ್ ನೆಹರು ರವರ 61ನೇ ವರ್ಷದ ಪುಣ್ಯಸ್ಮರಣೆ



**ಕಲಾ ಸಾಹಿತ್ಯ**
**ಕೃಷ್ಣಪ್ಪ**
**ಲೇಖಕರು**
**ಪ್ರಗತಿ ಪರ ಚಿಂತಕ , ವಿಮರ್ಶಕರು**



ಪಂಡಿತ್ ಜವಾಹರ್ ಲಾಲ್ ನೆಹರುರವರು 1889 ನವಂಬರ್ 14 ರಂದು, ತಂದೆ ಮೋತಿಲಾಲ್ ನೆಹರು ಮತ್ತು ತಾಯಿ ಸ್ವರೂಪರಾಣಿರವರ ಮಗನಾಗಿ ಅಲಹಾಬಾದಿನಲ್ಲಿ ಜನಿಸಿರುತ್ತಾರೆ.

ಚಿಕ್ಕವಯಸ್ಸಿನಿಂದ ಸಂಸ್ಕಾರಗಳ ಜೊತೆಗೆ ಉನ್ನತ-ಗುಣಮಟ್ಟದ ಶಿಕ್ಷಣವನ್ನು ದೇಶ-ವಿದೇಶಗಳಲ್ಲಿ ಪಡೆದರು. ತಂದೆ ಜೊತೆಯಲ್ಲಿ ವಕೀಲ ವೃತ್ತಿಯನ್ನು ಮಾಡುತ್ತಿರುವಾಗ, 1919 ರಲ್ಲಿ ಪಂಜಾಬಿನ ಜಲಿಯನ್ ವಾಲ್ ಬಾಗ್ ನಲ್ಲಿ ಬ್ರಿಟೀಷರು ನಡೆಸಿದ ಪೈಶಾಚಿಕ ಹತ್ಯಾಕಾಂಡವನ್ನು ವಿರೋಧಿಸಿ ಅದರಿಂದ ಪ್ರಭಾವಿತರಾಗಿ ಗಾಂಧೀಜಿ ಮೊದಲುಗೊಂಡು ಇತರೆ ನಾಯಕರೊಂದಿಗೆ ಸ್ವಾತಂತ್ರ್ಯ ಚಳುವಳಿಗೆ ಧುಮುಕಿದರು. ಅನೇಕ ಸಲ ಸೆರೆಮನೆವಾಸ ಅನುಭವಿಸಿದರು. ನಂತರ ಸಕ್ರಿಯವಾಗಿ ಸ್ವಾತಂತ್ರ್ಯ ಹೋರಾಟದ ಚಳುವಳಿಯಲ್ಲಿ ಭಾಗವಹಿಸಿದರು.

ನೆಹರುರವರು ಕಮಲರೊಂದಿಗೆ ವಿವಾಹವಾಗಿ ಅವರಿಗೆ ಏಕೈಕ ಪುತ್ರಿ ಇಂದಿರಾಗಾಂಧಿ. ಕಮಲಾರವರ ಆರೋಗ್ಯ ಹದಗೆಟ್ಟು ಗುಣಮುಖರಾಗದೇ 1936 ರಲ್ಲಿ ತೀರಿಕೊಂಡರು.ಆಗ ನೆಹರು ರವರಿಗೆ 47 ವರ್ಷ ವಯಸ್ಸಾಗಿತ್ತು. 1929 ರಲ್ಲಿ ಕಾಂಗ್ರೇಸ್ಸಿನ ಅಧ್ಯಕ್ಷರಾಗಿ ಆಯ್ಕೆಯಾದರು. 1942 ರಲ್ಲಿ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಸಕ್ರಿಯವಾಗಿ ಎಲ್ಲಾ ಮುಖಂಡರ ಜೊತೆಯಲ್ಲಿ ಭಾಗವಹಿಸಿದರು. ಸ್ವಾತಂತ್ರ್ಯ ಹೋರಾಟದ ಫಲದಿಂದಾಗಿ,1947 ಆಗಸ್ಟ್ 15 ರಂದು ಭಾರತ ಸ್ವಾತಂತ್ರ್ಯ ಪಡೆಯಿತು. ಸ್ವತಂತ್ರ ಭಾರತದ ಪ್ರಥಮ ಪ್ರಧಾನಮಂತ್ರಿಯಾಗಿ ತನ್ನ 58 ನೇ ವಯಸ್ಸಿನಲ್ಲಿ ಸರ್ವಾನುಮತದಿಂದ ಆಯ್ಕೆಯಾಗಿ ಪ್ರಮಾಣವಚನ ಸ್ವೀಕರಿಸಿದರು. ಇವರು ಒಬ್ಬ ದಕ್ಷ ಆಡಳಿತಗಾರರು, ಬುದ್ಧಿಶಾಲಿ, ಕ್ರಿಯಾಶಾಲಿ, ತೀಕ್ಷ್ಣ ವಿಚಾರ ಮತಿಗಳಾಗಿದ್ದು, ವೈಜ್ಞಾನಿಕ, ಸೈದ್ಧಾಂತಿಕ, ವೈಚಾರಿಕ, ಇತಿಹಾಸ ಪ್ರಜ್ಞೆ ಉಳ್ಳವರಾಗಿ ಜಾಗತಿಕ ದೃಷ್ಟಿಕೋನ ಹೊಂದಿದ್ದ ಪ್ರತಿಭಾವಂತ ರಾಜಕಾರಣಿಯಾಗಿದ್ದರು. ನೆಹರು ಅವರು ತಮ್ಮ ನೇರನುಡಿ, ದೂರದೃಷ್ಟಿ, ದಿಟ್ಟತನ, ಅಪಾರ ದೇಶಭಕ್ತಿ,ಜನಸಾಮಾನ್ಯರ ಕಲ್ಯಾಣಕ್ಕಾಗಿ ಕೈಗೊಂಡ ರಚನಾತ್ಮಕ ಕಾರ್ಯಗಳಿಂದಾಗಿ ಭಾರತೀಯ ಜನಮಾನಸದಲ್ಲಿ ಶಾಶ್ವತವಾಗಿ ಸ್ಥಾನಗಳಿಸಿದ್ದಾರೆ.

ಭಾರತದ ಪ್ರಧಾನಮಂತ್ರಿಯಾಗಿ 17 ವರ್ಷಗಳ ಕಾಲ ರಾಷ್ಟ್ರವನ್ನು ಪ್ರಗತಿ ಪಥದಲ್ಲಿ ಮುನ್ನಡೆಸಿದರು. 1955 ರಲ್ಲಿ ಭಾರತ ಸರ್ಕಾರವು ನೆಹರುರವರ ಅನನ್ಯ ಪ್ರತಿಭೆ, ದೂರದೃಷ್ಟಿಉಳ್ಳವರು ಈ ಗೌರವಕ್ಕೆ ಭಾರತ ರತ್ನ ಪ್ರಶಸ್ತಿ ನೀಡಿ ಗೌರವಿಸಿತು. ನೆಹರೂರವರು ಭಾರತದ ಮಕ್ಕಳನ್ನು ಬಹುವಾಗಿ ಪ್ರೀತಿಸುತ್ತಿದ್ದರು.ಆದ್ದರಿಂದ ಅವರ ಹುಟ್ಟುಹಬ್ಬದ ದಿನವನ್ನು ಮಕ್ಕಳ ದಿನಾಚರಣೆಯನ್ನಾಗಿ ಆಚರಿಸಬೇಕೆಂದು ಅವರ ಆತ್ಮಕಥೆಯಲ್ಲಿ ಪ್ರತಿಬಿಂಬಿಸಿರುತ್ತಾರೆ. ಆದ್ದರಿಂದ ರಾಷ್ಟ್ರಾದ್ಯಂತ ನೆಹರೂಜಿರವರ ಜನ್ಮ ದಿನವನ್ನು ಪ್ರತಿವರ್ಷ ನವಂಬರ್ 14 ರಂದು ಮಕ್ಕಳ ದಿನಾಚರಣೆಯನ್ನಾಗಿ ಆಚರಿಸುವುದು ನಮ್ಮೆಲ್ಲರ ಸೌಭಾಗ್ಯ. ಇಂದಿನ ಮಕ್ಕಳು ಮುಂದಿನ ಭವಿಷ್ಯದ ಪ್ರಜೆಗಳು. ಜಗತ್ತಿನಲ್ಲಿ ಶಕ್ತಿ ಬಣಗಳಿಗೆ ಸೇರದ ಅಲಿಪ್ತ ರಾಷ್ಟ್ರಗಳನ್ನು ಒಂದುಗೂಡಿಸಿ ಅವುಗಳ ಬಲವನ್ನು ವೃದ್ಧಿಸಲು ಶ್ರಮಿಸಿದರು. ಸಹಕಾರ, ಸಹಬಾಳ್ವೆಯನ್ನು ಸಾರುವ ಪಂಚಶೀಲ ಸೂತ್ರಗಳನ್ನು ಪ್ರತಿಪಾದಿಸಿದರು. ನೆಹರು ಭಾರತದ ಅಭಿವೃದ್ಧಿಗೆ ವಿಜ್ಞಾನ ಮತ್ತು ತಂತ್ರಜ್ಞಾನ ಅತ್ಯಗತ್ಯವೆಂದು ಸಾರಿ ಆ ನಿಟ್ಟಿನಲ್ಲಿ ಅನೇಕ ಯೋಜನೆಗಳನ್ನು ರೂಪಿಸಿ ಕಾರ್ಯಗತಗೊಳಿಸಿದರು. ಬೃಹತ್ ಕೈಗಾರಿಕೆಗಳು ಅಣೆಕಟ್ಟುಗಳ ನಿರ್ಮಾಣಕ್ಕೆ ಕಾರಣರಾಗಿ ಇವೇ ಭಾರತದ ನೂತನ ದೇವಾಲಯಗಳು, ರಾಷ್ಟ್ರೀಯ ಯಾತ್ರಾ ಸ್ಥಳಗಳು ಎಂದು ಸಾರಿದರು. ಹೀಗಿರುವಲ್ಲಿ 1964 ಮೇ 27 ರಂದು ಭಾರತೀಯರ ನೆಚ್ಚಿನ ರಾಷ್ಟ್ರ ನಾಯಕ ಪ್ರಧಾನಮಂತ್ರಿ ನೆಹರು ಅವರು ವಯೋ ಸಹಜದಿಂದ ತಮ್ಮ 75 ನೇ ವಯಸ್ಸಿನಲ್ಲಿ ತೀರಿಕೊಂಡರು. ನೆಹರು ತೀರಿಹೋದ ಬಳಿಕ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಸ್ವತಂತ್ರ ಭಾರತದ ಒಬ್ಬ ಸರ್ವ ಶ್ರೇಷ್ಠ ಆಧುನಿಕ ಶಿಲ್ಪಿ ಮರೆಯಾದರೆಂದು ರಾಜ್ಯಸಭೆಯ ಸಂತಾಪ ಸೂಚನಾ ಪಟ್ಟಿಯಲ್ಲಿ ಪ್ರತಿಬಿಂಬಿಸಿರುತ್ತಾರೆ. ಇಂದು ಅವರ 61ನೇ ವರ್ಷದ ಪುಣ್ಯಸ್ಮರಣೆಯನ್ನು ಭಾರತೀಯರಾದ ನಾವುಗಳು ಅವರನ್ನು ಸ್ಮರಿಸಿ, ನೆನೆಯುತ್ತಾ ಅವರ ಆದರ್ಶಗಳನ್ನ ಪಾಲಿಸುವ ಸಂಕಲ್ಪ ಮಾಡೋಣ.

# ಡಿಜಿ-ಐಜಿಪಿ ಎಂ ಎ ಸಲೀಂ ಆಯ್ಕೆ ಪ್ರಶ್ನಿಸಿ ಪತ್ರ

• ಉದಯವಾಹಿನಿ, ಬೆಂಗಳೂರು

ಕರ್ನಾಟಕದ ಪ್ರಭಾರಿ ಡಿಜಿ-ಐಜಿಪಿಯಾಗಿ ನೇಮಕವಾಗಿರುವ ಎಂ.ಎ.ಸಲೀಂ ಅವರಿಗೆ ಸಂಕಷ್ಟ ಎದುರಾಗಿದೆ. ಕನ್ನಡಿಗ, ಹಿರಿಯ ಐಪಿಎಸ್ ಅಧಿಕಾರಿ ಡಾ. ಎಂ.ಎ ಸಲೀಂ ಅವರನ್ನು ರಾಜ್ಯದ ಪೊಲೀಸ್ ಮಹಾನಿರ್ದೇಶಕರನ್ನಾಗಿ (ಪ್ರಭಾರ) ನೇಮಕ ಮಾಡಿ ರಾಜ್ಯ ಸರ್ಕಾರ ಕಳೆದ ಬುಧವಾರ (ಮೇ.21) ಆದೇಶ ಹೊರಡಿಸಿತ್ತು. ಈ ಆದೇಶ ಹಿಂಪಡೆಯುವಂತೆ ವಕೀಲೆ ಸುಧಾ ಕಟ್ವಾ ಅವರು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿದ್ದಾರೆ.

ಸುಪ್ರೀಂ ಕೋರ್ಟ್‌ನ ಆದೇಶದಂತೆ ಪ್ರಭಾರ ಡಿಜಿ-ಐಜಿಪಿ ನೇಮಿಸುವಂತಿಲ್ಲ. ಯಾವುದೇ ವಿಶೇಷ ಕಾರಣ ನೀಡದೆ, ಅವಧಿ ಉಲ್ಲೇಖಿಸದೆ ಡಿಜಿ-ಐಜಿಪಿ ನೇಮಕ ಮಾಡಲಾಗಿದೆ. ಈ ಮೂಲಕ ಸಂವಿಧಾನ ಮತ್ತು ಕಾನೂನು ಉಲ್ಲಂಘಿಸಲಾಗಿದೆ. ಹೀಗಾಗಿ. ಡಾ. ಎಂ.ಎ.ಸಲೀಂ ಅವರ ನೇಮಕಾತಿ ಹಿಂಪಡೆಯಬೇಕು. ಸುಪ್ರೀಂಕೋರ್ಟ್ ಮಾರ್ಗಸೂಚಿಯಂತೆ ನೇಮಕ ಮಾಡಲಿ. ಏಳು ದಿನಗಳಲ್ಲಿ ನಿಯಮ ಪಾಲಿಸದಿದ್ದರೆ ಪಿಐಎಲ್ ಸಲ್ಲಿಸುವುದಾಗಿ ಎಚ್ಚರಿಕೆ ನೀಡಿದ್ದಾರೆ.



**ಎಂ.ಎ ಸಲೀಂ ನೇಮಕ:** ಬುಧವಾರ (ಮೇ.21) ಹಿರಿಯ ಐಪಿಎಸ್ ಅಧಿಕಾರಿ ಡಾ. ಎಂ. ಎ ಸಲೀಂ ಅವರನ್ನು ಪ್ರಭಾರ ರಾಜ್ಯ ಪೊಲೀಸ್ ಮಹಾನಿರ್ದೇಶಕರಾಗಿ ನೇಮಕ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿತ್ತು. ಡಿಜಿ-ಐಜಿಪಿ ಡಾ. ಅಲೋಕ್ ಮೋಹನ್ ಅವರ ಸೇವಾವಧಿ ಮುಕ್ತಾಯಗೊಂಡ ಹಿನ್ನೆಲೆಯಲ್ಲಿ ಡಾ. ಎಂ. ಎ ಸಲೀಂ ಅವರನ್ನು ಪ್ರಭಾರ ಡಿಜಿ-ಐಜಿಪಿಯಾಗಿ ನೇಮಕ ಮಾಡಿದೆ. ಈ ನೇಮಕವನ್ನು ಪ್ರಶ್ನಿಸಿ ವಕೀಲೆಯೊಬ್ಬರು ಸರ್ಕಾರದ ಸಿಎಸ್‌ಗೆ ಪತ್ರ ಬರೆದಿದ್ದಾರೆ. ಡಾ. ಎಂ. ಎ ಸಲೀಂ ಅವರು 1966ರ ಜೂನ್ 25 ರಂದು ಬೆಂಗಳೂರಿನ ಚಿಕ್ಕಬಾಣವರದಲ್ಲಿ ಜನಿಸಿದರು. 1998ರಲ್ಲಿ ವಾಣಿಜ್ಯಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದರು. 1993ರಲ್ಲಿ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಪೊಲೀಸ್ ನಿರ್ವಹಣೆ ಕುರಿತು ಸ್ನಾತಕೋತ್ತರ ಪದವಿ ಪಡೆದ ಅವರು 2010ರಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯದಿಂದ ಟ್ರಾಫಿಕ್ ಮ್ಯಾನೇಜ್ಮೆಂಟ್ ವಿಷಯದಲ್ಲಿ ಡಾಕ್ಟರೇಟ್ ಪದವಿಯನ್ನು ಪಡೆದುಕೊಂಡಿದ್ದಾರೆ.

# ಒಲೆಕ್ಟ್ರಾ ಗ್ರೀನ್‌ಟೆಕ್ ಲಿಮಿಟೆಡ್ ಲಾಭಾಂಶದಲ್ಲಿ ಶೇ.77% ಏರಿಕೆ

• ಉದಯವಾಹಿನಿ, ಹೈದರಾಬಾದ್

ದೇಶದ ಪ್ರಮುಖ ಎಲೆಕ್ಟ್ರಿಕ್ ವಾಹನ ತಯಾರಕ ಒಲೆಕ್ಟ್ರಾ ಗ್ರೀನ್‌ಟೆಕ್ ಲಿಮಿಟೆಡ್ (OGL) ಮಾರ್ಚ್ 31, 2025 ರಂದು ಕೊನೆಗೊಂಡ ತನ್ನ ತ್ರೈಮಾಸಿಕ ಮತ್ತು ಪೂರ್ಣ ವರ್ಷದ ಏಕೀಕೃತ ಹಣಕಾಸು ಫಲಿತಾಂಶಗಳನ್ನು ಪ್ರಕಟಿಸಿದ್ದು, ಇಂದು ನಡೆದ ತನ್ನ ಸಭೆಯಲ್ಲಿ ನಿರ್ದೇಶಕರ ಮಂಡಳಿಯು ಈ ಗಮನಾರ್ಹ ಸಾಧನೆಗಳನ್ನು ಅಧಿಕೃತವಾಗಿ ಅನುಮೋದಿಸಿದೆ. ಒಲೆಕ್ಟ್ರಾ 219 ಎಲೆಕ್ಟ್ರಿಕ್ ವಾಹನಗಳನ್ನು ವಿತರಿಸಿದೆ, ಇದು 23-24ನೇ ಹಣಕಾಸು ವರ್ಷದಲ್ಲಿ ವಿತರಿಸಲಾದ 131 ವಾಹನಗಳಿಗೆ ಹೋಲಿಸಿದರೆ, ಶೇಕಡಾ 67 ರಷ್ಟು ಹೆಚ್ಚಾಗಿದೆ. 24-25ನೇ ಹಣಕಾಸು ವರ್ಷದ 4ನೇ ತ್ರೈಮಾಸಿಕದ ಆದಾಯವು 448.92 ಕೋಟಿ ರೂ.ಗಳಾಗಿದ್ದು, ಶೇ.55% ರಷ್ಟು ಹೆಚ್ಚಾಗಿದೆ. ಈ ಗಮನಾರ್ಹ ಆದಾಯದ ಬೆಳವಣಿಗೆ ತ್ರೈಮಾಸಿಕದಲ್ಲಿ ಹೆಚ್ಚಿನ ವಿತರಣೆಗಳ ಪರಿಣಾಮವಾಗಿ ದಾಖಲಾಗಿದೆ. ಕಂಪನಿಯು ಇಲ್ಲಿಯವರೆಗೆ 2,718 ಎಲೆಕ್ಟ್ರಿಕ್ ವಾಹನಗಳನ್ನು ವಿತರಿಸಿದ್ದು, ಪ್ರಸ್ತುತ ಬಸ್ ಆರ್ಡರ್‌ಗಳ ಸಂಖ್ಯೆ 10,022 ಯುನಿಟ್‌ಗಳಲ್ಲಿರುವುದರೊಂದಿಗೆ ಬಲವಾದ ಬೇಡಿಕೆ ಮುಂದುವರೆದಿದೆ.

24-25ನೇ ಹಣಕಾಸು ವರ್ಷದ 4ನೇ ತ್ರೈಮಾಸಿಕದಲ್ಲಿ ಕಂಪನಿಯ ಇಬಿಐಟಿಡಿಎ 58.35 ಕೋಟಿ ರೂ.ಗಳನ್ನು ತಲುಪಿದೆ, ಇದು ಹಿಂದಿನ ಹಣಕಾಸು ವರ್ಷಕ್ಕೆ ಹೋಲಿಸಿದರೆ ಗಣನೀಯವಾಗಿ 36% ಹೆಚ್ಚಳವಾಗಿದೆ.ಪಿಬಿಟಿ 29.25 ಕೋಟಿ ರೂ.ಗಳಿಗೆ ಏರಿದೆ, ಇದು ಹಿಂದಿನ ಹಣಕಾಸು ವರ್ಷದ 20.11 ಕೋಟಿ ರೂ. ಗಳಿಗಿಂತ 45% ಹೆಚ್ಚಳವಾಗಿದೆ. ಕಳೆದ ಹಣಕಾಸು ವರ್ಷದಲ್ಲಿ 14.89 ಕೋಟಿ ರೂ. ಗಳಷ್ಟಿದ್ದ ಪಿಎಟಿ ಈ ವರ್ಷ 20.69 ಕೋಟಿ ರೂ. ಗಳಾಗಿದ್ದು, ಶೇ.39 ರಷ್ಟು ಹೆಚ್ಚಾಗಿದೆ ಎಂದು ಸಂಸ್ಥೆ ತಿಳಿಸಿದೆ. ಮಾರ್ಚ್ 31, 2025 ಕ್ಕೆ ಕೊನೆಗೊಂಡ ವರ್ಷದಲ್ಲಿ ಪ್ರತಿ ಷೇರಿಗೆಗಳಿಕೆ (ಇಪಿಎಸ್) ರೂ. 16.92 ಎಂದು ಕಂಪನಿ ವರದಿ ಮಾಡಿದೆ, ಇದು ಮಾರ್ಚ್ 31, 2025 ಕ್ಕೆ ಕೊನೆಗೊಂಡ ಹಿಂದಿನ ವರ್ಷದ 9.36 ರೂ.ಗಳಷ್ಟಿತ್ತು. ಫಲಿತಾಂಶಗಳ ಕುರಿತು ಪ್ರತಿಕ್ರಿಯಿಸಿದ ಒಲೆಕ್ಟ್ರಾ ಗ್ರೀನ್ ಟೆಕ್ ಲಿಮಿಟೆಡ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ. ವಿ. ಪ್ರದೀಪ್, ನಮ್ಮ ಏಕೀಕೃತ ಆದಾಯ ಮತ್ತು ಲಾಭದಾಯಕತೆಯಲ್ಲಿ ಬಲವಾದ ಬೆಳವಣಿಗೆಯನ್ನು ವರದಿ ಮಾಡಲು ನಾವು ಸಂತೋಷಪಡುತ್ತೇವೆ. ನಮ್ಮ ಉತ್ಪಾದನೆಯನ್ನು ಹೆಚ್ಚಿಸುವುದು ಮತ್ತು ನಮ್ಮ ತಂತ್ರಜ್ಞಾನ ಸಾಮರ್ಥ್ಯಗಳನ್ನು ಹೆಚ್ಚಿಸುವತ್ತ ನಮ್ಮ ಗಮನ ಮುಂದುವರೆದಿದೆ. ನಮ್ಮ ಆರ್ಡರ್ ಪುಸ್ತಕವು ಪ್ರಬಲವಾಗಿದೆ. ಗಮನಾರ್ಹವಾಗಿ, ನಾವು ನಮ್ಮ ಇತ್ತೀಚಿನ ತಂತ್ರಜ್ಞಾನ ಪ್ರಗತಿಯಾದ ಬ್ಲೇಡ್ ಬ್ಯಾಟರಿ ತಂತ್ರಜ್ಞಾನವನ್ನು ಭಾರತ್ ಮೊಬಿಲಿಟಿ ಗ್ಲೋಬಲ್ ಎಕ್ಸ್‌ಪೋ 2025ರಲ್ಲಿ ಅನಾವರಣಗೊಳಿಸಿದ್ದೇವೆ. ಅದರ ಅತ್ಯಾಧುನಿಕ ವಿನ್ಯಾಸ ಮತ್ತು ಅಸಾಧಾರಣ ಶಕ್ತಿ ಸಾಂದ್ರತೆಯೊಂದಿಗೆ, ಬ್ಲೇಡ್ ಬ್ಯಾಟರಿ ದೀರ್ಘ ಶ್ರೇಣಿಗಳನ್ನು ಮಾತ್ರವಲ್ಲದೆ ವೇಗವಾದ ಚಾರ್ಜಿಂಗ್ ಸಮಯವನ್ನು ಸಹ ಭರವಸೆ ನೀಡುತ್ತದೆ, ಅಂತಿಮವಾಗಿ ಕಾರ್ಯಕ್ಷಮತೆ, ಸುರಕ್ಷತೆ ಮತ್ತು ವಿಶ್ವಾಸಾರ್ಹತೆಯನ್ನು ಹೆಚ್ಚಿಸುತ್ತದೆ. ಆದಾಗ್ಯೂ, ಇದು ಕೇವಲ ಆರಂಭ. ವಿದ್ಯುತ್ ಚಲನಶೀಲತೆ ಉದ್ಯಮದಲ್ಲಿ ಸಾಧ್ಯವಿರುವ ಎಲ್ಲೆಗಳನ್ನು ಸುಧಾರಿಸಲು, ನಾವೀನ್ಯತೆ ನೀಡಲು ಮತ್ತು ತಳ್ಳಲು ನಾವು ನಿರಂತರವಾಗಿ ಹೊಸ ಮಾರ್ಗಗಳನ್ನು ಅನ್ವೇಷಿಸುತ್ತಿದ್ದೇವೆ ಎಂದು ಸಂಸ್ಥೆಯ ಸಾಧನೆಗೆ ಹರ್ಷ ವ್ಯಕ್ತಪಡಿಸಿದ್ದಾರೆ.





**ಪೂರ್ಣ ವರ್ಷದ ಕಾರ್ಯಕ್ಷಮತೆಯ ಮುಖ್ಯಾಂಶಗಳು**

**24-25ನೇ ಹಣಕಾಸು ವರ್ಷದ ಆದಾಯವು ರೂ. 1,801.9 ಕೋಟಿ ಆಗಿದ್ದು, ಇದು ಶೇ. 56ರಷ್ಟು ಹೆಚ್ಚಾಗಿದೆ. ಪ್ರಸಕ್ತ ವರ್ಷದಲ್ಲಿ ಕಂಪನಿಯ ಇಬಿಐಟಿಡಿಎ ರೂ. 276.32 ಕೋಟಿಗಳನ್ನು ತಲುಪಿದ್ದು, ಹಿಂದಿನ ವರ್ಷಕ್ಕೆ ಹೋಲಿಸಿದರೆ ಗಣನೀಯವಾಗಿ 49% ಹೆಚ್ಚಳವಾಗಿದೆ. ಪಿಬಿಟಿ ರೂ. 187.88 ಕೋಟಿಗಳಿಗೆ ಏರಿದೆ, ಇದು ಹಿಂದಿನ ಹಣಕಾಸು ವರ್ಷದ ರೂ. 105.78 ಕೋಟಿಗಳಿಗಿಂತ 78% ರಷ್ಟು ಗಮನಾರ್ಹ ಹೆಚ್ಚಳವಾಗಿದೆ. ಹಿಂದಿನ ಹಣಕಾಸು ವರ್ಷದ ರೂ. 78.65 ಕೋಟಿಗಳಿಗೆ ಹೋಲಿಸಿದರೆ, ಪಿಎಟಿ ರೂ. 139.21 ಕೋಟಿಗಳಾಗಿದ್ದು, ಶೇ. 77 ರಷ್ಟು ಹೆಚ್ಚಾಗಿದೆ.**




# ರಾಮಾಯಣ



## ದಶರಥನಿಗೆ ಶಾಪ ಬಂದ ವೃತ್ತಾಂತ

• ಹಿಂದಿನ ಸಂಚಿಕೆಯಿಂದ **78ನೆಯ ಅಧ್ಯಾಯ**

ಆ ಸಮಯದಲ್ಲಿ ಆ ಮುನಿಕುಮಾರನು ತಾನು ಮಾಡಿದ ಸತ್ಕರ್ಮದಿಂದ ದೇವತ್ವವನ್ನು ಪಡೆದು ದೇವೇಂದ್ರನ ಸಮೀಪಕ್ಕೆ ಹೋಗಿ ಆತನ ಸಹಿತವಾಗಿ ತಿರುಗಿ ಬಂದು ಕಾಣಿಸಿಕೊಂಡು ತಾಯಿತಂದೆಗಳನ್ನು ಮಧುರೋಕ್ತಿಯಿಂದ ಸಂತವಿಸಿ ನೀವು ನನ್ನ ಸಮೀಪಕ್ಕೆ ಶೀಘ್ರದಲ್ಲಿ ಬರುತ್ತೀರಿ ಎಂದು ನುಡಿದು ದಿವ್ಯ ವಿಮಾನಾರೂಢನಾಗಿ ಸ್ವರ್ಗಲೋಕವನ್ನೇದಿದನು ಆಮೇಲೆ ಆತನ ತಂದೆಯಾದ ಮುನೀಶ್ವರನು ತನ್ನ ಪತ್ನಿಸಮೇತನಾಗಿ ಆತನ ಮುಂದೆ ಕೈ ಮುಗಿದು ನಿಂತಿದ್ದ ನನ್ನನ್ನು ನೋಡಿ ಹೀಗೆ ನುಡಿದನು ರಾಜ, ನೀನು ನಮ್ಮನ್ನೂ ಸಂಹರಿಸು. ನಮಗೆ ಮರಣಭಯವಿಲ್ಲ, ನೀನು ಯಾವ ಬಾಣದಿಂದ ನಮ್ಮ ಮಗನನ್ನು ಕೊಂದೆಯೋ ಆ ಬಾಣದಿಂದಲೇ ನಮ್ಮನ್ನೂ ಕೊಲ್ಲು. ಅತ್ಯಂತ ಶುಚಿಯಾದ ನಮ್ಮ ಮಗನನ್ನು ಅಜ್ಞಾನದಿಂದ ಕೊಂದೆ. ಆದಕಾರಣ ನೀನು ಮಹಾಕ್ರೂರವಾದ ಪುತ್ರಶೋಕದಿಂದಲೇ ಜೀವವನ್ನು ಬಿಡುವೆ. ಕ್ಷತ್ರಿಯನಾದ ನೀನು ಅಜ್ಞಾನದಿಂದ ಮುನಿಪುತ್ರನನ್ನು ಕೊಂದೆ. ಅದು ಅಜ್ಞಾನದಿಂದ ಬಂದ ಕಾರಣ ನಿನಗೆ ಬ್ರಹ್ಮಹತ್ಯಾ ಪಾಪವು ಬರದಿರಲಿ, ವಿಶ್ವಾಸಪೂರ್ವಕವಾಗಿ ಬ್ರಾಹ್ಮಣರಿಗೆ ಕೊಡುವ ದಕ್ಷಿಣೆಯು ಫಲಸ್ವರೂಪವಾಗಿ ತಿರುಗಿ ಬರುವಂತೆ ನನ್ನ ಪ್ರಾಣಾಂತಕವಾದ ಘೋರ ಕರ್ಮವನ್ನು ಮಾಡಿದ ನಿನಗೂ ನನಗೆ ಬಂದ ಅವಸ್ಥೆಯು ಬಂದು ಪುತ್ರಶೋಕದಿಂದ ಶರೀರ ತ್ಯಾಗವಾಗುವುದು ಎಂದು ಶಾಪವನ್ನು ಕೊಟ್ಟನು. ಆತನು ಬಹಳವಾಗಿ ಹಂಬಲಿಸಿ ಕುಮಾರನ ಶರೀರವನ್ನು ಚಿತೆಯಲ್ಲಿರಿಸಿ ಅಗ್ನಿ ಪ್ರಜ್ವಲನಮಾಡಿ ತಾನು ತನ್ನ ಪತ್ನಿಯನ್ನು ಕೂಡಿ ಆ ಅಗ್ನಿಯಲ್ಲಿ ಪ್ರವೇಶಮಾಡಿ ಶರೀರವನ್ನು ಬಿಟ್ಟು ಸ್ವರ್ಗಲೋಕವನ್ನೈದಿದನು. ಈಗ ಪುತ್ರಶೋಕದಿಂದ ನನಗೆ ಆ ಪಾಪವು ಘಟಿಸಿತು ಆದ್ದರಿಂದ ಕೌಸ, ನಾನು ಅಜ್ಞಾನದಿಂದ ಶಬ್ದವೇಧಿಯೆಂಬ ಬಾಣವನ್ನು ಸಂಧಾನಮಾಡಿದ ಕಾರಣ ಬಂದ ಪಾಪವು, ವ್ಯಾಧಿಗ್ರಸ್ತನಾದವನು ಅಪಥ್ಯ ಮಾಡಿದರೆ ಆ ವ್ಯಾಧಿಯು ರೋಗಿಯನ್ನು ಕೊಲ್ಲುವಂತೆ ನನ್ನನ್ನು ಕೊಲ್ಲುತ್ತಿದೆ. ಆ ಮುನಿಯು ಆಡಿದ ಮಾತು ಸತ್ಯವಾಯಿತು ಕೌಸಲ್ಯ, ನನಗೆ ಕಣ್ಣು ಕಾಣಿಸುತ್ತಿಲ್ಲ. ಪುತ್ರಶೋಕದಿಂದ ಶರೀರವನ್ನು ಬಿಡುವೆನು. ಇನ್ನು ನಿನ್ನನ್ನೂ ಕಾಣುವಂತಿಲ್ಲ. ನೀನು ನನ್ನನ್ನು ಮೈ ಮುಟ್ಟಿ ನೋಡು. ಸಾಯುವವರಿಗೆ ಕಣ್ಣು ಕಾಣಿಸುವುದಿಲ್ಲ. ಶ್ರೀರಾಮನು ವನದಿಂದ ತಿರುಗಿ ಬಂದು ಯುವ ರಾಜಪಟ್ಟವನ್ನು ಕಟ್ಟಿಕೊಂಡು ನನ್ನ ಮೈ ಮುಟ್ಟಿದನಾದರೆ ನಾನು ಬದುಕಬಹುದು. ಕೌಸಲ್ಯ, ನಾನು ಶ್ರೀರಾಮನಿಗೆ ಅಪಕಾರ ಮಾಡಿದ ಹಾಗೆ ಲೋಕದಲ್ಲಿ ಮತ್ತೊಬ್ಬರು ತಮ್ಮ ಮಕ್ಕಳಿಗೆ ಅಪಕಾರವನ್ನು ಮಾಡಲಿಲ್ಲ. ಆತನು ನನಗೆ ಉಪಚಾರ ಮಾಡಿದ ಹಾಗೆ ಮತ್ತೊಬ್ಬ ಮಗನು ತಂದೆಗೆ ಉಪಚಾರ ಮಾಡಲಿಲ್ಲ. ಲೋಕದಲ್ಲಿ ದುರ್ಜನನಾದ ಮಗನನ್ನಾದರೂ ಬಿಟ್ಟವರಿಲ್ಲ. ತಂದೆಯು ಹೊರಡಿಸಿದರೆ ದ್ವೇಷವನ್ನು ಮಾಡದೆ ಹೊರಟುಹೋದವನನ್ನಾದರೂ ಕಾಣೆನು. ಇನ್ನು ನನಗೆ ಕಣ್ಣು ಕಾಣುವುದಿಲ್ಲ. ಪ್ರಜ್ಞೆ ತಪ್ಪಿತು. ಯಮದೂತರು ತಮ್ಮ ಸಂಗಡ ಬರಬೇಕೆಂದು ತ್ವರೆಮಾಡುತ್ತಿದ್ದಾರೆ.ನನಗೆ ಇದಕ್ಕಿಂತಲೂ ವೆಗ್ಗಳವಾದ ದುಃಖವಿಲ್ಲ. ಧರ್ಮಜ್ಞನೂ ಸತ್ಯಸಂಧನೂ ಅತಿಪರಾಕ್ರಮಿಯೂ ಆದ ಶ್ರೀರಾಮನನ್ನು ಕಾಣದಿರುವ ನನ್ನನ್ನು ಪುತ್ರಶೋಕವು, ಸೂರಕಿರಣಗಳು ಉದಕವನ್ನು ಹೀರಿ ಭಾವಿಯನ್ನು ಒಣಗಿಸುವಂತೆ, ನನ್ನ ಪ್ರಾಣಗಳನ್ನು ಒಣಗಿಸುತ್ತಿದೆ.

**ಮುಂದುವರಿಯುವುದು...**

# ಶ್ರೀ ಶನೈಶ್ಚರ ಜಯಂತಿ


■ **ಶ್ರೀಶ ಚರಣಾರಾಧಕ: ಕೆ.ವಿ.ಲಕ್ಷ್ಮೀನಾರಾಯಣಾಚಾರ್ಯ**

• ಉದಯವಾಹಿನಿ, ವಿಶೇಷ

**ತಪ್ಪು ಮಾಡುವವರ ಮನದಲ್ಲಿ ಭಯ ಹುಟ್ಟಿಸುವ, ಸಜ್ಜನರಲ್ಲಿ ಪ್ರೀತಿ ತೋರುವ ವಿಶೇಷ ಗ್ರಹ ಶನೈಶ್ಚರ. ತಪ್ಪು ಒಪ್ಪುಗಳ ನ್ಯಾಯಾಧೀಶ ಎಂದು ಭಾವಿಸುವ ಶ್ರೀಶನೈಶ್ಚರ ದೇವರ ಜನ್ಮದಿನದಂದು ಭಜಿಸೋಣ, ನಮಿಸೋಣ...**

**ನೀಲಾಂಜನ ಸಮಾಭಾಸಂ ರವಿ ಪುತ್ರಂ ಯಮಾಗ್ರಜಮ್।**
**ಛಾಯಾ ಮಾರ್ತಾಂಡ ಸಂಭೂತಂ ತಂ ನಮಾಮಿ ಶನೈಶ್ಚರಮ್ ॥**

ವೈಶಾಖಮಾಸ ಅಮಾವಾಸ್ಯೆಯಂದು ಶ್ರೀಶನೈಶ್ಚರ ಹುಟ್ಟಿದ ದಿನ. ಜಗತ್ ಚಕ್ಷುವಾದ ಶ್ರೀಸೂರ್ಯದೇವ ಹಾಗೂ ಛಾಯಾದೇವಿ ಮಾತಾಪಿತೃಗಳು. ಛಾಯಾಯಲ್ಲಿ ಜನಿಸಿದ ಶನೈಶ್ಚರನಿಗೆ ಧರ್ಮಾಧಿಪತಿಯಾದ ಸಹೋದರ ಯಮಧರ್ಮರಾಜ ಹಾಗೂ ತಪತಿ ಎಂಬ ಸಹೋದರಿಯಿದ್ದಾಳೆ.



ವಿಶೇಷವೆಂದರೆ ಸೂರ್ಯದೇವನ ಇಬ್ಬರೂ ಮಕ್ಕಳು ನ್ಯಾಯ ದೇವತೆಗಳು. ಮನುಷ್ಯ ಮಾಡುವ ಪಾಪ ಪುಣ್ಯಗಳನ್ನು ಗಮನಿಸಿ, ವ್ಯಕ್ತಿ ಜೀವಂತವಿರುವಾಗಲೇ ಶನಿ ಶಿಕ್ಷೆ ಹಾಗೂ ವರ ನೀಡುತ್ತಾನೆ. ಹಾಗೆಯೇ ಯಮ, ವ್ಯಕ್ತಿ ಮರಣಾನಂತರ ಅವನ ಪಾಪ ಪುಣ್ಯಗಳನ್ನು ಅನುಸರಿಸಿ ಶಿಕ್ಷೆ ನೀಡುತ್ತಾನೆ. (ಶನಿ ಹಾಗೂ ಯಮನನ್ನು ಕೆಲ ನಾಸ್ತಿಕರು ನಂಬದೆ ತೆಗಳುವುದುಂಟು. ಅವರ ಪ್ರಕಾರ ಇವರಿಬ್ಬರೂ ಕಾಲ್ಪನಿಕ ವ್ಯಕ್ತಿಗಳಿರಬಹುದು, ಆದರೆ ಇವರು ನೀಡುವ ಶಿಕ್ಷೆಯ ಭಯದಿಂದ ಜನರು ಪಾಪ (ತಪ್ಪು) ಮಾಡದೆ ಸರಿದಾರಿಯಲ್ಲಿ ನಡೆಯಲಿ ಎಂಬುದು ನಮ್ಮ ಪೂರ್ವಿಕರ ಆಶಯವಾಗಿತ್ತು ಶನಿ ಎಂಬ ಪದದ ಅರ್ಥ ತಿಳಿಯೋಣ. ಶನಿಯೇ ಕ್ರಮತಿ ಸಃ ಎಂದರೆ ಯಾರು ನಿಧಾನವಾಗಿ ಚಲಿಸುತ್ತಾರೋ ಅವರು ಎಂದರ್ಥ. ಶನಿಗ್ರಹವು ಸೂರ್ಯನನ್ನು ಒಂದು ಸುತ್ತು ಪ್ರದಕ್ಷಿಣೆ ಹಾಕಲು 30 ವರ್ಷಗಳ ಸಮಯ ಬೇಕಾದ ಕಾರಣ ಶನಿ ಎನ್ನಲಾಗುತ್ತದೆ, ಶನಿಯನ್ನು ಗೌರವ ಹಾಗೂ ಭಕ್ತಿ ಭಾವನೆಯಿಂದ ಶನೈಶ್ವರ, ಶನಿದೇವ ಎಂದೂ ಕರೆಯಲಾಗುತ್ತದೆ. ಶನೈಶ್ಚರನ ಶರೀರ ನೀಲಿ ಮಿಶ್ರಿತ ಕಪ್ಪು ಬಣ್ಣ, ಕೈಯಲ್ಲಿ ಬಿಲ್ಲು, ಬಾಣ ಹಿಡಿದಿದ್ದಾನೆ. ಮೂಲವಾಹನ ಗೃಧ್ರ(ರಣಹದ್ದು), ನಂತರದ ದಿನಗಳಲ್ಲಿ ಕಾಗೆ ಈತನ ವಾಹನವಾಯಿತು. ನವಗ್ರಹಗಳಲ್ಲಿ ಶನೈಶ್ಚರನದು ಏಳನೇ ಸ್ಥಾನ. ಈತ ಪಾಪಕಾರ್ಯ(ತಪ್ಪು) ಮಾಡಿದವರಿಗೆ ಅವರ ಕೆಲಸಗಳಲ್ಲಿ ಅಡೆತಡೆ, ದುರಾದೃಷ್ಟ ತರುತ್ತಾನೆ. ಒಲಿದರೆ ಅಮಿತ ಐಶ್ವರ್ಯ ನೀಡುತ್ತಾನೆ. ವ್ಯಕ್ತಿಯ ಜಾತಕದಲ್ಲಿ ಶನಿ ಅನುಗ್ರಹ ಸ್ಥಾನದಲ್ಲಿದ್ದರೆ, ಆ ವ್ಯಕ್ತಿ ಜೀವನದಲ್ಲಿ ಒಳ್ಳೆಯ ಭವಿಷ್ಯ, ಆರೋಗ್ಯಕರ ಜೀವನ, ಧನಾತ್ಮಕತೆ ಪ್ರಾಪ್ತವಾಗುತ್ತದೆ. ಇದರ ಜತೆ ಶನಿಯು ತಾನಾಗಿಯೇ ಎಂದಿಗೂ ಯಾರಿಗೂ ತೊಂದರೆ ನೀಡುವುದಿಲ್ಲ, ಮನುಷ್ಯ ಮಾಡುವ ಪಾಪ ಕರ್ಮಗಳನ್ನು ಗಮನಿಸಿ ಶನಿ ಅದಕ್ಕೆ ತಕ್ಕ ಸೂಕ್ತ ಫಲ (ಶಿಕ್ಷೆ) ನೀಡುತ್ತಾನೆ. ಶನಿಗ್ರಹವು ಸೂರ್ಯನನ್ನು ಒಂದು ಸುತ್ತು ಹಾಕಲು 30 ವರ್ಷಗಳು ಬೇಕು. ಈ ಅವಧಿಯೊಳಗೆ ಮೇಷರಾಶಿಯಿಂದಿಡಿದು ಮೀನರಾಶಿಯವರೆಗೆ 12 ರಾಶಿಗಳಲ್ಲೂ ಸಂಚರಿಸುತ್ತಾನೆ. ಪ್ರತಿಯೊಂದು ರಾಶಿಯಲ್ಲೂ ಎರಡೂವರೆ ವರ್ಷ ಕಾಲವನ್ನು ಕಳೆಯುತ್ತಾನೆ. ವ್ಯಕ್ತಿಯ ಜನ್ಮರಾಶಿಗೆ ಶನಿ ಬರುವ ಮೊದಲ ರಾಶಿಯಲ್ಲಿ 2.5 ವರ್ಷ ಹಾಗೂ ಜನ್ಮರಾಶಿಯಲ್ಲಿ 2.5 ವರ್ಷ ಮತ್ತು ಮುಂದೆ ಸಂಚರಿಸುವ ರಾಶಿಯಲ್ಲಿ 2.5 ವರ್ಷ. ಒಟ್ಟು 7.5 ವರ್ಷ ಕಾಟ ಕೊಡುತ್ತಾನೆ. ಇದನ್ನು ಸಾಡೇಸಾತಿ ಅಥವಾ ಏಳರಾಟ ಶನಿ ಎನ್ನುತ್ತಾರೆ. ಈ ಅವಧಿ ಮೂರು ರಾಶಿಗಳ ಜನರಿಗೆ ಅತ್ಯಂತ ತ್ರಾಸದಾಯಕವಾಗಿರುತ್ತದೆ. ಈ ಸಮಯದಲ್ಲಿ ಶನೈಶ್ಚರ ಕ್ರೂರ ದೃಷ್ಟಿ ಉಳ್ಳವನಾಗಿರುತ್ತಾನೆ ಹಾಗಾಗಿ ಅತಿ ಜಾಗರೂಕತೆಯಿಂದ ಇರಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ಹನುಮಂತದೇವರ ಮೊರೆಹೋಗಬೇಕು ಅಥವಾ ಶನಿಯನ್ನು ಆರಾಧಿಸಬೇಕು. ಮುಖ್ಯವಾಗಿ ಶನಿಗೆ ಎಳ್ಳೆಣ್ಣೆ ಅಭಿಷೇಕ ಮಾಡಿಸಿ, ಹನುಮಂತದೇವರನ್ನು ಅರ್ಚಿಸಬೇಕು.

**ಎಳ್ಳೆಣ್ಣೆಯ ಪ್ರಾಮುಖ್ಯತೆ:** ಲಂಕಾಧಿಪತಿ ರಾವಣ, ತನ್ನ ಮಗ ಮೇಘನಾದ(ಇಂದ್ರಜಿತು)ನ ಜನ್ಮ ಕುಂಡಲಿಯಲ್ಲಿ ಯಾವುದೇ ಗ್ರಹಗಳು ಇರಬಾರದೆಂದು ಆಲೋಚಿಸಿ, ನವಗ್ರಹಗಳನ್ನು ಕೊಠಡಿಗಳಲ್ಲಿ ಕೂಡಿಹಾಕುತ್ತಾನೆ. ಶನಿಯನ್ನು ಮಾತ್ರ ಈತನ ದೃಷ್ಟಿ ಯಾರ ಮೇಲೂ ಬೀಳಬಾರದೆಂದು, ವಿಶೇಷವಾದ ಕಿಟಕಿಯೇ ಇಲ್ಲದ ಕೋಣೆಯಲ್ಲಿ ಬಂಧಿಸುತ್ತಾನೆ. ಇದರಿಂದ ಶನಿಗೆ ಯಾರ ಮುಖವನ್ನೂ ನೋಡಲು ಸಾಧ್ಯವಾಗುವುದಿಲ್ಲ. ಹೀಗೆ ಕಾಲ ಸಾಗುತ್ತಿದ್ದಂತೆ ಹನುಮಂತ ಸೀತೆಯನ್ನರಸಿ ಲಂಕೆಗೆ ಬಂದ. ಅಲ್ಲಿ ನಡೆದ ಕದನದಲ್ಲಿ ಅಕ್ಷಯ ಕುಮಾರನನ್ನು ಸಂಹರಿಸಿದ. ಈ ಸುದ್ದಿ ತಿಳಿದು ಹನುಮನ ಬಾಲಕ್ಕೆ ರಾವಣ ಬೆಂಕಿ ಇಡಿಸಿದ. ಈ ಸಮಯದಲ್ಲಿ ಹನುಮಂತ ಇಡಿ ಲಂಕೆಗೆ ಬೆಂಕಿ ಹಚ್ಚಿದ. ಬೆಂಕಿ ಜ್ವಾಲೆಯಿಂದಾಗಿ ಶನಿ ಹಾಗೂ ಉಳಿದ ಗ್ರಹಗಳಿದ್ದ ಕೊಠಡಿಗಳ ಬಾಗಿಲು ಸುಟ್ಟುಹೋಗಿ, ಗ್ರಹಗಳು ಬಂಧನದಿಂದ ವಿಮುಕ್ತಿ ಪಡೆಯುತ್ತಾರೆ.

ಇತ್ತ ಲಂಕೆಗೆ ಬೆಂಕಿ ಹಚ್ಚಿದ ಹನುಮಂತ ಅಶೋಕ ವನದಲ್ಲಿದ್ದ ಸೀತೆಗೆ ಅಪಾಯವಾಗಬಾರದು, ಅಲ್ಲಿನ ಬೆಂಕಿ ಹಾರಿಹೋಗಲಿ ಎಂದು ಶ್ರೀರಾಮನಲ್ಲಿ ಪ್ರಾರ್ಥನೆ ಸಲ್ಲಿಸುತ್ತಿದ್ದ. ಈ ಸಮಯಾವಕಾಶ ನೋಡಿದ ಶನಿಯು ಸ್ವಲ್ಪ ತಮಾಷೆ ಮಾಡಲೆಂದು ಹನುಮಂತನ ಬಳಿ ಬಂದು, ನೀನು ಬಹು ಪರಾಕ್ರಮಿಯಂತೆ, ನೋಡೋಣ ನನ್ನೊಂದಿಗೆ ಯುದ್ಧ ಮಾಡು ಎಂದು ಯುದ್ಧಕ್ಕೆ ಆಹ್ವಾನಿಸಿದ.

ಪ್ರಾರ್ಥನೆಯಲ್ಲಿ ಮಗ್ನನಾಗಿದ್ದ ಹನುಮಂತ, ನಾನೀಗ ನನ್ನ ಇಷ್ಟ ದೇವರ ಪ್ರಾರ್ಥನೆ ಮಾಡುತ್ತಿರುವೆ. ಈ ಸಮಯದಲ್ಲಿ ನನ್ನನ್ನು ಚಂಚಲಗೊಳಿಸಬೇಡ ಪ್ರಾರ್ಥಿಸಲು ಬಿಡು ಎಂದು ಹೇಳಿದ. ಆದರೆ ಶನಿದೇವ ಮತ್ತೆ ಮತ್ತೆ ಯುದ್ಧಕ್ಕೆ ಬರುವಂತೆ ಪ್ರೇರೇಪಿಸಿದ. ಇದರಿಂದ ತಾಳ್ಮೆ ಕಳೆದುಕೊಂಡ ಹನುಮಂತ ಸಿಟ್ಟಿಗೆದ್ದು, ತನ್ನ ಬಾಲದಿಂದ ಶನಿದೇವರ ದೇಹವನ್ನು ಸುತ್ತಿದ. ನಿಧಾನವಾಗಿ ಒತ್ತಡ ಹೆಚ್ಚಿಸುತ್ತಿದ್ದಂತೆ ಬಾಧೆಗೊಳಗಾದ ಶನಿದೇವ ತಪ್ಪಿಸಿಕೊಳ್ಳಲು ಎಷ್ಟೇ ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ಹನುಮಂತದೇವರು ಕೊನೆಗೆ ತನ್ನ ಬಾಲದಿಂದ ಶನಿದೇವನನ್ನು ಒಂದು ಬಾರಿ ಜೋರಾಗಿ ಎತ್ತಿ ಆಡಿಸಿದ. ಈ ನೋವನ್ನು ತಡೆದುಕೊಳ್ಳಲಾಗದೆ ಶನಿದೇವ ಸೋಲನ್ನು ಒಪ್ಪಿಕೊಂಡು, ಹನುಮಂತನ ಬಳಿ ದಯಾ ಭಿಕ್ಷೆ ಬೇಡಿದ. ಶನಿಯ ಸ್ಥಿತಿಯನ್ನು ನೋಡಿ ಮರುಕಗೊಂಡು, ಇನ್ನೂ ಮುಂದೆ ನೀನು ಎಂದಿಗೂ ರಾಮ ಭಕ್ತರಿಗೆ ತೊಂದರೆ ಮಾಡುವುದಿಲ್ಲವೆಂಬ ಭರವಸೆ ನೀಡಿದರೆ ಮಾತ್ರ ಬಿಡುಗಡೆ ಮಾಡುವೆ ಎಂಬ ಷರತ್ತು ಒಡ್ಡಿದ. ಇದಕ್ಕೆ ಒಪ್ಪಿದ ಶನಿ, ಹನುಮನ ಮಾತಿನಂತೆ ಭಾಷೆ ನೀಡಿದ.

ಹನುಮನ ಬಾಲದ ಬಿಗಿಪಟ್ಟಿನ ಬಂಧನದಿಂದ ಬಿಡುಗಡೆಗೊಂಡ ಶನಿಯು ತನ್ನ ದೇಹದ ನೋವು ತಡೆಯಲಾರದೆ ಬಾಧೆಗೊಳಗಾದ. ಶರೀರದ ನೋವನ್ನು ಕಡಿಮೆಗೊಳಿಸುವ ಉಪಾಯ ತಿಳಿಸುವಂತೆ ಹನುಮಂತನನ್ನು ಬೇಡಿದ. ಆಗ ಹನುಮಂತ ಎಳ್ಳೆಣ್ಣೆಯನ್ನು ನೀಡಿದ, ಆ ಎಣ್ಣೆಯನ್ನು ಹಚ್ಚಿದ ಬಳಿಕ ಶನಿದೇವನ ದೇಹದ ನೋವು ಕಡಿಮೆಯಾಯಿತು.

ಹಾಗಾಗಿ ಶನಿದೇವರ ಪ್ರಭಾವ ಇರುವವರು ಹನುಮಂತ ದೇವರನ್ನು ಆರಾಧಿಸಿದರೆ ಅವರ ತೊಂದರೆಗಳು ನಿವಾರಣೆಯಾಗುತ್ತವೆ ಎಂಬುದನ್ನು ಪುರಾಣಗಳಿಂದ ತಿಳಿಯಬಹುದು. ಅಂದಿನಿಂದ ಶನಿಕಾಟ ನಿವಾರಣೆಗೆ ಶನಿವಾರ ಹನುಮಂತದೇವರ ಪೂಜೆ ಹಾಗೂ ಪ್ರಾರ್ಥನೆ, ಜತೆಗೆ ಶನೈಶ್ಚರನಿಗೆ ಎಳ್ಳೆಣ್ಣೆಯನ್ನು ಅರ್ಪಿಸುವ ಸೇವೆ ವಿಶೇಷವಾಗಿದೆ. ಇಂತಹಾ ಶ್ರೀಶನೈಶ್ಚರನನ್ನು ಪ್ರಾರ್ಥಿಸೋಣ, ಪಾಪ ಕಾರ್ಯಗಳನ್ನು ಮಾಡದೆ ಸನ್ಮಾರ್ಗದಲ್ಲಿ ನಡೆಯೋಣ. ಸರ್ವರಿಗೂ ಒಳಿತನ್ನು ಬಯಸಿ ಸಜ್ಜನರಾಗೋಣ. ಶ್ರೀಶನೈಶ್ಚರಾಂತರ್ಗತ ಭಾರತಿರಮಣ ಮುಖ್ಯಪ್ರಾಣಾಂತರ್ಗತ ಶ್ರೀಲಕ್ಷ್ಮೀನೃಸಿಂಹ ದೇವರು ನಮ್ಮನ್ನು ರಕ್ಷಿಸಲಿ....

ಶ್ರೀವಾದಿರಾಜತೀರ್ಥ ಶ್ರೀಚರಣವಿರಚಿತಂ ಶ್ರೀಶನಿಸ್ತೋತ್ರ. ಶನೇ ದಿನಮಣೇಃ ಸೂನೋ ಹ್ಯನೇಕಗುಣಸನ್ಮಣೇ। ಅರಿಷ್ಟಂ ಹರ ಮೇಽಭೀಷ್ಟಂ ಕುರು ಮಾ ಕುರು ಸಂಕಟಮ್ ॥

• ಮಳೆಗಾಲ ಬಂದರೂ ಜಿಲ್ಲಾಕೇಂದ್ರದ ಸ್ವಚ್ಛತೆಗಿಲ್ಲ ಆದ್ಯತೆ: ಬಹುತೇಕ ಬಡಾವಣೆಗಳಲ್ಲಿ ಹಳಿತಪ್ಪಿದ ಸ್ವಚ್ಛತೆ

# ಚರಂಡಿಯಲ್ಲಿ ತ್ಯಾಜ್ಯದ ರಾಶಿ: ಅನಾರೋಗ್ಯದ ಭೀತಿ

• ಉದಯವಾಹಿನಿ ಕೊಪ್ಪಳ

ಎರಡು ತಿಂಗಳು ಬಿರುಬಿಸಿಲಿಗೆ ಬೇಸತ್ತು ಹೋಗಿದ್ದ ಜಿಲ್ಲೆಯ ಜನರಿಗೆ ಈಗ ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದಾಗಿ ವಾತಾವರಣ ತಂಪೆನಿಸುತ್ತಿದೆ. ಒಂದೆಡೆ ಮುಂಗಾರು ಹಂಗಾಮಿನ ಕೃಷಿ ಚಟುವಟಿಕೆ ಚುರುಕು ಪಡೆದುಕೊಂಡಿದ್ದರೆ, ಇನ್ನೊಂದಡೆ ಜನರಿಗೆ ಅನೈರ್ಮಲ್ಯ ವಾತಾವರಣದಿಂದ ಸಾಂಕ್ರಾಮಿಕ ರೋಗಗಳ ಭೀತಿ ಕಾಡುತ್ತಿದೆ.

ಪ್ರತಿ ಮಳೆಗಾಲ ಸಮೀಪಿಸಿದಾಗ ನಗರದ ಬಡಾವಣೆಗಳಲ್ಲಿರುವ ಚರಂಡಿಗಳನ್ನು ಸ್ವಚ್ಛಗೊಳಿಸುವುದು, ಒಂದೇ ಕಡೆ ಕೊಳಚೆ ನೀರು ನಿಲ್ಲದಂತೆ ನೋಡಿಕೊಳ್ಳುವುದು, ಚರಂಡಿಯಲ್ಲಿ ತ್ಯಾಜ್ಯದ ರಾಶಿ ಬಿದ್ದಿದ್ದರೆ ತೆರವು ಮಾಡುವುದು ಹಾಗೂ ಜನರ ಆರೋಗ್ಯಕ್ಕೆ ತೊಂದರೆಯಾಗದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವುದು ನಗರಸಭೆ ಮತ್ತು ಆರೋಗ್ಯ ಇಲಾಖೆಯ ಕರ್ತವ್ಯ.

ನಗರದ ವಿವಿಧ ವಾರ್ಡ್‌ಗಳಿಗೆ ತೆರಳಿದಾಗ ಕಂಡಿದ್ದು ಕೆಟ್ಟ ವಾಸನೆ. ಮತ್ತೆ ಮಳೆ ಬಂದರೆ ರೋಗ ಬರುವ ಮುನ್ಸೂಚನೆ. ಅದರಲ್ಲಿಯೂ ವಿಶೇಷವಾಗಿ ಗಣೇಶ ತೆಗ್ಗು ಎಂದೇ ಹೆಸರಾದ ಗಣೇಶ ನಗರ ಬಡಾವಣೆ ಅನೈರ್ಮಲ್ಯದ ಕೂಪವಾಗಿದೆ. ಈ ಬಡಾವಣೆಯ ಕೆಲವು ಓಣಿಗಳಲ್ಲಿ ಒಂದು ಬದಿಯಲ್ಲಿ ಗಟಾರದ ಮೇಲೆ ನಗರಸಭೆ ಕಲ್ಲುಗಳನ್ನು ಹಾಕಿದ್ದರೆ, ಇನ್ನೊಂದು ಬದಿಯಲ್ಲಿ ಜನವಸತಿ ಇರುವ ಪ್ರದೇಶದಲ್ಲಿ ಕೆಟ್ಟ ವಾಸನೆ ರಾಚುತ್ತದೆ. ಪ್ರತಿ ವರ್ಷ ಸ್ವಲ್ಪ ಜೋರಾಗಿ ಮಳೆ ಬಂದರೂ ಕೊಪ್ಪಳ ಹಾಗೂ ಭಾಗ್ಯನಗರವನ್ನು ವಿಭಜಿಸುವ ಬೃಹತ್ ನೀರು ಹರಿಯುವ ಗಟಾರದ ನೀರು ಗಣೇಶ ನಗರದ ಮನೆಗಳಿಗೆ ನುಗ್ಗುತ್ತದೆ. ಈ ಚರಂಡಿ ಹೆಸರಿಗಷ್ಟೇ ಬೃಹತ್ ಇದ್ದರೂ ವಾಸ್ತವದಲ್ಲಿ ಪ್ರತಿವರ್ಷವೂ ಒಂದಷ್ಟು ಕಡಿಮೆಯಾಗುತ್ತಲೇ ಸಾಗಿದೆ. ಒತ್ತುವರಿ ತೆರವು ಮಾಡುತ್ತೇವೆ ಎಂದು ಹೇಳುವ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಘಟನೆ ಒಂದಷ್ಟು ದಿನಗಳ ಬಳಿಕ ಸಮಸ್ಯೆಯತ್ತ ತಿರುಗಿಯೂ ನೋಡುವುದಿಲ್ಲ ಎಂದು ಗಣೇಶ ನಗರದ ನಿವಾಸಿಗಳು ಬೇಸರ ವ್ಯಕ್ತಪಡಿಸುತ್ತಾರೆ.

ಕೊಪ್ಪಳದ ಮೂಲಕ ಭಾಗ್ಯನಗರ ಭಾಗದಲ್ಲಿ ಹರಿಯುವ ಚರಂಡಿ ಮುಂದೆಯೇ ಬಾಡಿಗೆ ಮನೆಯಲ್ಲಿ ವಾಸಿಸುತ್ತಿರುವ ಶಂಕ್ರಮ್ಮ ಹಡಪದ ಎನ್ನುವ ಗೃಹಿಣಿ 'ಮಳೆ ನೀರಿನ ಜೊತೆಗೆ ಚರಂಡಿ ನೀರು, ತ್ಯಾಜ್ಯದ ರಾಶಿ, ಪ್ಲಾಸ್ಟಿಕ್ ಎಲ್ಲವೂ ಹರಿದು ಬರುತ್ತವೆ. ಸ್ವಲ್ಪ ಮಳೆ ಜೋರಾದರೂ ಮನೆಯ ಮೆಟ್ಟಿಲತನಕ ನೀರು ಬರುತ್ತದೆ. ಮೊದಲು ಬೇರೊಂದು ಮನೆಯಲ್ಲಿ ವಾಸವಿದ್ದಾಗ ಚರಂಡಿ ನೀರಿನದ್ದೇ ಸಮಸ್ಯೆಯಿತ್ತು. ಇಲ್ಲಿಯೂ ಅದೇ ಸಮಸ್ಯೆ ಕಾಡುತ್ತಿದೆ. ಸಂಜೆಯಾಗುತ್ತಿದ್ದಂತೆಯೇ ಮನೆಯ ಎಲ್ಲಾ ಕಿಟಕಿ ಹಾಗೂ ಬಾಗಿಲುಗಳನ್ನು ಹಾಕಲೇಬೇಕು. ಇಲ್ಲವಾದರೆ ಸೊಳ್ಳೆಗಳ ಕಾಟ ತಡೆಯಲು ಅಗುವುದಿಲ್ಲ' ಎಂದು ಸಮಸ್ಯೆ ತೋಡಿಕೊಂಡರು. ಸಮಸ್ಯೆಗಳ ಮೂಟೆಗಳನ್ನು ಹೊತ್ತ ಗಣೇಶ ನಗರದಲ್ಲಿ ಎರಡು ದಶಕಗಳಿಂದ ವಾಸವಿರುವ ಗೃಹಿಣಿ ವಿಜಯಲಕ್ಷ್ಮಿ ಮನೆಯ ಮುಂದೆಯೇ ಖಾಲಿ ನಿವೇಶನವಿದೆ.





ಉದಯವಾಹಿನಿ ಚಿತ್ರ

**ಸಾಂಕ್ರಾಮಿಕ ರೋಗಗಳ ಭೀತಿ**

> **ಮಳೆ ನೀರಿನ ಜೊತೆಗೆ ಅದರಲ್ಲಿನ ಹಾವುಗಳು ಚೇಳುಗಳು ಕೂಡ ಮನೆಯ ಮೆಟ್ಟಿಲು ತನಕ ಬರುತ್ತವೆ. ಕೆಟ್ಟ ವಾಸನೆಯಂತೂ ನಿರಂತರ. ಈ ಸಮಸ್ಯೆಗೆ ಕಾಯಂ ಪರಿಹಾರ ಒದಗಿಸಬೇಕು. ಸಂಜೆಯಾದರೆ ಸಾಕು ಮನೆಯ ಬಾಗಿಲು ಹಾಗೂ ಕಿಟಕಿಗಳನ್ನು ಮುಚ್ಚಬೇಕಾದ ದುಸ್ಥಿತಿಯಿದೆ -ಕಮಲಮ್ಮ ಹಡಪದ**

ಬೇಡವೆಂದರೂ ಜನ ಅಲ್ಲಿ ಕಸ ಚೆಲ್ಲುವುದರಿಂದ ಸಾಮಾನ್ಯ ದಿನಗಳಲ್ಲಿಯೇ ಕೆಟ್ಟ ವಾಸನೆ ತಡೆಯಲು ಆಗುವುದಿಲ್ಲ. ಮಳೆಗಾಲ ಬಂದರಂತೂ ಚರಂಡಿ ತುಂಬಿ ರಸ್ತೆಗೆಲ್ಲ ಕೊಳಚೆ ನೀರು ಹರಿಯುತ್ತದೆ.

ಕಳೆದ ವರ್ಷ ಮಳೆಯಿಂದಾಗಿ ಬಡಾವಣೆ ಜನರಿಗೆ ಸಮಸ್ಯೆಯಾದಾಗ ಬಂದಿದ್ದ ಜನಪ್ರತಿನಿಧಿಗಳು ಮತ್ತೆ ಅದರ ಬಗ್ಗೆ ತಲೆಕೆಡಿಸಿಕೊಂಡಿಲ್ಲ ಎಂದು ಹೇಳಿದರು. ಅದೇ ಬಡಾವಣೆಯ ಯುವಕ ಶ್ರೀಕಾಂತ್ ಇದಕ್ಕೆ ಧ್ವನಿಗೂಡಿಸಿದರು. ಜಿಲ್ಲಾ ಕೇಂದ್ರದ ಪ್ರಮುಖ ನಗರಗಳಲ್ಲಿ ಒಂದಾದ ಕಲ್ಯಾಣ ನಗರದಲ್ಲಿಯೂ ಇದೇ ಸಮಸ್ಯೆ. ಪದಕಿ ಲೇಔಟ್, ಶಿವಗಂಗಾ ನಗರ ಹೀಗೆ ಅನೇಕ ಬಡಾವಣೆಗಳಲ್ಲಿ ಚರಂಡಿಯಲ್ಲಿ ಸರಾಗವಾಗಿ ನೀರು ಹರಿಯುವುದೇ ದೊಡ್ಡ ಸಮಸ್ಯೆಯಾಗಿದೆ.

> **ಆರು ವರ್ಷಗಳಿಂದ ವಾಸವಾಗಿದ್ದೇನೆ. ಮಳೆ ಸ್ವಲ್ಪ ಜೋರಾಗಿ ಬಂದರೂ ಮನೆಯ ಮುಂದೆ ಚರಂಡಿ ನೀರು ಬರುವುದು ನಿಶ್ಚಿತ. ನಗರಸಭೆಯಿಂದ ಕಸ ಸಂಗ್ರಹ ವಾಹನ ಬಂದರೂ ಜನ ಕಸವನ್ನು ಚರಂಡಿಯಲ್ಲಿ ಚೆಲ್ಲುತ್ತಾರೆ -ಬಸಣ್ಣ ,ಗಣೇಶ ನಗರ**

ಕಲ್ಯಾಣ ನಗರದಲ್ಲಿ ಕೆಲವು ಮನೆಗಳ ಹಿಂದೆ ಕೊಳಕು ಜಲರಾಶಿಯೇ ಇದ್ದು, ಅಲ್ಲಿ ವಾಸವಿರುವ ಜನ ಸದಾ ಹಿತ್ತಿಲ ಬಾಗಿಲು ಮುಚ್ಚಿಕೊಂಡೇ ಇರಬೇಕಾದ ಅನಿವಾರ್ಯತೆಯಿದೆ. ಗಣೇಶ ನಗರದಲ್ಲಿ ಅಂಗನವಾಡಿ ಕೇಂದ್ರದ ಮುಂಭಾಗದಲ್ಲಿಯೇ ಕೊಳಚೆ ನೀರು ಮೂಗಿಗೆ ಅಡರುತ್ತದೆ. ಮಳೆಗಾಲಕ್ಕೂ ಮೊದಲೇ ನಗರಸಭೆ ಆಡಳಿತ ಹಾಗೂ 31 ವಾರ್ಡ್‌ಗಳ ಸದಸ್ಯರು ತಮ್ಮ ವ್ಯಾಪ್ತಿಯ ಬಡಾವಣೆಗಳ ಕುಂದುಕೊರತೆಗಳನ್ನು ಆಲಿಸಬೇಕು, ಈಗ ಕೋವಿಡ್ ಪ್ರಕರಣಗಳ ಸಂಖ್ಯೆ ಇಯೂ ನಿಧಾನವಾಗಿ ಹೆಚ್ಚಾಗುತ್ತಿರುವುದು ಹಾಗೂ ಕೊಳಚೆ ನೀರಿನಿಂದ ಸಾಂಕ್ರಾಮಿಕ ರೋಗದ ಭೀತಿಯಿರುವ ಕಾರಣ ಚರಂಡಿ ನೀರಿನ ಮೇಲೆ ರಾಸಾಯನಿಕ ಸಿಂಪಡಿಸುವ ಕೆಲಸವಾದರೂ ಆಗಬೇಕು ಎಂದು ಜನ ಹೇಳುತ್ತಾರೆ.

## ಮುಂಗಾರುಪೂರ್ವ ಮಳೆಯ ಅಬ್ಬರಕ್ಕೆ ಸಿಲುಕಿದ ಮಲೆನಾಡು

• ಉದಯವಾಹಿನಿ ಸಾಗರ

ತಾಲ್ಲೂಕಿನಲ್ಲಿ ಕಳೆದ ಒಂದು ವಾರದಿಂದ ಮುಂಗಾರು ಪೂರ್ವ ಮಳೆಯ ಅಬ್ಬರ ಜೋರಾಗಿದ್ದು, ಸತತವಾಗಿ ಮಳೆ ಸುರಿಯುತ್ತಿದೆ. ನಗರ ಪ್ರದೇಶದಲ್ಲಿ ಹಲವೆಡೆ ಚರಂಡಿಗಳ ದುರವಸ್ಥೆಯಿಂದ ನೀರು ಸರಾಗವಾಗಿ ಹರಿಯದೆ ರಸ್ತೆಯ ಮೇಲೆ ನೀರು ನಿಂತಿದ್ದು ವಾಹನ, ಪಾದಚಾರಿಗಳ ಸಂಚಾರಕ್ಕೆ ಅಡ್ಡಿ ಉಂಟು ಮಾಡಿದೆ.

ಗ್ರಾಮೀಣ ಭಾಗದಲ್ಲಿ ಹಲವೆಡೆ ವಿದ್ಯುತ್ ಕಂಬಗಳು ಉರುಳಿ ಬಿದ್ದಿದ್ದು ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದೆ. ಕೆಲವೆಡೆ ಸರ್ಕಾರಿ ಶಾಲಾ ಕಟ್ಟಡಗಳಿಗೆ ಹಾನಿ ಸಂಭವಿಸಿದೆ. ಮಾರ್ಚ್ 1 ರಿಂದ ಮೇ 26ರವರೆಗೆ 89.8 ಮಿ.ಮೀ. ವಾಡಿಕೆ ಮಳೆಯಾಗಬೇಕಿತ್ತು. ಆದರೆ ಈ ಅವಧಿಯಲ್ಲಿ 274.6 ಮಿ.ಮೀ. ಮಳೆಯಾಗಿದೆ. ತಾಲ್ಲೂಕಿನಲ್ಲಿ 550 ಹೆಕ್ಟೇರ್ ಪ್ರದೇಶದಲ್ಲಿ ಬೇಸಿಗೆಯಲ್ಲಿ ಭತ್ತ, ಜೋಳ ಬೆಳೆಯಲಾಗಿದ್ದು ಶೇ 80ರಷ್ಟು ಬೆಳೆ ಕಟಾವು ಮುಗಿದಿದೆ. ಹೀಗಾಗಿ ಉಳಿದ ಬೆಳೆಗೆ ಅವಧಿಪೂರ್ವ ಮುಂಗಾರು ಮಳೆಯಿಂದಾಗಿ ತೊಂದರೆ ಉಂಟಾಗಿದೆ ಎಂದು ಕೃಷಿ ಇಲಾಖೆ ಮೂಲಗಳು ತಿಳಿಸಿವೆ.



ಉದಯವಾಹಿನಿ ಚಿತ್ರ

> **ಮಳೆಯ ಪ್ರಮಾಣ ತಗ್ಗದಿರುವುದರಿಂದ ಬೇಸಿಗೆ ಬೆಳೆಗೆ ಹಾನಿ ಉಂಟಾಗಿರುವ ಪ್ರದೇಶಕ್ಕೆ ಭೇಟಿ ನೀಡಲು ಇಲಾಖೆ ಸಿಬ್ಬಂದಿಗೆ ಸಾಧ್ಯವಾಗುತ್ತಿಲ್ಲ. ಮಳೆಯ ಪ್ರಮಾಣ ಕಡಿಮೆಯಾಗುತ್ತಿದ್ದಂತೆ ಸ್ಥಳಕ್ಕೆ ಭೇಟಿ ನೀಡಿ ಹಾನಿಯ ಕುರಿತು ಪರಿಶೀಲಿಸಿ ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು -ಚಂದ್ರಕುಮಾರ್ ಕೃಷಿ ಇಲಾಖೆ ಸಹಾಯಕ ನಿರ್ದೇಶಕ**

## ಲೋಕ ವಿಮರ್ಶೆಗೆ ಮಾಧ್ಯಮಗಳ ಅಗತ್ಯ: ಬಾಲಾಜಿ ಕುಂಬಾರ

• ಉದಯವಾಹಿನಿ ಬಸವಕಲ್ಯಾಣ

ಲೋಕದ ಕ್ರೀಯಾಶೀಲತೆಗೆ ಹಾಗೂ ವಿಮರ್ಶೆಗೆ ಮಾಧ್ಯಮಗಳ ಅಗತ್ಯವಿದೆ. ಸಾಹಿತ್ಯ ಕೃತಿಗಳ ಅನುಸಂಧಾನ, ಪತ್ರಿಕೆಗಳ ಓದು, ಮಾಧ್ಯಮಗಳ ಅಧ್ಯಯನದಿಂದ ಪ್ರತಿಯೊಬ್ಬರಲ್ಲಿ ಸಾಮಾಜಿಕ ಹೊಣೆಗಾರಿಕೆ ಬರುತ್ತದೆ. ಹೊಸ ಅರಿವಿಗೆ ಮಾಧ್ಯಮಗಳು ದಾರಿಯಾಗಿವೆ ಎಂದು ಬೀದರನ ಪತ್ರಕರ್ತ ಬಾಲಾಜಿ ಕುಂಬಾರ ಹೇಳಿದರು.

ಬಸವಕಲ್ಯಾಣದ ಶ್ರೀ ಬಸವೇಶ್ವರ ಪದವಿ ಕಾಲೇಜಿನಲ್ಲಿ ಮಾಧ್ಯಮಗಳು ಮತ್ತು ಸಮಕಾಲೀನ ಸ್ಪಂದನೆ ಕುರಿತು ಹಮ್ಮಿಕೊಂಡಿದ್ದ ಉಪನ್ಯಾಸ ಹಾಗೂ ಸಂವಾದ ಸಮಾರಂಭದಲ್ಲಿ ಮಾತನಾಡಿದ ಅವರು, ನಮ್ಮ ಸುತ್ತಲಿನ ಆಗು ಹೋಗುಗಳ ಬಗೆಗೆ ಪ್ರಜ್ಞೆ ಮೂಡಿಸುವ ಕೆಲಸ ಮಾಧ್ಯಮಗಳಿಂದ ಸಾಧ್ಯವಾಗುತ್ತದೆ ಎಂದರು.

ಹಳ್ಳಿ , ನಗರ ಸೇರಿದಂತೆ ಎಲ್ಲಡೆ ಸಮಸ್ಯೆ ಇದ್ದೇ ಇರುತ್ತವೆ. ಆ ಸಮಸ್ಯೆಗಳನ್ನು ಮಾಧ್ಯಮಗಳು ಪ್ರಭುತ್ವಕ್ಕೆ , ಆಳುವವರಿಗೆ, ಅಧಿಕಾರದಲ್ಲಿರುವವರಿಗೆ ತಲುಪಿಸುವ ಕೆಲಸ ಮಾಡುತ್ತವೆ. ಆಡಳಿತಾತ್ಮಕ ಸುಧಾರಣೆಗೆ, ಜನತೆಯ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಮಾಧ್ಯಮಗಳ ಶ್ರಮಿಸುತ್ತವೆ ಎಂದರು. ಸತ್ಯಾಸತ್ಯತೆ ಕುರಿತು ಹಿಂದೆಂದಿಗಿಂತಲೂ ಹೆಚ್ಚು ಒರೆಗೆ ಹಚ್ಚಬೇಕಿದೆ. ಸಾಮಾಜಿಕ ಜಾಲತಾಣಗಳಲ್ಲಿ ಬರುವ ಎಲ್ಲಾ ಮಾಹಿತಿಗಳ ನಿಖರತೆ, ಅಧಿಕೃತತೆ ಗಮನಿಸುವ ಅಗತ್ಯವಿದೆ ಎಂದರು.

ಸಮಕಾಲೀನ ಸ್ಪಂದನೆಯ ಗುಣವಿರುವ ಮಾಧ್ಯಮಗಳು ಎಂದಿಗೂ ಜನರ ಹೃದಯದಲ್ಲಿ ನೆಲೆಸುತ್ತವೆ. ಸಾಮಾಜಿಕ ಸಂಕೀರ್ಣತೆ, ಸಮಸ್ಯೆಗಳು ತೊಡೆದು ಹಾಕುವ ಪ್ರಾಮಾಣಿಕ ಕೆಲಸ ಮಾಧ್ಯಮಗಳು ನಿರಂತರ ಮಾಡುತ್ತಿವೆ. ಮಾಧ್ಯಮಗಳು ಇಲ್ಲದ ಲೋಕ ಊಹಿಸಲು ಸಾಧ್ಯವಿಲ್ಲ. ಪತ್ರಿಕೆಗಳು ಇಲ್ಲದಿದ್ದರೆ ಜಡ ಜಗತ್ತು ರೂಪುಗೊಳ್ಳುವ ಸಾಧ್ಯತೆ ಇತ್ತು. ಪ್ರಭುತ್ವ , ರಾಜಕಾರಣ, ಸಮಾಜ, ಕೃಷಿ, ಪರಿಸರ , ವಿಜ್ಞಾನ, ತಂತ್ರಜ್ಞಾನ ಹೀಗೆ ಅಗಾಧ ಸಂಗತಿಗಳು ಜನರಿಗೆ ತಲುಪಿಸುವ ಮೂಲಕ ಮಾಧ್ಯಮಗಳು ಸಮಾಜವನ್ನು ಬೆಳೆಸುತ್ತಿವೆ ಎಂದರು.



ಉದಯವಾಹಿನಿ ಚಿತ್ರ

> **ಮಾಧ್ಯಮಗಳು ತಮ್ಮ ಸಾಂಸ್ಕೃತಿಕ ಹೊಣೆಗಾರಿಕೆಯಿಂದ ಪ್ರಜಾಪ್ರಭುತ್ವ, ಮಾನವೀಯತೆಯ ಜೀವಂತಿಕೆಯನ್ನು ಕಾಪಾಡಿವೆ. ಲೋಕ ಬದಲಾವಣೆ ಮಾಧ್ಯಮಗಳ ದೊಡ್ಡ ಜವಾಬ್ದಾರಿಯಾಗಿದೆ -ಡಾ.ಭೀಮಾಶಂಕರ ಬಿರಾದಾರ ಅಧ್ಯಕ್ಷತೆ ವಹಿಸಿದ್ದ ಕಾಲೇಜು ಪ್ರಾಚಾರ್ಯ**

## ದಾಖಲಾಗದ ವಾಸ್ತವ ಬೆಳೆ: ತೊಂದರೆ

• ಉದಯವಾಹಿನಿ ಶಿರಸಿ

ನೂತನ ಪಹಣಿ ಪತ್ರಿಕೆ (ಆರ್‌ಟಿಸಿ) ನೀಡಿ ಸಹಕಾರ ಸಂಘಗಳ ಮೂಲಕ ಬೆಳೆ ಸಾಲ ಪಡೆಯಲು ಕೆಲವೇ ದಿನ ಬಾಕಿಯುಳಿದರೂ ಆರ್‌ಟಿಸಿಯ ಬೆಳೆ ವಿವರ ಕಾಲಂನಲ್ಲಿ ವಾಸ್ತವದ ಬೆಳೆ ಹೆಸರು ದಾಖಲಾಗದ ಹಿನ್ನೆಲೆಯಲ್ಲಿ ರೈತರು ಬೆಳೆ ದಾಖಲೆಯ ದೃಢೀಕರಣಕ್ಕಾಗಿ ತಹಶೀಲ್ದಾರ್ ಕಚೇರಿಗೆ ಅಲೆದಾಡುವ ಸ್ಥಿತಿ ನಿರ್ಮಾಣವಾಗಿದೆ.

ಸಹಕಾರ ಸಂಘಗಳ ಮೂಲಕ ಈಗಾಗಲೇ ಪ್ರಸಕ್ತ ಸಾಲಿನ ಬೆಳೆಸಾಲ ಪಡೆಯಲು ರೈತರು ಅರ್ಜಿ ಸಲ್ಲಿಸುತ್ತಿದ್ದಾರೆ. ಅದನ್ನು ಸಹಕಾರ ಸಂಘಗಳು ಜಿಲ್ಲಾ ಮಧ್ಯವರ್ತಿ ಬ್ಯಾಂಕ್‌ಗೆ ಸಲ್ಲಿಸಬೇಕಾಗಿದೆ.

ಆದರೆ ಕೆಲ ರೈತರ ಆರ್‌ಟಿಸಿಯಲ್ಲಿ ಬೆಳೆ ವಿವರ ನಮೂದಾಗದೆ ಖಾಲಿ ಇರುವ ಕಾರಣಕ್ಕೆ ದಾಖಲೆ ಪತ್ರಗಳನ್ನು ಸಲ್ಲಿಸಲು ತೊಂದರೆಯಾಗಿದ್ದು, ಇದರಿಂದ ರೈತರಿಗೆ ದೊರೆಯಬೇಕಾದ ಬೆಳೆ ಸಾಲ ಇನ್ನಷ್ಟು ವಿಳಂಬವಾಗಲಿದೆ.

ಮೇ 31 ಬೆಳೆ ಸಾಲಕ್ಕೆ ಅರ್ಜಿಸಲ್ಲಿಸಲು ಕೊನೆಯ ದಿನವಾಗಿದೆ. ಬೆಳೆಸಾಲ ಪಡೆಯಲು ರೈತರು ಪ್ರಮುಖವಾಗಿ ಪ್ರಸಕ್ತ ಸಾಲಿನ ಆರ್‌ಟಿಸಿ, ಫ್ರೂಟ್ ಐಡಿ ಮತ್ತು ಕೆಡಿಸಿಸಿ ಬ್ಯಾಂಕ್ ಪಾಸ್ ಬುಕ್ ನಕಲು ಪ್ರತಿಯನ್ನು ಒದಗಿಸಬೇಕು. ಬೆಳೆ ವಿವರ ಮಾಹಿತಿಯನ್ನು ಸಹಕಾರ ಸಂಘಗಳಲ್ಲಿ ನೋಂದಣಿ ಮಾಡಿಕೊಂಡು ಜಿಲ್ಲಾ ಮಧ್ಯವರ್ತಿ ಬ್ಯಾಂಕ್‌ಗೆ ಸಲ್ಲಿಸಲಾಗುತ್ತದೆ. ಆದರೆ ಕೆಲ ರೈತರ ಆರ್‌ಟಿಸಿಯಲ್ಲಿ ಪ್ರಸಕ್ತ ಸಾಲಿನಲ್ಲಿ ಪ್ರಮುಖ ಬೆಳೆಯೇ ನಮೂದಾಗಿಲ್ಲ. ಕಾರಣ ರೈತರಿಗೆ ಬೆಳೆಸಾಲ ಪಡೆಯಲು ಮತ್ತು ವಿಮೆ ವ್ಯಾಪ್ತಿಗೆ ಒಳಪಡಿಸಲು ಸಾಧ್ಯವಾಗುತ್ತಿಲ್ಲ ಎಂಬುದು ರೈತರ ದೂರಾಗಿದೆ. ರೈತರು ಬೆಳೆಸಾಲ ಮರುಪಾವತಿಗೆ ಬೇರೆಡೆ ಕೈಗಡ ಸಾಲ ಪಡೆದುಕೊಂಡು ಭರಣ ಮಾಡುತ್ತಾರೆ. ಆರ್‌ಟಿಸಿಯಲ್ಲಿ ನಿರ್ದಿಷ್ಟ ಬೆಳೆ ದಾಖಲು ಇಲ್ಲದ ಕಾರಣ ಸಾಲ ದೊರೆಯುತ್ತಿಲ್ಲ.



ಉದಯವಾಹಿನಿ ಚಿತ್ರ

> **ಆರ್‌ಟಿಸಿಯಲ್ಲಿ ಬೆಳೆ ವಿವರ ದಾಖಲಾಗದ ಕಾರಣಕ್ಕೆ ಮಾಹಿತಿ ಅಪ್‌ಲೋಡ್ ಆಗುತ್ತಿಲ್ಲ. ದೃಢೀಕರಣದ ದಾಖಲೆ ಒದಗಿಸಿ, ಪುನಃ ಅಪ್‌ಲೋಡ್ ಮಾಡಬೇಕಿದೆ. ಇದರಿಂದ ರೈತರಿಗೆ ಬೆಳೆಸಾಲ ಪಡೆಯಲು ವಿಳಂಬವಾಗುತ್ತಿದೆ. ನಮಗೂ ಅನಗತ್ಯ ಕೆಲಸದ ಹೊರೆ ಹೆಚ್ಚುತ್ತಿದೆ -ಸೊಸೈಟಿ ಕಾರ್ಯದರ್ಶಿ**

ದೃಢೀಕರಣ ಪಡೆದು ಅದನ್ನು ಸಲ್ಲಿಸಲು ಕನಿಷ್ಠ 15-20 ದಿನ ಕಾಯಬೇಕಾಗಿದೆ. ಕೈಗಡ ಸಾಲ ಪಡೆದಿರುವುದನ್ನು ಮರುಪಾವತಿ ಮಾಡಲು ಸಾಧ್ಯವಾಗದ ಪರಿಸ್ಥಿತಿಯಲ್ಲಿ ರೈತರಿದ್ದಾರೆ.

ಹೀಗಾಗಿ ಹಳೆಯ ಆರ್‌ಟಿಸಿ ಪಡೆದು ಸಾಲ ನೀಡಿದರೆ ಸಹಕಾರ ಸಂಘಗಳಿಗೂ, ರೈತರಿಗೂ ಒಳಿತು ಎಂದು ಹೆಸರು ಹೇಳಲಿಚ್ಛಿಸದ ಸಹಕಾರ ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ತಿಳಿಸಿದರು.

## ಮಳೆರಾಯನ ಆಗಮನದಿಂದ ಕೆರೆಯಂತಾದ ರಸ್ತೆಗಳು

• ಉದಯವಾಹಿನಿ ಕುಂದಾಪುರ

ಕಳೆದ ನಾಲ್ಕೈದು ವರ್ಷಗಳಿಂದ ಪ್ರತಿ ಬಾರಿ ಮಳೆಗಾಲ ಆರಂಭವಾದಾಗಲೂ ಸುದ್ದಿಯಾಗುತ್ತಿರುವ ನಗರದಲ್ಲಿ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿ 66ರ ಸರ್ವಿಸ್ ರಸ್ತೆಗಳು ಈ ಬಾರಿಯೂ ಮತ್ತದೆ ರೀತಿಯಲ್ಲಿ ಸುದ್ದಿಯಾಗುತ್ತಿವೆ.

ರಸ್ತೆಯ ಎಲ್ಲೆಂದರಲ್ಲಿ ನೆರೆಯಂತೆ ನಿಂತಿರುವ ಕೊಳಕು ನೀರಿನಲ್ಲಿ ಸಾಗುವ ವಾಹನ ಸವಾರರು, ದಾರಿಹೋಕರು ಹೆದ್ದಾರಿ ಇಲಾಖೆಗೆ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ನಗರದ ಶಾಸ್ತ್ರಿ ಸರ್ಕಲ್‌ನ ಎದುರಿನಲ್ಲಿ ಸಾಗುವ ಹೆದ್ದಾರಿಯ ಪ್ಲೈ ಓವರ್‌ನ ಇಕ್ಕೆಲಗಳಲ್ಲಿ ನಿರ್ಮಾಣವಾಗಿರುವ ಸರ್ವಿಸ್ ರಸ್ತೆಗಳು ಪ್ರತಿ ಮಳೆಗಾಲದಲ್ಲಿ ಒಂದಲ್ಲ ಒಂದು ರೀತಿಯ ಅವಾಂತರಗಳನ್ನು ಸೃಷ್ಟಿಸುತ್ತಿವೆ. ಸರ್ವಿಸ್ ರಸ್ತೆಯ ಮೇಲ್ಭಾಗದಲ್ಲಿ ಸಂಗ್ರಹವಾಗುವ ಭಾರಿ ಪ್ರಮಾಣದ ನೀರು ಹರಿದು ಹೋಗಲು ನಿರ್ಮಿಸಿರುವ ಕ್ರಾಂಕ್ರೀಟ್ ತೋಡುಗಳು ಅವೈಜ್ಞಾನಿಕವಾಗಿದ್ದು, ಈ ತೋಡುಗಳಲ್ಲಿ ನೀರಿನ ಸುಗಮ ಸಂಚಾರವಾಗುತ್ತಿಲ್ಲ. ಸರ್ವಿಸ್ ರಸ್ತೆಯ ಮೇಲೆ ಜಲಮಟ್ಟಕ್ಕೆ ಸಮಾನವಾಗಿರದೆ ಇರುವುದರಿಂದ ಕೆಎಸ್‌ಆರ್‌ಟಿಸಿ ನಿಲ್ದಾಣದಿಂದ ವಿನಾಯಕ ಟಾಕೀಸ್‌ವರೆಗೂ ಗುಂಡಿಗಳಲ್ಲಿ ನೀರು ನಿಲ್ಲುತ್ತಿವೆ. ಪ್ಲೈ ಓವರ್, ಎಂಬ್ಯಾಕ್‌ಮೆಂಟ್ ಮೇಲಿನ ರಸ್ತೆಗಳಲ್ಲಿ ಸಂಗ್ರಹವಾಗುವ ನೀರು, ಸರ್ವಿಸ್ ರಸ್ತೆಗೆ ಹರಿದು ಬರುವುದರಿಂದ, ಸಣ್ಣ ಮಳೆಗೂ ಸರ್ವಿಸ್ ರಸ್ತೆಯಲ್ಲಿ ನೀರು ಸಂಗ್ರಹಗೊಳ್ಳುತ್ತದೆ. ಸರ್ವಿಸ್ ರಸ್ತೆಯಲ್ಲಿ ಹೋಗುವ ಎಲ್ಲಾ ವಾಹನಗಳ ಮೇಲೂ ನೀರಿನ ಅಭಿಷೇಕವಾಗುತ್ತದೆ. ಸರ್ವಿಸ್ ರಸ್ತೆಯ ಮೇಲೆ ನೀರು ನಿಂತು ಸಮಸ್ಯೆಗಳು ಉಲ್ಬಣವಾಗಿ ಸುದ್ದಿಯಾದಾಗ, ಸ್ಥಳಕ್ಕೆ ಭೇಟಿ ನೀಡುವ ಜನಪ್ರತಿನಿಧಿಗಳು ಆಶ್ವಾಸನೆ ನೀಡಿ ಹೋಗುತ್ತಾರೆ ಹೊರತು ಸಮಸ್ಯೆ ಪರಿಹರಿಸುವುದಿಲ್ಲ.

ಸಂಸದರು, ಜಿಲ್ಲಾ ಮಟ್ಟದ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿ, ಪರಿಹಾರಕ್ಕೆ ಸೂಚನೆ ನೀಡಿದ್ದರೂ ಪ್ರಯೋಜನವಾಗಿಲ್ಲ ಎಂದು ಜನರು ದೂರುತ್ತಿದ್ದಾರೆ.



ಉದಯವಾಹಿನಿ ಚಿತ್ರ

## ಹೆದ್ದಾರಿಯಲ್ಲಿ ಮಣ್ಣು ಕುಸಿತ: ವಿದ್ಯುತ್ ಸಂಪರ್ಕ ಕಡಿತ

• ಉದಯವಾಹಿನಿ ಹಾಸನ

ಜಿಲ್ಲೆಯಲ್ಲಿ 2-3 ದಿನಗಳಿಂದ ಎಡಬಿಡದೇ ಮಳೆ ಸುರಿಯುತ್ತಿದ್ದು, ಭಾರಿ ಮಳೆಯಿಂದ ಜನಜೀವನ ಅಸ್ತವ್ಯಸ್ತವಾಗಿತ್ತು. ಜಿಲ್ಲೆಯ ಚನ್ನರಾಯಪಟ್ಟಣ, ಸಕಲೇಶಪುರ, ಆಲೂರು ಬೇಲೂರು, ಅರಕಲಗೂಡು ಮತ್ತು ಹಾಸನ ತಾಲ್ಲೂಕಿನಲ್ಲಿ ಮಳೆಯ ಅಬ್ಬರದಿಂದಾಗಿ ರೈತರು, ವಾಹನ ಸವಾರರು, ಸಾರ್ವಜನಿಕರು ಪರದಾಡುವಂತಾಗಿದೆ. ಬೇಲೂರು ತಾಲ್ಲೂಕಿನ ಕುಪ್ಪೋಡು ಗ್ರಾಮದಲ್ಲಿ ಕೆರೆ ಕೋಡಿ ಒಡೆದು ರೈತರ ಜಮೀನಿಗೆ ನೀರು ನುಗ್ಗಿದ್ದು, 50 ಎಕರೆಗೆ ಅಧಿಕ ಗದ್ದೆ ಮತ್ತು ತೆಂಗಿನಕಾಯಿ ತೋಟ ಗಳಿಗೆ ಹಾನಿಯಾಗಿದೆ. ತರಕಾರಿ ಬೆಳೆಗಳು ಜಲಾವೃತವಾಗಿದ್ದು, ರೈತರು ನಷ್ಟ ಅನುಭವಿಸುವಂತಾಗಿದೆ. ಸಂಬಂಧಪಟ್ಟ ಇಲಾಖೆಯಿಂದ ಸೂಕ್ತ ಪರಿಹಾರ ಒದಗಿಸುವಂತೆ ಒತ್ತಾಯಿಸಿದ್ದಾರೆ.ಸಕಲೇಶಪುರ ತಾಲ್ಲೂಕಿನ ರಾಟೆ ಮನೆ ಬಳಿ ಮೀನನ ಲಾರಿ ಉರುಳಿ ಬಿದ್ದು, ಚಾಲಕನಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಸಕಲೇಶಪುರ ತಾಲ್ಲೂಕಿನ ಬೊಮ್ಮಕೆರೆ ಗ್ರಾಮದ ಬಳಿ, ಕೆಎಸ್‌ಆರ್‌ಟಿಸಿ ಬಸ್‌ನ ಚಕ್ರವೊಂದು ಮಣ್ಣಿನಲ್ಲಿ ಸಿಲುಕಿ, ಪ್ರಯಾಣಿಕರು ಪರದಾಡುವಂತಾಗಿತ್ತು. ನಂತರ ಟ್ರ್ಯಾಕ್ಟರ್ ಸಹಾಯದಿಂದ ಬಸ್ ಚಕ್ರವನ್ನು ಮೇಲಕ್ಕೆ ಎತ್ತಲಾಯಿತು.

**ನೆಲಕುರುಳಿದ ಮರ, ವಿದ್ಯುತ್ ಕಂಬ:** ಬೆಳಿಗ್ಗೆಯಿಂದ ಬಿರುಸಿನ ಗಾಳಿಯ ಜೊತೆಗೆ ಧಾರಾಕಾರವಾಗಿ ಮಳೆ ಸುರಿಯುತ್ತಿದ್ದು, ಸಕಲೇಶಪುರ ಬೇಲೂರು ತಾಲ್ಲೂಕುಗಳ ಹಲವು ಗ್ರಾಮಗಳಲ್ಲಿ ವಿದ್ಯುತ್ ಕಂಬ, ಮರ ನೆಲಕುರುಳಿವೆ.

## ತುಂಗಭದ್ರಾ ಜಲಾಶಯಕ್ಕೆ 19ನೇ ಕ್ರಸ್ಟ್‌ಗೇಟ್ ಅಳವಡಿಸಲು ಒತ್ತಾಯ

• ಉದಯವಾಹಿನಿ ಕೊಪ್ಪಳ

ತುಂಗಭದ್ರಾ ಜಲಾಶಯಕ್ಕೆ ಕಾಯಂ 19ನೇ ಕ್ರಸ್ಟ್ ಗೇಟ್ ಅಳವಡಿಕೆ ಕಾರ್ಯ ಇನ್ನೂ ಆರಂಭವಾಗಿಲ್ಲ. ರಾಜ್ಯ ಸರ್ಕಾರ ತುಂಗಭದ್ರಾ ಮಂಡಳಿ ಮೇಲೆ ಎಲ್ಲಾ ಜವಾಬ್ದಾರಿ ಹಾಕಿ ತನ್ನ ಹೊಣೆಗಾರಿಕೆಯಿಂದ ನುಣುಚಿಕೊಳ್ಳುತ್ತಿದೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಬಸವರಾಜ ದಡೇಸುಗೂರು ಆರೋಪಿಸಿದರು.

ಬಿಜೆಪಿ ನಿಯೋಗ ಜಲಾಶಯಕ್ಕೆ ಭೇಟಿ ನೀಡಿ ತಾತ್ಕಾಲಿಕವಾಗಿ ಅಳವಡಿಸಿರುವ ಕ್ರಸ್ಟ್ ಗೇಟ್ ಪರಿಶೀಲಿಸಿ ಬಳಿಕ ಮಾಧ್ಯಮದವರ ಜೊತೆ ಮಾತನಾಡಿದ ಅವರು 'ಮಲೆನಾಡಿನ ಭಾಗದಲ್ಲಿ ಉತ್ತಮವಾಗಿ ಮಳೆಯಾಗುತ್ತಿದ್ದು ಜಲಾಶಯಕ್ಕೆ ಒಳಹರಿವು ಆರಂಭವಾಗಿದೆ. ರಾಜ್ಯ ಸರ್ಕಾರ ಇದೇ ರೀತಿ ನಿರ್ಲಕ್ಷ್ಯ ಮುಂದುವರಿಸಿದರೆ ರೈತರ ರಕ್ಷಣೆ ಮಾಡುವವರು ಯಾರು ಎಂದು ಪ್ರಶ್ನಿಸಿದರು.



ಉದಯವಾಹಿನಿ ಚಿತ್ರ

ಕ್ರಸ್ಟ್‌ಗೇಟ್ ಮುರಿದು ಒಂಬತ್ತು ತಿಂಗಳುಗಳೇ ಉರುಳಿದರೂ ವರದಿ ಪಡೆಯದೇ ಸರ್ಕಾರ ಕಾಲಹರಣ ಮಾಡುತ್ತಿದೆ. ಜಲಾಶಯ ನಮ್ಮ ರಾಜ್ಯದಲ್ಲಿಯೇ ಇರುವುದರಿಂದ ಫಲಾನುಭವಿ ರಾಜ್ಯಗಳಾದ ಆಂಧ್ರ ಹಾಗೂ ತೆಲಂಗಾಣಕ್ಕಿಂತ ಕರ್ನಾಟಕದ ಮೇಲೆಯೇ ಹೆಚ್ಚು ಜವಾಬ್ದಾರಿಯಿದೆ. 19ನೇ ಕ್ರಸ್ಟ್ ಗೇಟ್ ಅಳವಡಿಸಲು 1.66 ಕೋಟಿಗೆ ಟೆಂಡ್ ನೀಡಲಾಗಿದ್ದು, ಜುಲೈ ಒಳಗೆ ಕಾಮಗಾರಿ ಮುಗಿಯಬೇಕಿದೆ. ಇನ್ನುಳಿದ ಕಾಮಗಾರಿಗಳ ಗತಿ ಏನು ಎಂದು ಕೇಳಿದರು.

• ವಿಪರೀತ ಮಳೆಯಿಂದಾಗಿ ಭೂಮಿ ಪೂರ್ಣ ಪ್ರಮಾಣದಲ್ಲಿ ಹದವಾಗಿದ್ದು, ಮಳೆ ನಿಂತ ಬಳಿಕವೇ ಕೃಷಿ ಕೆಲಸ ಶುರು

# ಐದು ಜಿಲ್ಲೆಯ ಜೀವನಾಡಿ ನಾರಾಯಣಪುರ ಜಲಾಶಯಕ್ಕೆ ಜೀವಕಳೆ

• ಉದಯವಾಹಿನಿ ಲಿಂಗಸುಗೂರು

ಕಳೆದ ಒಂದು ವಾರದಿಂದ ನಾರಾಯಣಪುರ ಜಲಾಶಯ ಪ್ರದೇಶದಲ್ಲಿಸುರಿದ ಮಳೆಯಿಂದ ಸುಮಾರು 3 ಟಿಎಂಸಿ ನೀರು ಹರಿದು ಬಂದಿದ್ದು, ಬಹುತೇಕ ತಳ ಕಂಡಿದ್ದ ಜಲಾಶಯಕ್ಕೆ ಇದೀಗ ಜೀವ ಕಳೆ ಬಂದಿದೆ. ಕಲ್ಯಾಣ ಕರ್ನಾಟಕದ ರಾಯಚೂರು, ಯಾದಗಿರಿ, ಕಲಬುರಗಿ ಹಾಗೂ ವಿಜಯಪುರ ಜಿಲ್ಲೆಯ ಜೀವನಾಡಿ ನಾರಾಯಣಪುರ ಜಲಾಶಯದಿಂದ ನೀರು ಪಡೆಯಲು ಮಾರ್ಚ್ ಕೊನೆ ವಾರದಿಂದ ಏಪ್ರಿಲ್ ಮೊದಲ ವಾರದ ವರೆಗೆ ರೈತರು ಹೋರಾಟದ ಹಾದಿ ಹಿಡಿದಿದ್ದರು. ನಂತರ ಒಳ ಹರಿವಿಲ್ಲದೆ ಜಲಾಶಯದಲ್ಲಿ ನೀರಿನ ಅಭಾವ ಉಂಟಾಗಿತ್ತು. ಈಗ ಪ್ರತಿನಿತ್ಯ 1700 ಕ್ಯೂಸೆಕ್ ನೀರು ಜಲಾಶಯಕ್ಕೆ ಹರಿದು ಬರುತ್ತಿದೆ.

**ಕುಡಿಯುವ ನೀರಿನ ಅಭಾವ ಕ್ಷೀಣ:** ಕಳೆದ ವರ್ಷ ಇದೇ ಸಮಯದಲ್ಲಿ 15.620 ಟಿಎಂಸಿ ನೀರು ಸಂಗ್ರಹವಿತ್ತು. ಸದ್ಯ ಜಲಾಶಯದಲ್ಲಿ 19.432 ಟಿಎಂಸಿ ನೀರು ಸಂಗ್ರಹವಿದೆ. ಕುಡಿಯುವ ನೀರಿನ ಉದ್ದೇಶದಿಂದ ಜಲಾಶಯದ ಎಡದಂಡೆ ನಾಲೆಗೆ ಮೇ 4 ರಿಂದ 20ರವರೆಗೆ 2 ಟಿಎಂಸಿ ನೀರು ಹರಿಸಲಾಗಿದೆ. ಸದ್ಯ ಸಂಗ್ರಹವಾಗುತ್ತಿರುವ ನೀರಿನಿಂದ ಕುಡಿಯುವ ನೀರಿನ ಅಭಾವ ಉಂಟಾಗುವ ಸಾಧ್ಯತೆಗಳು ಕಡಿಮೆ.



ಉದಯವಾಹಿನಿ ಚಿತ್ರ

- ತಳಕಂಡಿದ್ದ ಅಣೆಕಟ್ಟಿಗೆ ಜೀವಕಳೆ
- ಸದ್ಯ ಸಂಗ್ರಹವಾಗುತ್ತಿರುವ ನೀರಿನಿಂದ ಕುಡಿಯುವ ನೀರಿನ ಅಭಾವ ಉಂಟಾಗುವ ಸಾಧ್ಯತೆಗಳು ಕಡಿಮೆ.
- ವಿಪರೀತ ಮಳೆಯಿಂದಾಗಿ ಭೂಮಿ ಪೂರ್ಣ ಪ್ರಮಾಣದಲ್ಲಿ ಹದವಾಗಿದ್ದು, ಮಳೆ ನಿಂತ ಬಳಿಕವೇ ಕೃಷಿ ಕೆಲಸ ಶುರುವಾಗಲಿದೆ

ಬೇಸಿಗೆಯ ಬಿಸಿಲಿನ ಪ್ರಖರತೆಯ ಕಾರಣ ನಾರಾಯಣಪುರ ಜಲಾಶಯದ ಮುಂಭಾಗ ಸಂಪೂರ್ಣ ಬತ್ತಿ ಹೋಗಿತ್ತು. ಕಳೆದ ಒಂದು ವಾರದಿಂದ ಸುರಿಯುತ್ತಿರುವ ಮಳೆಯಿಂದ ಅಲ್ಪ ಸ್ವಲ್ಪ ನೀರು ಹರಿಯುತ್ತಿರುವುದರಿಂದ ಜೀವಕಳೆ ಬಂದಂತಾಗಿದೆ. ಕಳೆದ ಒಂದು ವಾರದಿಂದ ಜಲಾಶಯದ ಪ್ರದೇಶದಲ್ಲಿ ಸುರಿದ ಮಳೆಯಿಂದ ಜಲಾಶಯದಲ್ಲಿ 3 ಟಿಎಂಸಿ ನೀರು ಸಂಗ್ರಹವಾಗಿದೆ. ಕುಡಿಯುವ ನೀರಿನ ಉದ್ದೇಶದಿಂದ ನಾರಾಯಣಪುರ ಎಡದಂಡೆ ನಾಲೆಗೆ ಮೇ 4 ರಿಂದ 20 ರವರೆಗೆ 2.40 ಟಿಎಂಸಿ ನೀರು ಹರಿಸಲಾಗಿದೆ ಎಂದಿದ್ದಾರೆ. ವಿಜಯ ಕುಮಾರ ಅರಳಿ, ಇಂಜಿನಿಯರ್, ನಾರಾಯಣಪುರ ಜಲಾಶಯ.

**ಅನಾರೋಗ್ಯ ಭೀತಿ:** ನಿರಂತರ ಮಳೆಯಿಂದಾಗಿ ವೃದ್ದರು, ಮಕ್ಕಳಲ್ಲಿ ಅನಾರೋಗ್ಯ ಸಮಸ್ಯೆ ಹೆಚ್ಚಿದೆ. ಚಳಿ,ಗಾಳಿಯಿಂದಾಗಿ ನೆಗಡಿ, ಕೆಮ್ಮು, ಜ್ವರಬಾಧೆ ಉಂಟಾಗಿದ್ದು, ಆಸ್ಪತ್ರೆಗಳಲ್ಲಿ ರೋಗಿಗಳ ಸಂಖ್ಯೆ ಹೆಚ್ಚಲು ಕಾರಣವಾಗಿದೆ. ಹೀಗಾಗಿ ಜನರು ಇಂತಹ ಸಂದರ್ಭದಲ್ಲಿ ಮುನ್ನೆಚ್ಚರಿಕೆ ವಹಿಸಬೇಕು ಎಂಬುದು ವೈದ್ಯರ ಸಲಹೆಯಾಗಿದೆ.

### ರಸ್ತೆಗಳು ರಾಡಿ

**ಮಳೆಯಿಂದಾಗಿ ಗ್ರಾಮೀಣ ರಸ್ತೆಗಳು ಸಂಪೂರ್ಣ ಹಾಳಾಗಿದ್ದು, ರಾಡಿಯಲ್ಲಿಯೇ ತಿರುಗುವಂತಾಗಿದೆ. ತಗ್ಗು ಗುಂಡಿಯಲ್ಲಿ ಬೈಕ್ ಸವಾರರು ಮಗುಚಿ ಬೀಳುತ್ತಿದ್ದಾರೆ. ಇತ್ತೀಚೆಗೆ ಸರಕಾರದ ಅನುದಾನದಲ್ಲಿ ಬೇಕಾಬಿಟ್ಟಿಯಾಗಿ ಗುಂಡಿ ಮುಚ್ಚುವ ಕೆಲಸ ಮಾಡಿದ್ದರೂ ಪ್ರಯೋಜನವಾಗಿಲ್ಲ. ಆರ್ ಎಚ್‌ನಂ.1ಕ್ಯಾಂಪ್ ರಸ್ತೆ, ದೇವರಗುಡಿ ಸೇರಿದಂತೆ ಪ್ರಮುಖ ರಸ್ತೆಗಳು ಹದಗೆಟ್ಟು ಹೋಗಿವೆ.**

### ಸಂಚಾರಕ್ಕೆ ಸಮಸ್ಯೆ

**ನಗರ ಸೇರಿದಂತೆ ಗ್ರಾಮೀಣ ಪ್ರದೇಶದಲ್ಲಿ ಮಳೆ ಸಾಮಾನ್ಯವಾಗಿದೆ. ಜೋಳದ ಬೆಳೆಗಾರರು ಬಿಟ್ಟರೆ ಉಳಿದ ಬಹುತೇಕರು ನಿಶ್ಚಿಂತರಾಗಿದ್ದಾರೆ. ಜೋಳ ಬೆಳೆದವರು ಮಾತ್ರ ಜೋಳ ಶೇಖರಿಸಿ ಇಟ್ಟುಕೊಂಡಿದ್ದು, ಅದನ್ನು ಸರಕಾರದ ಖರೀದಿ ಕೇಂದ್ರಕ್ಕೆ ಮಾರಾಟ ಮಾಡಬೇಕಿದೆ. ಮಳೆಗೆ ಜೋಳ ಮೊಳಕೆಯೊಡೆಯುತ್ತಿದ್ದು, ಆತಂಕ ಮೂಡಿಸಿದೆ. ಮದುವೆ ಸೇರಿ ಶುಭ, ಸಮಾರಂಭಗಳಿಗೆ ಒಳ್ಳೆಯ ದಿನಗಳು ಇರುವುದರಿಂದ ಬೈಕ್ ಸವಾರರು ಸಮಸ್ಯೆಗೆ ಸಿಲುಕಿದ್ದಾರೆ. ಮಳೆಯಲ್ಲಿಯೇ ನೆನೆದು ಕಾರ್ಯಕ್ರಮಗಳಿಗೆ ತೆರಳುವ ಸ್ಥಿತಿ ಇದೆ. ಕಾರ್ಯಕ್ರಮ ಆಯೋಜಕರು ಮಳೆರಾಯನ ಕಾಟಕ್ಕೆ ಸುಸ್ತಾಗಿದ್ದಾರೆ.**

### ಮಂಕು ಹಿಡಿಸಿದ ವರುಣ

**ಸದಾ ಸುಡು ಬಿಸಿಲಲ್ಲೇ ಬದುಕುವ ಬಿಸಿಲ ನಾಡಿನ ಜನರಿಗೆ ಕಳೆದ ಒಂದು ವಾರದಿಂದ ಮೋಡ ಕವಿದ ಪರಿಸರ, ನಿರಂತರ ಮಳೆಯಿಂದಾಗಿ ಆಹ್ಲಾದಕರ ವಾತಾವರಣ ಅನುಭವಿಸುವ ಜತೆಯಲ್ಲಿ ದೈನಂದಿನ ಕೆಲಸ ಕಾರ್ಯಕ್ಕೆ ಸಮಸ್ಯೆ ಎದುರಿಸುತ್ತಿದ್ದಾರೆ. ಮುಂಗಾರು ಹಂಗಾಮಿನ ಆರಂಭದಲ್ಲಿಯೇ ಮಳೆರಾಯ ಕೃಪೆ ತೋರಿದ್ದು, ಕೃಷಿ ಚಟುವಟಿಕೆಗೂ ಆಸರೆಯಾಗಿದೆ. ಈ ನಡುವೆ ವಿಪರೀತ ಮಳೆಯಿಂದಾಗಿ ಭೂಮಿ ಪೂರ್ಣ ಪ್ರಮಾಣದಲ್ಲಿ ಹದವಾಗಿದ್ದು, ಮಳೆ ನಿಂತ ಬಳಿಕವೇ ಕೃಷಿ ಕೆಲಸ ಶುರುವಾಗಲಿದೆ. ಬೆಂಬಿಡದೇ ಸುರಿಯುತ್ತಿರುವ ಮಳೆಯು ಜನಜೀವನ ಅಸ್ತವ್ಯಸ್ಥಗೊಳಿಸಿದ್ದು, ಮನೆಯಿಂದ ಹೊರ ಬಾರದ ಸ್ಥಿತಿ ಇದೆ.**

## ಮಿನಿ ನ್ಯೂಸ್

### ಕಾಮಗಾರಿಗೆ ಭೂಮಿಪೂಜೆ

• ಉದಯವಾಹಿನಿ, ರಾಯಬಾಗ

ಮತಕ್ಷೇತ್ರದ ಮತದಾರರ ಭವಿಷ್ಯದ ದಿನಗಳನ್ನು ಸುಂದರವಾಗಿ ಸಬೇಕೆನ್ನುವುದು ನನ್ನ ಅದಮ್ಯ ಬಯಕೆಯಾಗಿದೆ ಎಂದು ಶಾಸಕ ಡಿ.ಎಂ.ಐಹೊಳೆ ಹೇಳಿದರು. ಪಟ್ಟಣದ ಅಂಬೇಡ್ಕರ್ ವೃತ್ತದಲ್ಲಿ ಲೋಕೋಪಯೋಗಿ ಇಲಾಖೆಯ ವತಿಯಿಂದ ಮಂಜೂರಾದ 6 ಕೋಟಿ ವೆಚ್ಚದಲ್ಲಿ ಮಂಗಸೂಳಿ - ಲಕ್ಷ್ಮೇಶ್ವರ ರಾಜ್ಯ ಹೆದ್ದಾರಿಯ ಆಯ್ದ ಭಾಗಗಳಲ್ಲಿ ವಾಹನ ಸವಾರರ ಅನುಕೂಲಕ್ಕಾಗಿ ರಸ್ತೆ ವಿಸ್ತರಣೆ ಹಾಗೂ ಡಾಂಬರೀಕರಣ ಕಾಮಗಾರಿಗೆ ಸೋಮವಾರ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು.

ಮತಕ್ಷೇತ್ರದ ಪಟ್ಟಣ ಹಾಗೂ ಗ್ರಾಮಾಂತರ ಪ್ರದೇಶದಲ್ಲಿ ಅಭಿವೃದ್ಧಿಯಾಗಿಲ್ಲದ ಮತ್ತು ವಾಹನ, ಸಾರ್ವಜನಿಕ ಸಂಚಾರಕ್ಕೆ ಯೋಗ್ಯವಲ್ಲದ ರಸ್ತೆಗಳ ಮಾಹಿತಿ ಪಡೆದುಕೊಂಡಿದ್ದು, ಹಂತ ಹಂತವಾಗಿ ಅಭಿವೃದ್ಧಿಗೆ ಚಾಲನೆ ನೀಡಲಾಗುತ್ತಿದೆ. ಕ್ಷೇತ್ರದ ರಸ್ತೆಗಳ ಅಭಿವೃದ್ಧಿಗೆ ಹೆಚ್ಚು ಅನುದಾನ ನೀಡುವಂತೆ ಸರ್ಕಾರದ ಮೇಲೆ ಒತ್ತಡ ಹೇರುತ್ತಿದ್ದು ಮುಂದಿನ ದಿನಗಳಲ್ಲಿ ಕ್ಷೇತ್ರದ ಅಭಿವೃದ್ಧಿಗೆ ಮತ್ತಷ್ಟು ಶ್ರಮಿಸಲಾಗುವುದು ಎಂದರು.

### ರೂ.5 ಕೋಟಿ ಮೊತ್ತದ ಕಾಮಗಾರಿಗೆ ಶಾಸಕ ಯತ್ನಾಳ ಭೂಮಿಪೂಜೆ



ಉದಯವಾಹಿನಿ ಚಿತ್ರ

• ಉದಯವಾಹಿನಿ ವಿಜಯಪುರ

ನಗರದ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಈಚೆಗೆ ಭೂಮಿಪೂಜೆ ನೆರವೇರಿಸಿದರು.

ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆಯಡಿ ರೂ.5 ಕೋಟಿ ಅನುದಾನದಲ್ಲಿ ಯೋಗ ಕೇಂದ್ರ ನಿರ್ಮಾಣ, ತರಗತಿ ಕೊಠಡಿಗಳು, ಶೌಚಾಲಯ ಬ್ಲಾಕ್ ಮತ್ತಿತರೆ ಕಟ್ಟಡಗಳ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿದರು. ಇದೇ ವೇಳೆ ಕಾಲೇಜು ಆವರಣದಲ್ಲಿ ನಡೆಯುತ್ತಿರುವ ಕಾಮಗಾರಿಗಳನ್ನು ವೀಕ್ಷಣೆ ಮಾಡಿದರು.

### ಎರಡು ಮನೆ ಕಳ್ಳತನ; ಸಿಸಿಟಿವಿಯಲ್ಲಿ ದೃಶ್ಯ

• ಉದಯವಾಹಿನಿ ಚಿತ್ತಾಪುರ

ಪಟ್ಟಣದ ವೆಂಕಟೇಶ್ವರ ಕಾಲೋನಿಯಲ್ಲಿ ನಿನ್ನೆ ರಾತ್ರಿ 2 ಗಂಟೆ ಸುಮಾರಿಗೆ ಎರಡು ಮನೆಗಳು ಕಳ್ಳತನ ಮಾಡಿರುವ ಘಟನೆ ಜರುಗಿದ್ದು, ಸಿಸಿಟಿವಿಯಲ್ಲಿ ದೃಶ್ಯ ಸೆರೆಯಾಗಿದೆ.

ಗುರುನಾಥ ಹಿಟ್ಟಿನ ಗಿರಣಿಯವರ ಮನೆಯಲ್ಲಿದ್ದ 2 ತೊಲೆ ಬಂಗಾರ, 15 ತೊಲೆ ಬೆಳ್ಳಿ, 10 ಸಾವಿರ ರೂ. ಕಳ್ಳತನವಾಗಿದೆ. ಧೂಳಯ್ಯ ಸ್ವಾಮಿ ಎನ್ನುವವರ ಮನೆಯಲ್ಲಿದ್ದ 3 ತೊಲೆ ಬಂಗಾರ, 9 ತೊಲೆ ಬೆಳ್ಳಿ, 30 ಸಾವಿರ ರೂ. ಕಳ್ಳತನವಾಗಿದ್ದು, ಶಂಕರ ಕೊಳಕೂರ್ ಎನ್ನುವವರ ಮನೆಯ ಕೀಲಿ ಕೈ ಮುರಿದು ಕಳ್ಳತನಕ್ಕೆ ಯತ್ನಿಸಿದ್ದಾರೆ ಎಂದು ತಿಳಿದು ಬಂದಿದೆ. ಗುರುನಾಥ ಹಿಟ್ಟಿನ ಗಿರಣಿಯವರು ಶುಕ್ರವಾರ ಬೆಂಗಳೂರಿಗೆ ಹೋಗಿ ಮರಳಿ ಬೆಳಗ್ಗಿನ ಜಾವ 5 ಗಂಟೆ ಸುಮಾರಿಗೆ ಬಂದು ನೋಡಿದಾಗ ಮನೆ ಕಳ್ಳತನವಾಗಿದ್ದು ಬೆಳಕಿಗೆ ಬಂದಿದೆ. ಧೂಳಯ್ಯ ಸ್ವಾಮಿ ಅವರು ಕಾಳಗಿ ತಾಲ್ಲೂಕಿನ ರಟಕಲ್‌ಗೆ ನಿನ್ನೆ ರಾತ್ರಿ 7 ಗಂಟೆ ಸುಮಾರಿಗೆ ಹೋದಾಗ ಕಳ್ಳತನವಾಗಿದೆ.

ಸುದ್ದಿ ತಿಳಿಯುತ್ತಿದ್ದಂತೆ ಸಿಪಿಐ ಚಂದ್ರಶೇಖರ ತಿಗಡಿ, ಪಿಎಸ್‌ಐ ಶ್ರೀಶೈಲ ಅಂಬಾಟಿ, ಕ್ರೈಂ ಪಿಎಸ್‌ಐ ಚಂದ್ರಾಮಪ್ಪ, ಸಿಬ್ಬಂದಿಗಳಾದ ಲಾಲಹ್ಮದ್, ದತ್ತು ಜಾನೆ, ಬೆರಳಚ್ಚು ತಜ್ಞರು ಹಾಗೂ ಶ್ವಾನ ದಳದ ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು.

### ಆಸ್ಪತ್ರೆ ಆವರಣದಿಂದ ಜನೌಷಧಿ ಮಳಿಗೆ ತೆರವುಗೊಳಿಸದಂತೆ ಮನವಿ


• ಉದಯವಾಹಿನಿ ಬಳ್ಳಾರಿ,

ರಾಜ್ಯದ ಸರ್ಕಾರಿ ಆಸ್ಪತ್ರೆ ಆವರಣದಲ್ಲಿರುವ 182 ಪ್ರಧಾನ ಮಂತ್ರಿ ಜನೌಷಧಿ ಕೇಂದ್ರಗಳನ್ನು ಆಸ್ಪತ್ರೆಗಳ ಆವರಣದಿಂದ ತೆಗೆಯದಂತೆ ಕನ್ನಡನಾಡು ರೈತ ಸಂಘ ಸಿಎಂ ಅವರಿಗೆ ಮನವಿ ಮಾಡಿದೆ. ಸಂಘದ ಅಧ್ಯಕ್ಷ ಈಶ್ವರಪ್ಪ ಮೆಣಸಿನ ಮತ್ತವರ ಬೆಂಬಲಿಗರು ಡಿಸಿ ಕಚೇರಿ ಆವರಣದಲ್ಲಿ ಈ ಕುರಿತು ಪ್ರತಿಭಟನೆ ನಡೆಸಿ. ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ್ ಪಾಟೀಲ್, ಆರೋಗ್ಯ ಸಚಿವ ದಿನೇಶ್ ಗುಂಡು ರಾವ್ ಅವರು ಸರ್ಕಾರಿ ಆಸ್ಪತ್ರೆಗಳಲ್ಲೇ ಉಚಿತವಾಗಿ ಔಷಧಿಗಳನ್ನು ನೀಡುತ್ತಿರುವಾಗ ಈ ಕೇಂದ್ರಗಳ ಅವಶ್ಯವಿಲ್ಲ ಎಂದು ತೆರವುಗೊಳಿಸಲು ಹೇಳಿದ್ದಾರೆ. ಇದು ರಾಜ್ಯದ 7 ಕೋಟಿ ಜನರ ವಿರೋಧಿ ನೀತಿಯಾಗಿರುತ್ತದೆ.

ಆಸ್ಪತ್ರೆಗಳಲ್ಲಿ ಎಲ್ಲಾ ಔಷಧಿಗಳನ್ನು ನೀಡಲ್ಲ, ಅನೇಕ ಔಷಧಿಗಳನ್ನು ಹೊರಗೆ ತರಲು ವೈದ್ಯರು ಬರೆದು ಕೊಡುತ್ತಾರೆ. ಆಸ್ಪತ್ರೆಯ ಹೊರಗಿನ ಮೆಡಿಕಲ್ ಸ್ಟೋರ್‌ಗಳ ಮಾಫಿಯಾಗೆ ಮಣಿದು ಈ ರೀತಿ ನಿರ್ಧಾರ ಮಾಡಿದಂತೆ ಕಾಣುತ್ತಿದೆ. ಇದರಿಂದ ಬಡ ರೈತರು, ಕೂಲಿ ಕಾರ್ಮಿಕರು ಮಧ್ಯಮ ವರ್ಗದ ರೋಗಿಗಳಿಗೆ ಬಹಳ ಕಡಿಮೆ ದರಗಳಲ್ಲಿ ಔಷಧಿಗಳು ದೊರೆಯುತ್ತದೆ. ಯಾವುದೇ ಕಾರಣಕ್ಕೆ ಆಸ್ಪತ್ರೆ ಆವರಣದಿಂದ ಜನೌಷಧಿ ಕೇಂದ್ರಗಳನ್ನು ಹೊರ ಹಾಕಬಾರದು ಎಂದಿದ್ದಾರೆ.

### ರಸ್ತೆ ದುರಸ್ತಿಗೆ ಆಗ್ರಹ

• ಉದಯವಾಹಿನಿ ನ್ಯಾಮತಿ



ಉದಯವಾಹಿನಿ ಚಿತ್ರ

ಪಟ್ಟಣದ ಮೂಲಕ ಹಾದುಹೋಗಿರುವ ಕುಮಟಾ-ಕಾರಮಡಗಿ ಹೆದ್ದಾರಿ ಹದಗೆಟ್ಟಿದ್ದು, ದುರಸ್ತಿ ಮಾಡಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಹೆದ್ದಾರಿ ಸಂಪೂರ್ಣ ಹಾಳಾಗಿದೆ. ಹೊನ್ನಾಳಿ-ನ್ಯಾಮತಿ ಮಾರ್ಗದ ಮಾದನಬಾವಿ-ನ್ಯಾಮತಿ ಹಾಗೂ ಸುರಹೊನ್ನೆ-ಸವಳಂಗ ಮಾರ್ಗದಲ್ಲಿ ಗುಂಡಿ ಬಿದ್ದಿದೆ. ಈ ರಸ್ತೆಯಲ್ಲಿ ವಾಹನ ಸವಾರರು ಓಡಾಡುವುದು ದುಸ್ತರವಾಗಿದೆ. ಗುಂಡಿ ಕಾಣದೇ ರಾತ್ರಿ ವೇಳೆ ಹಲವು ಸವಾರರು ಬಿದ್ದು ಗಾಯಗೊಂಡಿದ್ದಾರೆ. ಈ ಮಾರ್ಗದಲ್ಲಿ ಸಂಚರಿಸುವ ಪ್ರಯಾಣಿಕರು ಸವಳಂಗದ ಟೋಲ್‌ಗೇಟ್‌ನಲ್ಲಿ ಹೆದ್ದಾರಿ ಶುಲ್ಕ ಪಾವತಿಸುತ್ತಾರೆ. ಶುಲ್ಕ ಪಡೆಯುವ ಹೆದ್ದಾರಿ ದುರಸ್ತಿಗೆ ಕ್ರಮ ಕೈಗೊಂಡಿಲ್ಲ. ಸಂಬಂಧಪಟ್ಟ ಇಲಾಖೆಯವರು ಶೀಘ್ರ ರಸ್ತೆ ದುರಸ್ತಿಗೆ ಕ್ರಮ ಕೈಗೊಳ್ಳಬೇಕು ಎಂದು ಮೆರವಣಿಗೆ ಜಗದೀಶ, ಗಡೆಕಟ್ಟೆ ನಿಜಲಿಂಗಪ್ಪ ಆಗ್ರಹಿಸಿದ್ದಾರೆ.

## ದಿನ ಭವಿಷ್ಯ

| ರಾಹುಕಾಲ | ಮಧ್ಯಾಹ್ನ | 03:00 ರಿಂದ 04:00 |
|---|---|---|
| ಗುಳಿಕ ಕಾಲ | ಮಧ್ಯಾಹ್ನ | 12:00 ರಿಂದ 01:30 |
| ಯಮಗಂಡ ಕಾಲ | ಬೆಳಿಗ್ಗೆ | 09:00 ರಿಂದ 10:30 |

**ಮೇಷ** ನಿಮ್ಮ ಆರೋಗ್ಯದ ಬಗ್ಗೆ ಚಿಂತಿಸಲು ನಿರಾಕರಿಸಿ. ಇದು ಅನಾರೋಗ್ಯದ ವಿರುದ್ಧ ಪ್ರಬಲ ಚುಚ್ಚುಮದ್ದು. ನಿಮ್ಮ ಸರಿಯಾದ ಮನೋಭಾವ ತಪ್ಪು ಮನೋಭಾವವನ್ನು ಸೋಲಿಸುತ್ತದೆ.

**ವೃಷಭ** ಕೆಲವು ಕುಟುಂಬದ ಸದಸ್ಯರು ತಮ್ಮ ಅಸೂಯೆಯ ವರ್ತನೆಯಿಂದ ನಿಮಗೆ ಕಿರಿಕಿರಿ ಮಾಡಬಹುದು. ಆದರೆ ತಾಳ್ಮೆ ಕಳೆದುಕೊಳ್ಳುವುದು ಬೇಡ. ಇಲ್ಲದಿದ್ದರೆ ಪರಿಸ್ಥಿತಿ ನಿಯಂತ್ರಣ ಮೀರಬಹುದು.

**ಮಿಥುನ** ಮನರಂಜನೆ ಮತ್ತು ಮೋಜಿನ ಒಂದು ದಿನ. ಯಶಸ್ಸಿಗೆ ಇಂದಿನ ಸೂತ್ರವೆಂದರೆ ನಾವೀನ್ಯತೆಯಿರುವ ಮತ್ತು ಉತ್ತಮ ಅನುಭವ ಹೊಂದಿರುವ ಜನರ ಸಲಹೆಯಂತೆ ನಿಮ್ಮ ಹಣವನ್ನು ಹೂಡುವುದಾಗಿದೆ.

**ಕರ್ಕಾಟಕ** ಚಿಂತೆಗಳು ನಿಮಗೆ ಉದ್ವೇಗ ತರಬಹುದು. ರಿಯಲ್ ಎಸ್ಟೇಟ್‌ನಲ್ಲಿ ಹೂಡಿಕೆ ಲಾಭದಾಯಕವಾಗಬಹುದು. ಕುಟುಂಬದಲ್ಲಿ ನಿಮ್ಮ ಸರ್ವಾಧಿಕಾರಿ ಧೋರಣೆಯನ್ನು ಬದಲಾಯಿಸಿಕೊಳ್ಳಲು ಇದು ಒಳ್ಳೆಯ ಸಮಯ.

**ಸಿಂಹ** ಜೀವನದಲ್ಲಿ ಒತ್ತಡದ ಮನೋಭಾವವನ್ನು ತಪ್ಪಿಸಿ ಹೂಡಿಕೆ ಮಾಡುವುದು ಅನೇಕ ಬಾರಿ ನಿಮಗೆ ಪ್ರಯೋಜನಕಾರಿಯೆಂದು ಸಾಬೀತು ಪಡಿಸುತ್ತದೆ, ಇಂದು ನಿಮಗೆ ಈ ಮಾತು ಅರ್ಥವಾಗಬಹುದು.

**ಕನ್ಯಾ** ಇಂದು ಹಣದ ಆಗಮನವು ನಿಮ್ಮನ್ನು ಯಾವುದೇ ಸಮಸ್ಯೆಗಳಿಂದ ಮುಕ್ತಗೊಳಿಸಬಹುದು ಮನೆಯ ವಿಷಯಗಳು ಮತ್ತು ಬಾಕಿಯಿರುವ ಗೃಹಕೃತ್ಯಗಳನ್ನು ಪೂರೈಸಲು ಒಂದು ಅನುಕೂಲಕರ ದಿನ.

**ತುಲಾ** ಸ್ನೇಹಿತರು ನಿಮ್ಮ ಆಲೋಚನೆಗಳ ಮೇಲೆ ಗಮನಾರ್ಹ ಪ್ರಭಾವ ಬೀರಬಹುದಾದ ಯಾರಾದರೂಬ್ಬರನ್ನು ನಿಮಗೆ ಪರಿಚಯಿಸುತ್ತಾರೆ. ಹಣದ ಪ್ರಾಮುಖ್ಯತೆ ನಿಮಗೆ ಚೆನ್ನಾಗಿ ಗೊತ್ತಿದೆ.

**ವೃಶ್ಚಿಕ** ನೀವು ವಾಸ್ತವಾಂಶಗಳನ್ನು ಎದುರಿಸುತ್ತಿದ್ದ ಹಾಗೆ ಪ್ರೀತಿಪಾತ್ರರನ್ನು ಮರೆಬೇಕಾಗುತ್ತದೆ. ಒಬ್ಬ ಆಧ್ಯಾತ್ಮಿಕ ನಾಯಕರು ಅಥವಾ ಹಿರಿಯರು ಮಾರ್ಗದರ್ಶನ ಒದಗಿಸುತ್ತಾರೆ.

**ಧನಸ್ಸು** ನಿಮಗೆ ತುಂಬ ಉನ್ನತ ಶಕ್ತಿಯಿರುವ ದಿನ. ನೀವು ಸಣ್ಣ ವಿಷಯಗಳಿಗೂ ಕಿರಿಕಿರಿಗೊಳ್ಳುತ್ತೀರಿ. ಗಡಿಬಿಡಿಯ ನಿರ್ಧಾರಗಳನ್ನು ಕೈಗೊಳ್ಳಬೇಡಿ. ಪ್ರಮುಖ ಹಣಕಾಸಿನ ವ್ಯವಹಾರಗಳ ಬಗ್ಗೆ ಮಾತನಾಡುವಾಗ.

**ಮಕರ** ಇಂದು ನೀವು ನಿಮ್ಮ ಸಂಗಾತಿಯೊಂದಿಗೆ ಎಲ್ಲಾದರೂ ಹೊರಹೋಗಲು ಯೋಜಿಸುವಿರಿ ಆದರೆ ಯಾವುದೊ ಅಗತ್ಯವಾದ ಕೆಲಸದಿಂದಾಗಿ ಈ ಯೋಜನೆ ಯಶಸ್ವಿಯಾಗುವುದಿಲ್ಲ.

**ಕುಂಭ** ನಿಮ್ಮ ಶಕ್ತಿಯನ್ನು ಸ್ವಯಂ ಸುಧಾರಣೆ ಯೋಜನೆಗಳಲ್ಲಿ ಹಾಗೂ ನಿಮ್ಮನ್ನು ಉತ್ತಮವಾಗಿಸುವ ಯೋಜನೆಗಳಲ್ಲಿ ಹಾಕಿ. ಮನೆಯ ಸಣ್ಣ ವಸ್ತುಗಳ ಮೇಲೆ ನಿಮ್ಮ ಸಾಕಷ್ಟು ಹಣ ಹಾಳಾಗಬಹುದು.

**ಮೀನ** ಲೆಕ್ಕವಿಲ್ಲದಷ್ಟು ಗಾಬರಿಗಳು ನಿಮ್ಮ ಪ್ರತಿರೋಧಕತೆ ಮತ್ತು ಆಲೋಚನಾ ಶಕ್ತಿಯನ್ನು ದುರ್ಬಲಗೊಳಿಸಬಹುದು. ಸಕಾರಾತ್ಮಕ ಚಿಂತನೆಯ ಜೊತೆ ಈ ರೋಗದ ವಿರುದ್ಧ ಹೋರಾಡಲು ಪ್ರಯತ್ನಿಸಿ.

## ಉತ್ತಮ ಮಳೆ: ಗರಿಗೆದರಿದ ಕೃಷಿ ಚಟುವಟಿಕೆ

• ಉದಯವಾಹಿನಿ ಗಜೇಂದ್ರಗಡ

ಕಳೆದ 8-10 ದಿನಗಳಿಂದ ಸುರಿದ ಉತ್ತಮ ಮಳೆಯಿಂದಾಗಿ ತಾಲ್ಲೂಕಿನಾದ್ಯಂತ ರೈತರು ಕೃಷಿ ಚಟುವಟಿಕೆಗೆ ಅಣಿಯಾಗುತ್ತಿದ್ದಾರೆ.

ರೋಹಿಣಿ ಮಳೆಗೆ ಬಿತ್ತನೆ ಮಾಡಿದರೆ ಕೀಟ ಬಾಧೆ ಕಡಿಮೆ ಎಂಬ ನಂಬಿಕೆ ಹೊಂದಿರುವ ರೈತರು ಕಪ್ಪು (ಎರಿ) ಹಾಗೂ ಕೆಂಪು (ಮಸಾರಿ) ಭೂಮಿಯಲ್ಲಿ ಹೆಸರು, ಹೈಬ್ರಿಡ್ ಜೋಳ ಬಿತ್ತನೆ ಮಾಡುತ್ತಾರೆ. ಅಲ್ಲದೆ ಕೆಂಪು (ಮಸಾರಿ) ಭೂಮಿಯಲ್ಲಿ ಗೋವಿನ ಜೋಳ, ಸಜ್ಜೆ, ತೊಗರಿ ತಡವಾಗಿ ಬಿತ್ತನೆ ಮಾಡುತ್ತಾರೆ.

ತಾಲ್ಲೂಕಿನಾದ್ಯಂತ ಕೃತಿಕಾ ಮಳೆ ಉತ್ತಮವಾಗಿ ಸುರಿದಿದ್ದರಿಂದ ಭೂಮಿ ಸಂಪೂರ್ಣ ಹಸಿಯಾಗಿದೆ. ಮಳೆ ಬಿಡುವು ನೀಡಿ, ಬಿಸಿಲಿನ ಪ್ರಖರತೆ ಹೆಚ್ಚಿ ಭೂಮಿ ಸ್ವಲ್ಪ ಹದಕ್ಕೆ ಬಂದರೆ ಬಿತ್ತನೆ ಮಾಡಲು ರೈತರು ಈಗಾಗಲೇ ಮಾರುಕಟ್ಟೆಯಲ್ಲಿ ಬೀಜ, ರಸ ಗೊಬ್ಬರ ಖರೀದಿಸಿ ಸಂಗ್ರಹಿಸಿಟ್ಟುಕೊಂಡಿದ್ದಾರೆ.

ಪ್ರತಿ ವರ್ಷ ಸಕಾಲದಲ್ಲಿ ಕೃತಿಕಾ, ರೋಹಿಣಿ ಮಳೆ ಸುರಿಯದ ಕಾರಣ ರೋಹಿಣಿ ಮಳೆಗೆ ಬಿತ್ತನೆ ಮಾಡಲು ಆಗುತ್ತಿರಲಿಲ್ಲ. ಈ ಬಾರಿ ಸೈಕ್ಲೋನ್‌ನಿಂದಾಗಿ ಕೃತಿಕಾ ಮಳೆ ಉತ್ತಮವಾಗಿ ಸುರಿದಿದೆ. ಹೀಗಾಗಿ ಭೂಮಿ ಸ್ವಲ್ಪ ಹದಕ್ಕೆ ಬಂದರೆ ಬಿತ್ತನೆ ಮಾಡಲು ಈಗಾಗಲೇ ಬೀಜ ಗೊಬ್ಬರ ತಂದಿಟ್ಟುಕೊಂಡಿದ್ದೇವೆ. ಈ ಬಾರಿ ಉತ್ತಮ ಮಳೆ, ಬೆಳೆ ನಿರೀಕ್ಷೆ ಹೊಂದಿದ್ದೇವೆ' ಎಂದು ರೈತರಾದ ಅಂದಪ್ಪ ಅಂಗಡಿ, ಯಲ್ಲಪ್ಪ ಶಂಕ್ರಿ ಹೇಳಿದರು.


ಉದಯವಾಹಿನಿ ಚಿತ್ರ

• ಅಸಮರ್ಪಕ ನಿರ್ವಹಣೆ: ನೀರು ಪೂರೈಕೆ ಅಸ್ತವ್ಯಸ್ತ, ಹತ್ತು ದಿನಗಳಿಗೊಮ್ಮೆ ಕೊಳವೆಬಾವಿ ನೀರು

# ಆರು ವರ್ಷಗಳಿಂದ ತುಂಗಭದ್ರಾ ನದಿ ನೀರು ಸ್ಥಗಿತ

• ಉದಯವಾಹಿನಿ ಮುಳಗುಂದ

ಸ್ಥಳೀಯ ಪಟ್ಟಣ ಪಂಚಾಯಿತಿಯು ಸಾರ್ವಜನಿಕ ಕುಡಿಯುವ ನೀರು ಪೂರೈಕೆ ವ್ಯವಸ್ಥೆಯನ್ನು ಸಮರ್ಪಕವಾಗಿ ನಿರ್ವಹಿಸದ ಪರಿಣಾಮ ಪಟ್ಟಣದಲ್ಲಿ ನೀರಿನ ಹಾಹಾಕಾರ ತಲೆದೋರಿದೆ. ತುಂಗಭದ್ರಾ ನದಿ ನೀರು ಸಹ ಆರು ವರ್ಷಗಳಿಂದ ಬಂದ್ ಆಗಿದೆ. ಪಟ್ಟಣದಲ್ಲಿ ಬಸಾಪುರ, ಶೀತಾಲಹರಿ ಒಳಗೊಂಡು ಒಟ್ಟು 19 ವಾರ್ಡ್‌ಗಳಿದ್ದು, ಅಂದಾಜು 20 ಸಾವಿರ ಜನಸಂಖ್ಯೆ ಹೊಂದಿದೆ. ಈ ಹಿಂದೆಂದೂ ಕಂಡು ಕೇಳರಿಯದಂಥ ನೀರಿನ ಸಮಸ್ಯೆಯನ್ನು ಸಾರ್ವಜನಿಕರು ಎದುರಿಸುವ ಪರಿಸ್ಥಿತಿ ನಿರ್ಮಾಣವಾಗಿದೆ.

5-6 ವರ್ಷಗಳ ಹಿಂದೆ ಎರಡು ದಿನಗಳಿಗೊಮ್ಮೆ ನೀರು ಪೂರೈಸಲಾಗುತ್ತಿತ್ತು, ನಂತರ ನಾಲ್ಕು ದಿನಗಳಿಗೊಮ್ಮೆ ಸರದಿ ಪೂರೈಕೆ ಚಾಲ್ತಿಗೆ ತರಲಾಯಿತು. ಆದರೆ ಈಚಿನ ಕೆಲವು ತಿಂಗಳಿಂದ 10-12 ದಿನಗಳಿಗೊಮ್ಮೆ ನೀರು ಸರಬರಾಜು ಆಗುತ್ತಿದ್ದು, ಸಾರ್ವಜನಿಕರು ಪಟ್ಟಣ ಪಂಚಾಯಿತಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಇಲ್ಲಿನ 19 ವಾರ್ಡ್‌ಗಳಿಗೆ ಕೊಳವೆಬಾವಿ ನೀರು ಮಾತ್ರ ಆಧಾರವಾಗಿದೆ. ಊರಿನ ಸುತ್ತಮುತ್ತಲಿರುವ ಸಿಹಿ ನೀರಿನ 36 ಕೊಳವೆಬಾವಿಗಳು ದಿನದ 24 ಗಂಟೆ ಶುರುವಿದ್ದರೂ ಪಟ್ಟಣದಲ್ಲಿ ನೀರಿನ ಬರ ಎದುರಾಗಿದೆ. ಮನೆಯಲ್ಲಿ ಎರಡು ಮೂರು ದಿನಗಳ ಬಳಕೆಗೆ ಆಗುವಷ್ಟು ನೀರು ಸಂಗ್ರಹ ಇರುತ್ತದೆ. ಆದರೆ, 10-12 ದಿನಗಳು ನೀರು ಬರದಿದ್ದರೆ ನಮ್ಮ ಗತಿ ದೇವರೇ ಬಲ್ಲ. 400 ಕೊಟ್ಟು ಟ್ಯಾಂಕರ್ ನೀರು ಕೊಳ್ಳುವಂತಾಗಿದೆ. ಸಮೀಪದಲ್ಲಿ ಬಾವಿ, ಕೆರೆ ಇಲ್ಲ. ಹೀಗಾಗಿ ನೀರು ಇಲ್ಲವಾದರೆ ನಾವು ಎಲ್ಲಿಗೆ ಹೋಗೋದು. ಸ್ಥಳಿಯ ಪಟ್ಟಣ ಪಂಚಾಯಿತಿ ನೀರು ಪೂರೈಕೆ ನಿರ್ವಹಣೆಯಲ್ಲಿ ಪದೆ ಪದೇ ನಿರ್ಲಕ್ಷ್ಯ ವಹಿಸುತ್ತಿದೆ ಎಂದು ಮಹಾಂತೇಶ ಆಕ್ರೋಶ ವ್ಯಕ್ತಪಡಿಸಿದರು. ಕೆಲವೊಮ್ಮೆ ನೀರು ಎತ್ತುವ ಯಂತ್ರಗಳು ಕೈ ಕೊಟ್ಟಾಗ, ಗಾಳಿ ಮಳೆಗೆ ರಾತ್ರಿ ವೇಳೆಗೆ ವಿದ್ಯುತ್ ಕಡಿತ ಮೇಲಿಂದ ಮೇಲೆ ಆಗುತ್ತಿದೆ. ಈ ಕಾರಣದಿಂದ ನೀರು ಸಂಗ್ರಹ ಸಾಧ್ಯವಾಗುತ್ತಿಲ್ಲ. ನೀರೆತ್ತುವ ಯಂತ್ರಗಳು ಬಂದ್ ಆಗುತ್ತಿವೆ ಎನ್ನುತ್ತಾರೆ ನೀರು ಪೂರೈಕೆ ಸಿಬ್ಬಂದಿ. ನೀರು ಪೂರೈಕೆಯಲ್ಲಿ ವ್ಯತ್ಯಯ ಆಗದಂತೆ ಮುಂಜಾಗ್ರತೆ ವಹಿಸಲಾಗಿದೆ. ಹೆಚ್ಚುವರಿ ಯಂತ್ರಗಳನ್ನು ಸಂಗ್ರಹ ಮಾಡಿಕೊಂಡಿದ್ದೇವೆ. ಆದರೆ ನೀರಿನ ಸಂಪ್ ಇರುವ ಕಡೆ ವಿದ್ಯುತ್ ಸಂಪರ್ಕ ಕಡಿತವಾದಾಗ ಈ ರೀತಿ ಸಮಸ್ಯೆ ಆಗುತ್ತದೆ ಎಂದು ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಮಂಜುನಾಥ ಗುಳೇದ ತಿಳಿಸಿದ್ದಾರೆ.

2009ರಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಹಾಗೂ ಶಿರಹಟ್ಟಿ, ಮುಳಗುಂದ ಪಟ್ಟಣ ಪಂಚಾಯಿತಿಗಳ ಸಹಯೋಗದಲ್ಲಿ 33.50 ಕೋಟಿ ವೆಚ್ಚದಲ್ಲಿ ಶಾಶ್ವತ ಕುಡಿಯುವ ನೀರಿನ ಯೋಜನೆ ಕಾಮಗಾರಿ ಪೂರ್ಣಗೊಂಡಿತ್ತು. 2015ರಲ್ಲಿ ಅಂದು ಸಿಎಂ ಆಗಿದ್ದ ಸಿದ್ದರಾಮಯ್ಯ ಅವರು ನದಿ ನೀರು ಸರಬರಾಜು ಯೋಜನೆಗೆ ಚಾಲನೆ ನೀಡಿದ್ದರು.

ಆರಂಭದಲ್ಲಿ ನಿರ್ವಹಣೆ ಉತ್ತಮವಾಗಿ ನಡೆದಿತ್ತು. ನಂತರದ ದಿನಗಳಲ್ಲಿ ಮಾರ್ಗ ಮಧ್ಯೆ ನೀರು ಬಳಸುವ ಸುಗ್ನಳ್ಳಿ, ಬನ್ನಿಕೊಪ್ಪ, ಬೆಳ್ಳಟ್ಟಿ, ಹೊಸೂರ, ಛಬ್ಬಿ, ರಣತೂರ ಗ್ರಾಮಗಳು ತಮ್ಮ ಪಾಲಿನ ವೆಚ್ಚ 2016ರ ಮಾರ್ಚ್ 31ರಿಂದ 2020 ವರೆಗೆ ಸುಮಾರು 1.22 ಕೋಟಿ ನೀರಿನ ಕರ ಭರಿಸದೆ ಬಾಕಿ ಉಳಿಸಿಕೊಂಡಿವೆ. ಹೀಗಾಗಿ ನಿರ್ವಹಣೆಗೆ ಹಣವಿಲ್ಲದೆ ನೀರು ಸರಬರಾಜು ಸ್ಥಗಿತಗೊಂಡಿದೆ.



ಉದಯವಾಹಿನಿ ಚಿತ್ರ

> ತುಂಗಭದ್ರಾ ನದಿ ನೀರು ಪಕ್ಕದ ಹಳ್ಳಿಗಳಿಗೆ ನಿತ್ಯ ಪೂರೈಕೆ ಆಗುತ್ತಿದೆ. ಆದರೆ ಮುಳಗುಂದಕ್ಕೆ ಆ ಭಾಗ್ಯ ಇನ್ನೂ ದೊರಕುತ್ತಿಲ್ಲ. ಜನಪ್ರತಿನಿಧಿಗಳ ಇಚ್ಛಾಶಕ್ತಿ ಇಲ್ಲದ ಕಾರಣ, ಜಲ ಶುದ್ಧೀಕರಣಕ್ಕೆ ಹಾಕಿದ್ದ ಹತ್ತಾರು ಕೋಟಿ ರೂಪಾಯಿ ವೆಚ್ಚದ ಯಂತ್ರಗಳು ಮೂಲೆಗುಂಪಾಗಿವೆ. ಹೆಸರಿಗೆ ಮಾತ್ರ ಶಾಶ್ವತ ಕುಡಿಯುವ ನೀರಿನ ಯೋಜನೆ; ಆದರೆ ನದಿನೀರು ಕುಡಿದಿದ್ದು ಮಾತ್ರ ಕೆಲವೇ ದಿನಗಳು
>
> -ರಾಘವೇಂದ್ರ, ಕುಂಬಾರಗೇರಿ, ಸ್ಥಳೀಯರು

> ಅಸಮರ್ಪಕ ಕುಡಿಯುವ ನೀರು ಪೂರೈಕೆಯಿಂದ ನೀರಿಗೆ ಬರ ಎದುರಾಗಿದೆ. ಹಣ ಕೊಟ್ಟು ಟ್ಯಾಂಕರ್ ಮೂಲಕ ನೀರು ಕೊಳ್ಳುವಂತಾಗಿದೆ. ಇತ್ತ ಕೊಳವೆಬಾವಿ ನೀರು ಇಲ್ಲ; ಅತ್ತ ನದಿ ನೀರು ಇಲ್ಲವಾಗಿದ್ದು, ಸಂಬಂಧಿಸಿದ ಅಧಿಕಾರಿಗಳಿಗೆ ಹಲವು ಮನವಿಗಳನ್ನು ನೀಡಿದ್ದೇವೆ. ಯಾವುದೇ ಪ್ರಯೋಜನವಾಗಿಲ್ಲ. ಜಿಲ್ಲಾಡಳಿತ ಈ ಬಗ್ಗೆ ಗಮನ ಹರಿಸಬೇಕು
>
> -ದತ್ತಪ್ಪ ಯಳವತ್ತಿ, ರೈತ ಸಂಘದ ಮುಖಂಡ

**ತುಂಗಭದ್ರಾ ನದಿ ನೀರು ಸ್ಥಗಿತ**

**ಸುಮಾರು 60 ಕಿ.ಮೀ. ದೂರದ ಹೊಳೆ ಇಟಗಿ ಜಾಕ್‌ವೆಲ್ ಮೂಲಕ ಸರಬರಾಜು ಆಗುತ್ತಿದ್ದ ತುಂಗಭದ್ರಾ ನದಿ ನೀರು ಬಳಸುತ್ತಿರುವ ಗ್ರಾಮಗಳು ಬಿಲ್ ಬಾಕಿ ಉಳಿಸಿಕೊಂಡಿವೆ. ಇದರಿಂದ ನಿರ್ವಹಣೆ ವೆಚ್ಚ ಭರಿಸಲು ಸಾಧ್ಯವಾಗದ ಕಾರಣ ಕಳೆದ 6 ವರ್ಷಗಳಿಂದ ನೀರು ಪೂರೈಕೆ ಸ್ಥಗಿತಗೊಂಡಿದೆ.**

**ಜಿಲ್ಲಾಡಳಿತ ಗಮನ ಹರಿಸಲಿ**

## ಒಳ ಮೀಸಲಾತಿ ಹೋರಾಟಗಾರ ಬಿ.ಆರ್.ಭಾಸ್ಕರ್ ಪ್ರಸಾದ್ ಹಾಗೂ ತಂಡವನ್ನು ಬಂಧಿಸಿರುವುದು ಖಂಡನೆ: ಕಟ್ಟಿಮನಿ

• ಉದಯವಾಹಿನಿ,ಚಿಂಚೋಳಿ



ಮೈಸೂರು ಚಾಮುಂಡಿತಾಯಿ ಬೆಟ್ಟದಿಂದ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದವರೆಗೆ ಸಂವಿಧಾನದ ಅಡಿ ಪಾದಯಾತ್ರೆ ಹಮ್ಮಿಕೊಂಡಿರುವ ಒಳಮೀಸಲಾತಿ ಹೊರಾಟಗಾರ ಬಿ.ಆರ್.ಭಾಸ್ಕರ್ ಪ್ರಸಾದ್ ಹಾಗೂ ಅವರ ತಂಡವನ್ನು ಮೈಸೂರಿನ ಪೊಲೀಸರು ಬಂಧಿಸಿ ಕಷ್ಟಡಿಗೆ ತೆಗೆದುಕೊಂಡಿರುವುದು ಖಂಡನೀಯ ಎಂದು ಪರಿಶೀಷ್ಟ ಜಾತಿಗಳ ಒಳಮೀಸಲಾತಿ ಜಾರಿ ಹೋರಾಟ ಸಮಿತಿಯ ರಾಜ್ಯ ಸಂಚಾಲಕ ಗೋಪಾಲರಾವ ಕಟ್ಟಿಮನಿ ತಿಳಿಸಿದ್ದಾರೆ. ಪತ್ರಿಕಾ ಪ್ರಕಟನೆ ಹೊರಡಿಸಿದ ಅವರು,ಸುಮಾರು ವರ್ಷಗಳಿಂದ ಸಂವಿಧಾನ ಅಡಿಯಲ್ಲಿ ಕಾನೂನಿನ ಚೌಕಟ್ಟಿನಲ್ಲಿ ಹೋರಾಟ ಮಾಡಿಕೊಂಡು ಬಂದಿರುವ ಮಾದಿಗ ಸಮಾಜದ ಹೋರಾಟಗಾರರಿಗೆ ಕಾನೂನು ಬಾಹಿರವಾಗಿ ಹೋರಾಟ ಹತ್ತಿಕ್ಕುವ ಕುಮ್ಮಕ್ಕುನಿಂದ ಕೆಲ ಸಚಿವರ ಸೂಚನೆ ಮೇರೆಗೆ ಬಂಧಿಸಿರುವ ಎಲ್ಲಾ ಹೋರಾಟಗಾರರಿಗೆ ಭೇಷರತ್ತಾಗಿ ವಜಾಗೋಳಿಸದಿದ್ದರೆ ರಾಜ್ಯದ ಮಾದಿಗರ ತಾಳ್ಮೆ ಪರೀಕ್ಷೆಗೆ ನೇರ ಹೊಣೆ ಸಚಿವ ಹೆಚ್.ಸಿ.ಮಹಾದೇವಪ್ಪ ಹೊಣೆಗಾರರು ಎಂದು ಬಿಂಬಿಸಬೇಕಾಗುತ್ತದೆ. ಒಂದು ವೇಳೆ ಸಮಯ ಹರಣ ಮಾಡಿದರೆ ರಾಜ್ಯಾದ್ಯಂತ ಉಗ್ರ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ. ಮಲ್ಲು ಕೊಡಂಬಲ್,ವಿಜಯರಾಜ್, ಸುರೇಶ,ಸುರೇಂದ್ರ,ಸುರೇಶ ನರನಾಳ,ಇದ್ದರು.

## ಭೀಕರ ಮಳೆಗೆ ಜನ ಹೈರಾಣ: ಮನೆಗೆ ನುಗ್ಗಿದ ನೀರು

• ಉದಯವಾಹಿನಿ, ಬಂಟ್ವಾಳ

ಕಳೆದ ವಾರಗಳಿಂದ ನಿರಂತರವಾಗಿ ಸುರಿಯುವ ವಾಯುಭಾರ ಕುಸಿತದ ಭೀಕರ ಮಳೆಗೆ ತಾಲ್ಲೂಕಿನ ಅಲ್ಲಲ್ಲಿ ಹಾನಿಯಾಗಿದ್ದು ಮನೆಯೊಂದಕ್ಕೆ ನೀರು ನುಗ್ಗಿದ ಘಟನೆ ನಡೆದಿದೆ. ಸಜೀಪ ಮುನ್ನೂರು ಗ್ರಾಮದ ಮುಬಾರಕ್ ಎಂಬವರ ಮನೆಯೊಳಗೆ ನೀರು ನುಗ್ಗಿದ್ದು,ಸದ್ಯ ಮನೆಯವರನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರ ಮಾಡಲಾಗಿದೆ.

ಮಳೆಗಾಲ ಆರಂಭವಾಗುವ ಮುನ್ನ ಸ್ಥಳೀಯ ಆಡಳಿತ ಮಳೆ ನೀರು ಸರಾಗವಾಗಿ ಹರಿದುಹೋಗಲು ಸರಿಯಾದ ವ್ಯವಸ್ಥೆ ಮಾಡದೆ ಚರಂಡಿ ಇಲ್ಲದ ಕಾರಣ ಚರಂಡಿಯ ನೀರು ಮನೆಯೊಳಗೆ ನುಗ್ಗಿದೆ ಎಂದು ಆಪಾದಿಸಲಾಗಿದೆ. ನೆಟ್ಲ ಮುನ್ನೂರು ಗ್ರಾಮದ ಪರ್ಲೊಟ್ಟು ಬಳಿ ಮರ ಬಿದ್ದು ಜನರ ಓಡಾಟದ ಅಗತ್ಯವಾದ ಕಾಲುಸಂಕ ಮುರಿದುಬಿದ್ದಿದೆ. ವಿಟ್ಲ ಪಟ್ಟಣ ಪಂಚಾಯತ್ ವ್ಯಾಪ್ತಿಯ ಉಕ್ಕುಡ ದರ್ಬೆಯಲ್ಲಿ ಶಿಥಿಲಗೊಂಡ ಛಾವಣಿಗೆ ಟಾರ್ಪಲ್ ಅಳವಡಿಸಲು ಕ್ರಮ ವಹಿಸಲಾಗಿದೆ. ಪುದು ಗ್ರಾಮದ ಅಮ್ಮೆಮಾರ್ ಎಂಬಲ್ಲಿ ಅಬುಬಕ್ಕರ್ ಮನೆಯ ಗೋಡೆ ಹಾಗೂ ಹಂಚಿಗೆ ಹಾನಿಯಾಗಿದೆ.


ಉದಯವಾಹಿನಿ ಚಿತ್ರ

## ತೊಗರಿ ಬೀಜಕ್ಕೆ ಮುಗಿ ಬಿದ್ದ ರೈತರು

• ಉದಯವಾಹಿನಿ ಬಳ್ಳಾರಿ

ಕಳೆದ ಹಲವು ದಿನಗಳಿಂದ ಬೀಳುತ್ತಿರುವ ಮುಂಗಾರು ಮಳೆಯಿಂದ ಭೂಮಿ ಹಸಿಯಾಗಿದ್ದು ತೊಗರಿ ಬಿತ್ತನೆ ಬೀಜಕ್ಕಾಗಿ ರೈತರು ನಗರದ ಕೆ.ಸಿ.ರಸ್ತೆಯಲ್ಲಿನ ಬೀಜ ಮಾರಾಟದ ಅಂಗಡಿಗಳಿಗೆ ಮುಗಿಬಿದ್ದಿದ್ದಾರೆ. ಒಂದು ಕಿಲೋ 140 ರೂ. ನಂತೆ ನಾಲ್ಕು ಕಿಲೋ ಪ್ಯಾಕಿಂಗ್ ನ ತೊಗರಿ ಬೀಜ ಖರೀದಿಸಲು ಮಳೆಯಾಶ್ರಿತ ಜಮೀನಿನ ರೈತರು ಮುಂದಾಗಿದ್ದಾರೆ.

ಬೇಡಿಕೆ ಹೆಚ್ಚಿರುವುದರಿಂದ ಅಂಗಡಿಗಳ ಮುಂದೆ ಮುಗಿ ಬಿದ್ದು ಟೋಕನ್ ಪಡೆದು, ನಂತರ ಬೀಜ ಖರೀದಿಸಬೇಕಿದೆ. ಬೀಜ ಖರೀದಿಗಾಗಿ ನೆರೆಯ ಆಂಧ್ರ ಪ್ರದೇಶದ ಅನಂತಪುರಂ, ಕರ್ನೂಲ್ ಜಿಲ್ಲೆಗಳ ರೈತರು ಈ ಬೀಜ ಖರೀದಿಗೆ ಮುಂದಾಗಿದ್ದಾರೆ.

## ತಾಲ್ಲೂಕು ಬಾಲಕಾರ್ಮಿಕ ಪುನರ್ವಸತಿ ಸಮಿತಿ ಸಭೆ

• ಉದಯವಾಹಿನಿ, ಚಿತ್ರದುರ್ಗ

ಹೊಳಲ್ಕೆರೆ ತಹಶೀಲ್ದಾರ್ ಕಚೇರಿಯಲ್ಲಿ ತಹಶೀಲ್ದಾರ್ ಬೀಬಿ ಫಾತಿಮಾ ಅಧ್ಯಕ್ಷತೆಯಲ್ಲಿ ಬಾಲಕಾರ್ಮಿಕ ಪುನರ್ವಸತಿ ಸಮಿತಿ ಸಭೆ ನಡೆಯಿತು. ಮುಂಬರುವ ಜೂನ್ 12ರಂದು ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನದ ಅಂಗವಾಗಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಸಲುವಾಗಿ ಸಭೆಯಲ್ಲಿ ಚರ್ಚಿಸಲಾಯಿತು.

ಜೂನ್ 12ರಂದು ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನ ಅಂಗವಾಗಿ ವಿವಿಧ ಶಾಲಾ ಮಕ್ಕಳಿಂದ ಜಾಥಾ ಕಾರ್ಯಕ್ರಮ ಹಾಗೂ ಕಚೇರಿಗಳಲ್ಲಿ ಬಾಲ ಕಾರ್ಮಿಕ ನಿಷೇಧ ಕುರಿತು ಪ್ರಮಾಣ ವಚನ ಸ್ವೀಕರಿಸುವುದು ಹಾಗೂ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಪಂಚಾಯಿತಿ ವತಿಯಿಂದ ತಾಲ್ಲೂಕಿನ ಎಲ್ಲಾ ಗ್ರಾಮಗಳಲ್ಲಿ ಹಾಗೂ ಪುರಸಭೆ ವತಿಯಿಂದ ಕಸದ ವಾಹನಗಳಲ್ಲಿ ಬಾಲ ಕಾರ್ಮಿಕ ನಿಷೇಧ ಕುರಿತು ಆಡಿಯೋ ರೆಕಾರ್ಡಿಂಗ್ ಮೂಲಕ ಜನರಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡಬೇಕು ಎಂದು ತಿಳಿಸಿದ ಅವರು, ಎಲ್ಲಾ ತಾಲ್ಲೂಕು ಮಟ್ಟದ ಅಧಿಕಾರಿಗಳು ಜೂನ್ 12ರಂದು ನಡೆಯುವ ಜಾಥಾ ಕಾರ್ಯಕ್ರಮ ಹಾಗೂ ಜೂನ್ 12ರ ನಂತರ ಬಾಲಕಾರ್ಮಿಕ ಮತ್ತು ಕಿಶೋರ ಕಾರ್ಮಿಕ ಕುರಿತ ಅಭಿಯಾನವನ್ನು ಜೂನ್ 30 ರವರೆಗೆ ನಡೆಸಲು ಅಧಿಕಾರಿಗಳಿಗೆ ಸೂಚನೆ ನೀಡಿದರು. ಸಭೆಯಲ್ಲಿ ಕಾರ್ಮಿಕ ನಿರೀಕ್ಷಕ ಡಿ.ರಾಜಣ್ಣ, ಬಾಲಕಾರ್ಮಿಕ ಯೋಜನಾ ನಿರ್ದೇಶಕ ಪಿ.ಸತೀಶ್ ಕುಮಾರ್ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ಇದ್ದರು.


ಉದಯವಾಹಿನಿ ಚಿತ್ರ

## ಭಾರಿ ಮಳೆ: ಕಾರ್ಕಳ, ಹೆಬ್ರಿಯಲ್ಲಿ ಉಕ್ಕಿ ಹರಿದ ನದಿಗಳು

• ಉದಯವಾಹಿನಿ, ಕಾರ್ಕಳ

ಕಾರ್ಕಳ ಹಾಗೂ ಹೆಬ್ರಿ ತಾಲ್ಲೂಕು ವ್ಯಾಪ್ತಿಗಳಲ್ಲಿ ವರ್ಷಾಧಾರೆ ಮುಂದವರಿದಿದೆ. ಹೆಬ್ರಿ ಭಾಗದಲ್ಲಿ ಹರಿಯುವ ಸೀತಾನದಿ ಹಾಗೂ ಕಾರ್ಕಳ ತಾಲ್ಲೂಕಿನಲ್ಲಿ ಹರಿಯುವ ಸ್ವರ್ಣಾ ನದಿಗಳಲ್ಲಿ ನೀರಿನ ಮಟ್ಟ ಏರಿಕೆಯಾಗಿದೆ. ಸೀತಾನದಿಯ ಉಪನದಿಯಾದ ಶಿವಪುರ ನದಿ ಉಕ್ಕಿ ಹರಿಯುತ್ತಿದೆ. ಕಾರ್ಕಳ ತಾಲ್ಲೂಕಿನ ಪ್ರಮುಖ ನದಿಯಾದ ಸ್ವರ್ಣ ನದಿಯ ಉಪನದಿಗಳಾದ ಮಂಜಲ್ತಾರ್, ಸೂರಂಟೆ ನದಿ, ನಡುಹಳ್ಳ, ಹಪ್ಪನಡ್ಕ, ಹೆಗ್ಡೆಬೆಟ್ಟು ಚೌಕಿ ನದಿಗಳಲ್ಲೂ ನೀರಿನಮಟ್ಟ ಏರಿಕೆಯಾಗಿದೆ. ಮಾಳದ ಕಡಾರಿ, ಕೆರುವಾಶೆ, ಮುಂಡ್ಲಿ ಡ್ಯಾಂ ಹಾಗೂ ಏತನೀರಾವರಿ ಯೋಜನೆಯ ಅಣೆಕಟ್ಟಿನ 3 ಗೇಟುಗಳನ್ನು ತೆರೆಯಲಾಗಿದ್ದು, ನದಿಯಲ್ಲಿ ನೀರಿನ ಹರಿವು ಹೆಚ್ಚಿದೆ.

ಮಾಳದ ಎಡಪಾಡಿ ರಸ್ತೆಯಲ್ಲಿ ಘನ ವಾಹನಗಳಿಗೆ ಸಂಚಾರ ನಿರ್ಬಂಧ ವಿಧಿಸಲಾಗಿದೆ. ಕಲ್ಯಾದಲ್ಲಿ ಭಾರಿ ಗಾತ್ರದ ಮರವೊಂದು ರಸ್ತೆಗೆ ಬಿದ್ದ ಪರಿಣಾಮ ವಿದ್ಯುತ್ ತಂತಿಗಳು ಮುರಿದು ಬಿದ್ದಿವೆ. ಕಾರ್ಕಳ ತಾಲ್ಲೂಕಿನ ಮುಡಾರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಲ್ಯಾಣಪುರ-ಮುಡಾರು ರಾಜ್ಯ ಹೆದ್ದಾರಿ ನಡುವಿನ ರಾಮೆರಾಗುತ್ತು ಬಳಿ ನೂತನ ಸೇತುವೆ ನಿರ್ಮಾಣವಾಗುತ್ತಿದ್ದು, ನೀರಿನ ಮಟ್ಟ ಹೆಚ್ಚಿರುವುದರಿಂದ ಬದಲಿ ರಸ್ತೆಯನ್ನು ಮುಚ್ಚಲಾಗಿದೆ. ಕೆರ್ವಾಶೆಯಿಂದ ಬಜಗೋಳಿ ಕಡೆಗೆ ತೆರಳುವವರ ಮತ್ತು ಬಜಗೋಳಿಯಿಂದ ಕೆರ್ವಾಶೆ ಕಡೆಗೆ ತೆರಳುವವರು ಹಡ್ಯಾಲು ಕ್ರಾಸ್ ಮೂಲಕ ತೆರಳುವಂತೆ ಸಂಬಂಧಿಸಿದ ಅಧಿಕಾರಿಗಳು ತಿಳಿಸಿದ್ದಾರೆ.

ಉತ್ತಮ ಮಳೆಯಾಗುತ್ತಿರುವ ಕಾರಣ ಕೃಷಿಕರು ಗದ್ದೆಗಳತ್ತ ಮುಖ ಮಾಡುತ್ತಿದ್ದಾರೆ. ಕೆಲವೆಡೆಗಳಲ್ಲಿ ಟ್ರ್ಯಾಕ್ಟರ್‌ಗಳ ಮೂಲಕ ಗದ್ದೆ ಹದ ಮಾಡಲು ಆರಂಭಿಸಲಾಗಿದೆ.


ಉದಯವಾಹಿನಿ ಚಿತ್ರ

## ಅಕ್ರಮ ಪಡಿತರ ಅಕ್ಕಿ ಜಪ್ತಿ

• ಉದಯವಾಹಿನಿ ಕಲಬುರಗಿ

ಇಲ್ಲಿನ ತಾಜ್ ನಗರದ ಮುಖಾಂತರ ಗೂಡ್ಸ್ ವಾಹನದಲ್ಲಿ ಪಡಿತರ ಅಕ್ಕಿಯನ್ನು ಅಕ್ರಮವಾಗಿ ಖರೀದಿಸಿ ಕಾಳಸಂತೆಯಲ್ಲಿ ಮಾರಾಟ ಮಾಡಲು ಸಾಗಾಣಿಕೆ ಮಾಡಲಾಗುತ್ತಿದೆ ಎಂಬ ಮಾಹಿತಿ ಮೇಲೆ ಆಹಾರ ನಿರೀಕ್ಷಕರಾದ ವಿದ್ಯಾಶ್ರೀ ಪಾಟೀಲ, ಚೌಕ್ ಪೊಲೀಸ್ ಠಾಣೆ ಎಎಸ್‌ಐ ಗಣಪತಿ ಮತ್ತು ಸಿಬ್ಬಂದಿ ದಾಳಿ ನಡೆಸಿ ಗೂಡ್ಸ್ ವಾಹನ ಮತ್ತು ಅಕ್ಕಿ ಸೇರಿ 13,53,600 ರೂ.ಮೌಲ್ಯದ ವಸ್ತುಗಳನ್ನು ಜಪ್ತಿ ಮಾಡಿದ್ದಾರೆ. ಈ ಸಂಬಂಧ ಗೂಡ್ಸ್ ವಾಹನ ಚಾಲಕ ವಿರೇಶ ಡೋಲೆ ಮತ್ತು ಅಕ್ಕಿಯ ಮಾಲಿಕ ಜೇವರ್ಗಿಯ ಚಂದ್ರಕಾಂತ ಎಂಬುವವರ ವಿರುದ್ಧ ಚೌಕ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ತನಿಖೆ ನಡೆದಿದೆ.

## ವಿದ್ಯಾರ್ಜನೆಯೇ ವಿದ್ಯಾರ್ಥಿ ಜೀವನದ ಮುಖ್ಯ ಗುರಿ: ರವಿ ಹತ್ತಳ್ಳಿ

• ಉದಯವಾಹಿನಿ, ವಿಜಯಪುರ

ವಿದ್ಯಾರ್ಥಿಗಳು ಶಿಕ್ಷಣಕ್ಕೆ ಮೊದಲಾದ್ಯತೆ ನೀಡಿ, ಜೀವನದಲ್ಲಿ ನಿರ್ದಿಷ್ಟ ಗುರಿ ಹೊಂದುವ ಜೊತೆಗೆ ಗುರುಭಕ್ತಿ, ಶ್ರದ್ಧೆ, ಆಸಕ್ತಿ, ಸ್ವಯಂ ಶಿಸ್ತಿನ ಗುಣಗಳನ್ನು ರೂಢಿಸಿಕೊಂಡು ಸ್ವಾವಲಂಬಿ ಬದುಕನ್ನು ಕಟ್ಟಿಕೊಳ್ಳಬೇಕು ಎಂದು ಹುಬ್ಬಳ್ಳಿ ಧಾರವಾಡ ತೆರಿಗೆ ಇಲಾಖೆಯ ಜಂಟಿ ನಿರ್ದೇಶಕ ರವಿ ಹತ್ತಳ್ಳಿ ಹೇಳಿದರು.

ರವಿವಾರ ನಗರದ ಷಣ್ಮುಖಾರೂಢ ಮಠದಲ್ಲಿ ಅಭಿನವಶ್ರೀ ಬೇಸಿಗೆ ವಿಶೇಷ ತರಬೇತಿ ಶಿಬಿರದ ಸಮಾರೋಪ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ವಿದ್ಯಾರ್ಥಿಗಳಲ್ಲಿ ಶಿಸ್ತು ಮತ್ತು ಸಮಯಪ್ರಜ್ಞೆ ಬಹಳ ಮುಖ್ಯ. ನಿರಂತರ ಅಧ್ಯಯನದಿಂದ ಗುರಿ ತಲುಪಲು ಸಾಧ್ಯ. ಯಾವುದೇ ಗುರಿ ತಲುಪಬೇಕಾದರೂ ಶ್ರದ್ಧೆ, ಸಂಯಮ ಹಾಗೂ ಕಠಿಣ ಪರಿಶ್ರಮ ಅತ್ಯಗತ್ಯ ಎಂದು ಹೇಳಿದರು.

ಶಿಕ್ಷಕ ಸಾಹಿತಿ ಸಂತೋಷ ಬಂಡೆ ಮಾತನಾಡಿ, ವಿದ್ಯಾರ್ಜನೆಯೇ ವಿದ್ಯಾರ್ಥಿ ಜೀವನದ ಮುಖ್ಯ ಗುರಿ. ಮಕ್ಕಳಲ್ಲಿ ಶಿಸ್ತು, ಸಂಸ್ಕಾರ ಮುಖ್ಯ. ಮಕ್ಕಳಲ್ಲಿ ಸಕಾರಾತ್ಮಕ ಯೋಚನೆ ಜಾಗೃತವಾಗಬೇಕು. ಸದೃಢ ಸ್ವಸ್ಥ ಸಮಾಜ ನಿರ್ಮಾಣದಲ್ಲಿ ಶಿಕ್ಷಣದ ಪಾತ್ರ ಬಹು ಮುಖ್ಯ ಎಂದು ಹೇಳಿದರು.

ಸಂಸ್ಥೆಯ ಅಧ್ಯಕ್ಷ ಅಶೋಕ ಬಿರಾದಾರ ಅಧ್ಯಕ್ಷತೆ ವಹಿಸಿ ಮಾತನಾಡಿ, ಮಕ್ಕಳು ಕುಟುಂಬ, ಸಮಾಜ, ದೇಶದ ಆಸ್ತಿಯಾಗುವಂತೆ ಪಾಲಕರು, ಶಿಕ್ಷಕರು ಶ್ರಮಿಸಬೇಕು. ವಿದ್ಯಾರ್ಥಿಗಳು ವಿದ್ಯೆಯ ಜೊತೆಗೆ ನಯ ವಿನಯ, ಸಂಸ್ಕಾರಗಳನ್ನು ಕಲಿತುಕೊಂಡರೆ ಅದುವೇ ಭೂಷಣವಾಗುತ್ತದೆ ಎಂದು ಹೇಳಿದರು.

ವಿಜಯಪುರದ ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕ ಮಲ್ಲನಗೌಡ ಬಿರಾದಾರ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಿದರು.


ಉದಯವಾಹಿನಿ ಚಿತ್ರ

## ನಾಲ್ಕೈದು ದಿನಗಳಿಂದ ಕುಡಿಯಲು ನೀರಿಲ್ಲಾ

• ಉದಯವಾಹಿನಿ ಮುದ್ದೇಬಿಹಾಳ

ತಾಲ್ಲೂಕಿನ ಚವನಭಾವಿ ಕ್ರಾಸ್ ಬಳಿ ಜಿವಿಪಿಆರ್ ಕಂಪನಿ ಮಾಡುತ್ತಿರುವ ಜಲದಾರೆ ಯೋಜನೆ ಕಾಮಗಾರಿ ಕಾರ್ಯದಲ್ಲಿ ನೀರಿನ ಪೈಪ್ ಲೈನ್ ಒಡೆದ ಪರಿಣಾಮ ಅಡವಿ ಸೋಮನಾಳ ಬಹು ಹಳ್ಳಿ ಕುಡಿಯುವ ನೀರಿನ ವ್ಯಾಪ್ತಿಯ ಚವನಭಾವಿ , ಅಡವಿ ಸೋಮನಾಳ, ಡೂಂಕಮಡು, ಕ್ಯಾತನಡೋಣಿ, ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗಿದೆ. ಈ ಕುರಿತು ಸಂಬಂಧಿಸಿದ ಕುಡಿಯುವ ನೀರು ಸರಬರಾಜು ಮಾಡುವ ಅಧಿಕಾರಿಗಳಾಗಲಿ ಪೈಪ್ ಲೈನ್ ಒಡೆದ ಜಿವಿಪಿಆರ್ ಕಂಪನಿಯವರಾಗಲಿ ಗ್ರಾಮಸ್ಥರು ಸಮಸ್ಯೆಗಳಿಗೆ ಕ್ಯಾರೆ ಮಾಡುತ್ತಿಲ್ಲಾ . ಇನ್ನೂ ಮೂಕಿಹಾಳದಿಂದ ಚವನಭಾವಿ ನಾಲತವಾಡ ರಸ್ತೆಯಲ್ಲಿ ಸಹ ಜಿವಿಪಿಆರ್ ಕಂಪನಿ ಮಾಡುತ್ತಿರುವ ಜಲಧಾರೆ ಕಾಮಗಾರಿಯಿಂದ ರಸ್ತೆ ಸಂಚಾರಕ್ಕೆ ಸಹ ಸಮಸ್ಯೆ ಉಂಟಾಗಿದೆ ಮಾತ್ರವಲ್ಲದೆ ಕಾಮಗಾರಿಗಾಗಿ ರಸ್ತೆ ಅಗೆದ ಪರಿಣಾಮ ಚವನಭಾವಿ ಕ್ರಾಸ್, ನಾಲತವಾಡ ತಾಳಿಕೋಟಿ ಮಾರ್ಗದ ಲೋಕೋಪಯೋಗಿ ಇಲಾಖೆ ನಿರ್ಮಿತ ರಸ್ತೆ ಸಂಪೂರ್ಣ ಹಾಳಾಗಿದೆ ,ಇದಕ್ಕೆ ಕಾರಣವಾದ ಜಿವಿಪಿಆರ್ ಕಂಪನಿ ವಿರುದ್ಧ ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ ಕೂಡಲೇ ಹಾಳಾದ ರಸ್ತೆ ಹಾಗೂ ಕುಡಿಯುವ ನೀರಿನ ಪೈಪ್ ಲೈನ್ ದುರಸ್ತಿ ಮಾಡದೆ ಇದ್ದರೆ ಕಂಪನಿ ವಿರುದ್ಧ ಉಗ್ರ ಹೋರಾಟ ಮಾಡುವುದಾಗಿ ಮಾಧ್ಯಮಗಳಿಗೆ ತಿಳಿಸಿದ್ದಾರೆ.


ಉದಯವಾಹಿನಿ ಚಿತ್ರ

• ಸುತ್ತಲಿನ ಕಳ್ಳಿಗುದ್ದಿ, ಮನ್ನಿಕೇರಿ, ರಡ್ಡೆರಟ್ಟಿ ಗ್ರಾಮಗಳನ್ನೊಳಗೊಂಡು ಪುರಸಭೆ ಮಾಡಬೇಕು ಎಂಬ ಬೇಡಿಕೆಗೆ ಬೆಲೆ ಇಲ್ಲ

# ಗ್ರಾಮ ಪಂಚಾಯಿತಿಯಾಗಿಯೇ ಉಳಿದ ಕೌಜಲಗಿ, ಹೋರಾಟಕ್ಕೆ ಬೆಲೆ ಕೊಡದ ಸರ್ಕಾರ

• ಉದಯವಾಹಿನಿ, ಕೌಜಲಗಿ

ಬೆಳಗಾವಿ ತಾಲ್ಲೂಕಿನ ಹಿರೇಬಾಗೇವಾಡಿ, ಹಿಂಡಲಗಾ ಮತ್ತು ಬೆನಕನಹಳ್ಳಿ ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿಯಾಗಿ ಮೇಲ್ದರ್ಜೆಗೇರಿಸಲಾಗಿದೆ. ಆದರೆ, ಗೋಕಾಕ ತಾಲ್ಲೂಕಿನ ದೊಡ್ಡ ಹೋಬಳಿ ಕೇಂದ್ರವಾದ ಕೌಜಲಗಿಯನ್ನು ಮತ್ತೆ ಕಡೆಗಣಿಸ ಲಾಗಿದೆ. ಸುತ್ತಲಿನ ಕಳ್ಳಿಗುದ್ದಿ, ಮನ್ನಿಕೇರಿ, ರಡ್ಡೆರಟ್ಟಿ ಗ್ರಾಮಗಳನ್ನೊಳಗೊಂಡು ಪುರಸಭೆ ಮಾಡಬೇಕು ಎಂಬ ಬೇಡಿಕೆಗೆ ಬೆಲೆ ಇಲ್ಲದಾಗಿದೆ.

ಈ ವಿಷಯ ಈಚೆಗೆ ವಿಧಾನಸಭೆಯಲ್ಲಿ ನಡೆದ ಚರ್ಚೆಯಲ್ಲಿ ಜಿಲ್ಲೆಯ ಮೂರು ಗ್ರಾಮ ಪಂಚಾಯಿತಿಗಳನ್ನು ಮೇಲ್ದರ್ಜೆಗೇರಿಸುವ ಸಂಬಂಧ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಪ್ರಯತ್ನ ಮಾಡಿದ್ದಾರೆ. ಆದರೆ, ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಅವರು ಕೌಜಲಗಿಯನ್ನೂ ಪರಿಗಣಿಸುವಂತೆ ಧ್ವನಿ ಎತ್ತಬೇಕಿತ್ತು ಎಂಬುದು ಜನರ ಅಂಬೋಣ. ಈ ಭಾಗದ ಪ್ರಭಾವಿ ನಾಯಕರಾದರೂ ಅವರು ಪ್ರಯತ್ನ ಮಾಡದಿರುವುದು ಬೇಸರ ತಂದಿದೆ ಎನ್ನುತ್ತಾರೆ ಜನ.

ಕೌಜಲಗಿ ತಾಲ್ಲೂಕು ಕೇಂದ್ರ ರಚನೆಗಾಗಿ ಸುಮಾರು 50 ವರ್ಷಗಳಿಂದ ಹೋರಾಡುತ್ತ ಬರಲಾಗಿದೆ. 1980ರ ಪೂರ್ವದಲ್ಲಿ ಸ್ಥಳೀಯ ಗ್ರಾಮ ಪಂಚಾಯಿತಿಯು ಪಟ್ಟಣ ಪಂಚಾಯಿತಿಯಾಗಿತ್ತು ಎಂದು ದಾಖಲೆಗಳು ತಿಳಿಸುತ್ತವೆ. 90ರ ದಶಕದಲ್ಲಿ ಮಂಡಲ ಪಂಚಾಯಿತಿಯಾಗಿ ರೂಪಗೊಂಡಿತು. ಅನಂತರ ಮತ್ತೆ ಗ್ರಾ.ಪಂ.ಯಾಗಿ ಸದ್ಯ 10 ವಾರ್ಡುಗಳ 29 ಸದಸ್ಯರನ್ನು ಹೊಂದಿದೆ.

**ಮತ್ತೊಮ್ಮೆ ತಪ್ಪಿದ ಅವಕಾಶ:** ಹಲವಾರು ವರ್ಷಗಳ ಹಿಂದೆ ಅರಬಾವಿ ವಿಧಾನಸಭಾ ಕ್ಷೇತ್ರದ ಕೆಲ ಗ್ರಾಮ ಪಂಚಾಯಿತಿಗಳು ಪಟ್ಟಣ ಪಂಚಾಯಿತಿಯಾಗಿ ಮೇಲ್ದರ್ಜೆಗೇರಿದವು. ಆ ಸಂದರ್ಭದಲ್ಲಿಯಾದರೂ ಕೌಜಲಗಿ ಗ್ರಾಮ ಪಂಚಾಯಿತಿಯು ಪಟ್ಟಣ ಪಂಚಾಯಿತಿಯಾಗಿ ಮೇಲ್ದರ್ಜೇಗೆರುತ್ತದೆ ಎಂದು ಸ್ಥಳೀಯ ನಾಗರಿಕರು ಅಂದುಕೊಂಡಿದ್ದರು. ಆದರೆ ಅವರ ನಂಬಿಕೆ ಹುಸಿಯಾಯಿತು. ಕೌಜಲಗಿ ಗ್ರಾಮ ಪಂಚಾಯಿತಿಯು ಪಟ್ಟಣ ಪಂಚಾಯಿತಿಯಾಗಿಯೋ ಅಥವಾ ಪುರಸಭೆಯಾಗಿ ಮೇಲ್ದರ್ಜೆಗೇರದಿರುವುದು ಕೌಜಲಗಿ ತಾಲ್ಲೂಕು ಕೇಂದ್ರವಾಗದಿರಲು ಪ್ರಮುಖ ಕಾರಣವಾಗಿದೆ. ಗ್ರಾಮ ಪಂಚಾಯಿತಿಯು 2011ರ ಜನಗಣತಿಯ ಪ್ರಕಾರ 11,472 ಜನಸಂಖ್ಯೆ ಹೊಂದಿದೆ. ಪುರುಷರು 5,825, ಮಹಿಳೆಯರು 5,647 ಇದ್ದಾರೆ. ಈಗ 15 ವರ್ಷಗಳ ನಂತರದಲ್ಲಿ ಕೌಜಲಗಿ ಜನಸಂಖ್ಯೆ ತೀವ್ರವಾಗಿ ಬೆಳೆದಿದೆ. ಈಗ ಸುಮಾರು 10,000 ಮೇಲ್ಪಟ್ಟ ಮತದಾರರನ್ನೇ ಹೊಂದಿರುವ ಕೌಜಲಗಿಯು 2025ರ ಹೊತ್ತಿನಲ್ಲಿ ಸುಮಾರು 18,000 ಮೇಲ್ಪಟ್ಟ ಜನಸಂಖ್ಯೆಯನ್ನು ಹೊಂದಿದೆ. ಪಟ್ಟಣವು ಭೌಗೋಳಿಕವಾಗಿ 58,403 ಹೆಕ್ಟೇರ್ ಭೂಮಿಯನ್ನು ಹೊಂದಿದೆ.

10 ಹೆಕ್ಟೇರ್ ಭೂಮಿಯು ರಕ್ಷಿತಾರಣ್ಯವಿದೆ. ಪಟ್ಟಣದಲ್ಲಿ ಉಪತಹಶೀಲ್ದಾರ್ ಕಾರ್ಯಾಲಯವಿದೆ. ಜಿ.ಆರ್.ಬಿ.ಸಿ. ಉಪವಿಭಾಗೀಯ ಕಚೇರಿ, ರೈತ ಸಂಪರ್ಕ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ಸರ್ಕಾರಿ ಪದವಿಪೂರ್ವ ಕಾಲೇಜು, ಹತ್ತಾರು ಖಾಸಗಿ, ಅನುದಾನಿತ ಅನುದಾನ ರಹಿತ ಶಾಲೆ- ಪ್ರೌಢಶಾಲೆಗಳಿವೆ. ರಬಕವಿ ಜಾಂಬೋಟಿ ರಾಜ್ಯ ಹೆದ್ದಾರಿ-54, ಗೋಕಾಕ ಫಾಲ್ಸ್-ಬದಾಮಿ ರಾಜ್ಯ ಹೆದ್ದಾರಿ-134 ಇವುಗಳ ಸಂಗಮ ಸ್ಥಾನವಾಗಿದೆ. ಖಾಸಗಿ ಆರೋಗ್ಯ ಕ್ಲಿನಿಕ್‌ಗಳು, ಸಾಮಿಲ್‌ಗಳು, ಹೋಟೆಲ್, ಜವಳಿ, ಕಿರಾಣಿ, ಮೆಡಿಕಲ್ ಅಂಗಡಿಗಳಿವೆ. ಬಸ್ ನಿಲ್ದಾಣವಿದೆ.

ಸರ್ಕಾರಿ ವಾಹನಗಳ ಜೊತೆ ಖಾಸಗಿ ವಾಹನಗಳ ಸಾರಿಗೆ ಸಂಪರ್ಕವಿದೆ. ಪಶು ಆಸ್ಪತ್ರೆ ಇದೆ. ಶುಕ್ರವಾರ ವಾರದ ಸಂತೆಯು 500 ಮೀಟರ್‌ನಿಂದ 1 ಕಿ.ಮೀ ವ್ಯಾಪ್ತಿಯಲ್ಲಿ ವಿಸ್ತೀರ್ಣಗೊಂಡು ಭರ್ಜರಿಯಾಗಿ ನಡೆಯುತ್ತಿದೆ. ಈ ಎಲ್ಲಾ ಅನುಕೂಲತೆಗಳನ್ನು ಹೊಂದಿದ ಕೌಜಲಗಿಯು ಮೇಲ್ದರ್ಜೆಗೇರಲು ಎಲ್ಲಾ ಅರ್ಹತೆಗಳನ್ನು ಪಡೆದಿದೆ.

> ಮುಂಬರುವ ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ನಮ್ಮ ಪಂಚಾಯಿತಿಯನ್ನು ಮೇಲ್ದರ್ಜೆಗೇರಿಸಲು ನಿರ್ಣಯ ಕೈಗೊಳ್ಳಲು ಒತ್ತಾಯಿಸುತ್ತೇನೆ. ಈ ಹೋರಾಟ ನಿರಂತರವಾಗಿ ಮುಂದುವರಿಯಲಿದೆ.
>
> -ಹೊಳೆಪ್ಪ ಲೋಕನ್ನವರ, ವಿಪಕ್ಷ ಮುಖಂಡ, ಕೌಜಲಗಿ, ಗ್ರಾ.ಪಂ


ಉದಯವಾಹಿನಿ ಚಿತ್ರ

> ಕೌಜಲಗಿಯನ್ನು ಪಟ್ಟಣ ಪಂಚಾಯಿತಿಯಾಗಿಸಲು ಎಂಟು ವರ್ಷಗಳ ಹಿಂದೆಯೇ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿತ್ತು. ಕಾರಣಾಂತರಗಳಿಂದ ಬಾಕಿ ಉಳಿದಿದೆ. ಈಗ ಮತ್ತೆ ಸರ್ಕಾರಕ್ಕೆ ಗ್ರಾಮ ಪಂಚಾಯಿತಿಯಿಂದಲೇ ಪ್ರಸ್ತಾವ ಸಲ್ಲಿಸುತ್ತೇವೆ
>
> -ಅಶೋಕ ಉದ್ದಪ್ಪನವರ, ಅಧ್ಯಕ್ಷ, ಗ್ರಾಮ ಪಂಚಾಯಿತಿ, ಕೌಜಲಗಿ

**ನಿಯಮಗಳೇನು?**

**ಯಾವುದೇ ಗ್ರಾಮ ಪಂಚಾಯಿತಿಯು ಮೇಲ್ದರ್ಜೆಗೇರಲು ಕನಿಷ್ಠ 12 ಸಾವಿರ ಜನಸಂಖ್ಯೆ ಹೊಂದಿರ ಬೇಕೆಂಬುದು ಸರ್ಕಾರದ ನಿಯಮ. ಈಗ 15 ವರ್ಷಗಳಲ್ಲಿ ಸುಮಾರು 18 ಸಾವಿರದಷ್ಟು ಜನಸಂಖ್ಯೆಯನ್ನು ಕೌಜಲಗಿ ಪಟ್ಟಣ ಹೊಂದಿದೆ. 2011ರ ಜನಗಣತಿ ಪ್ರಕಾರ ಸುತ್ತಮುತ್ತಲಿನ ಗ್ರಾಮಗಳಾದ ಕಳ್ಳಿಗುದ್ದಿಯಲ್ಲಿ 1,113, ಮನ್ನಿಕೇರಿ- 2,086, ರಡ್ಡೆರಟ್ಟಿ-1,929 ಪ್ರಸ್ತುತ ಮೂರು ಗ್ರಾಮಗಳ ಸುಮಾರು 11,000 ಜನಸಂಖ್ಯೆ ಹೊಂದಿವೆ. ಈ ಗ್ರಾಮಗಳನ್ನು ಒಳಗೊಂಡು ಕೌಜಲಗಿಯನ್ನು ನೇರವಾಗಿ ಪುರಸಭೆಯನ್ನಾಗಿಸುವ ಅವಕಾಶಗಳಿವೆ. ಇದಕ್ಕೆ ಶಾಸಕರು, ಜಿಲ್ಲಾ ಉಸ್ತುವಾರಿ ಸಚಿವರು, ಸ್ಥಳೀಯ ಪ್ರಯತ್ನ ಮಾಡಬೇಕು ಎಂಬುದು ಜನರ ಆಗ್ರಹ.**


# ವ್ಲಾಡಿಮಿರ್ ಪುಟಿನ್ ಹೆಲಿಕಾಪ್ಟರ್ ಮೇಲೆ ಉಕ್ರೇನ್ ಡ್ರೋನ್ ದಾಳಿ

## ಅಧ್ಯಕ್ಷರು ಕೂದಲೆಳೆ ಅಂತರದಲ್ಲಿ ಪಾರಾದರು ಎಂದ ರಷ್ಯನ್ ಕಮಾಂಡರ್

**ಮಾಸ್ಕೋ:** ಉಕ್ರೇನ್ ಸರ್ವನಾಶಕ್ಕೆ ತೊಡೆತಟ್ಟಿ ನಿಂತಿರುವ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್, ಇದಕ್ಕಾಗಿ ತಮ್ಮ ಜೀವಕ್ಕೆ ಬಂದೊದಗಬಹುದಾದ ಅಪಾಯಗಳನ್ನೂ ಎದುರಿಸಲು ಸನ್ನದ್ಧರಾಗಿದ್ದಾರೆ. ಇದಕ್ಕೆ ಇತ್ತೀಚಿಗೆ ತಮ್ಮ ಹೆಲಿಕಾಪ್ಟರ್ ಮೇಲೆ ಉಕ್ರೇನ್ ನಡೆಸಿದ ಡ್ರೋನ್ ದಾಳಿ ಪುಷ್ಠಿ ಒದಗಿಸಿದೆ.

ಹೌದು, ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರನ್ನು ಹತ್ಯೆ ಮಾಡಲು, ಅವರ ಹೆಲಿಕಾಪ್ಟರ್ ಮೇಲೆ ಉಕ್ರೇನ್ ಡ್ರೋನ್ ದಾಳಿ ನಡೆಸಿತ್ತು ಎಂದು ರಷ್ಯಾದ ಓರ್ವ ಹಿರಿಯ ಮಿಲಿಟರಿ ಕಮಾಂಡರ್ ಆರೋಪಿಸಿದ್ದಾರೆ. ಈ ದಾಳಿಯಲ್ಲಿ ಪುಟಿನ್ ಕೂದಲೆಳೆ ಅಂತರದಲ್ಲಿ ಪಾರಾಗಿದ್ದಾರೆ ಎಂದೂ ಈ ಕಮಾಂಡರ್ ಹೇಳಿದ್ದಾರೆ. ಉಕ್ರೇನ್ ರಾಜಧಾನಿ ಕೈವ್ ನಗರದ ಮೇಲೆ ರಷ್ಯಾ ವೈಮಾನಿಕ ದಾಳಿ ಬಳಿಕ, ಉಕ್ರೇನ್ ಕೂಡ ರಷ್ಯಾದ ನಗರ ಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಿದೆ ಎನ್ನಲಾಗಿದೆ. ವ್ಲಾಡಿಮಿರ್ ಪುಟಿನ್ ಅವರ ಹೆಲಿ ಕಾಪ್ಟರ್ ಮೇಲೆ ಉಕ್ರೇನ್ ಡ್ರೋನ್ ದಾಳಿಯ ಕುರಿತು ಮಾಹಿತಿ ನೀಡಿ ರುವ ಮಿಲಿಟರಿ ಕಮಾಂಡರ್ ಯೂರಿ ಕೋಟೆನೋಕ್, ಮಾಸ್ಕೋ ಬಳಿಯ ಕೈಗಾರಿಕಾ ವಲಯಕ್ಕೆ ಪುಟಿನ್ ಭೇಟಿ ನೀಡಿದ್ದಾಗ, ಉಕ್ರೇನ್ ಈ ಪ್ರದೇಶ ವನ್ನು ಗುರಿಯಾಗಿಸಿಕೊಂಡು Tu-141 ಸ್ಟ್ರಿಝ್ ಡ್ರೋನ್ ದಾಳಿ ನಡೆಸಿತ್ತು ಎಂದು ಹೇಳಿದ್ದಾರೆ. ಆದರೆ ಈ ಡ್ರೋನ್ ತನ್ನ ಗುರಿ ತಲುಪುವ ಮೊದಲೇ, ಮಾಸ್ಕೋದಿಂದ ಸುಮಾರು 110 ಕಿ.ಮೀ ದೂರದಲ್ಲಿರುವ ಕೊಲೊಮ್ನಾ ಜಿಲ್ಲೆಯ ಅನಿಲ ವಿತರಣಾ ಕೇಂದ್ರದ ಬಳಿ ಪತನ ಗೊಂಡಿದೆ ಎಂದು ಕಮಾಂಡರ್‌ಯೂರಿ ಕೋಟೆನೋಕ್ ತಿಳಿಸಿದ್ದಾರೆ. ಅಲ್ಲದೇ ಈ ದಾಳಿಯಲ್ಲಿ ಯಾವುದೇ ಪ್ರಾಣಹಾನಿಯಾಗಿಲ್ಲ ಎಂದೂ ಅವರು ಸ್ಪಷ್ಟಪಡಿಸಿದ್ದಾರೆ. ಆದರೆ ಪುಟಿನ್ ಮೇಲೆ ಹತ್ಯಾ ಯತ್ನ ನಡೆದಿರುವ ಬಗ್ಗೆ ಕ್ರೆಮ್ಲಿನ್, ಕೈವ್‌ನಿಂದ ಯಾವುದೇ ಅಧಿಕೃತ ದೃಢೀಕರಣ ಬಂದಿಲ್ಲ. ಪುಟಿನ್ ಅವರ ವಕ್ತಾರ ಡಿಮಿಟ್ರಿ ಪೆಸ್ಕೋವ್ ಅವರು ಈ ಘಟನೆಯ ಬಗ್ಗೆ ತಮಗೆ ತಿಳಿದಿಲ್ಲವೆಂದೂ, ಅಧ್ಯಕ್ಷರ ವೇಳಾಪಟ್ಟಿಯಲ್ಲಿ ಯಾವುದೇ ಬದಲಾವಣೆಗಳಿಲ್ಲವೆಂದೂ ಸುದ್ದಿಗಾರರಿಗೆ ತಿಳಿಸಿದ್ದಾರೆ.

**ದಾಳಿ ಮಾಡುವ ವಿಶಾಲ ಪ್ರಯತ್ನ**



ರಷ್ಯಾದ ವಿವಿಧ ಭಾಗಗಳಲ್ಲಿ ಉಕ್ರೇನ್ ಭಾರೀ ಪ್ರಮಾಣದಲ್ಲಿ ಡ್ರೋನ್ ದಾಳಿಗಳನ್ನು ನಡೆಸಿದೆ ಎಂಬ ವರದಿಗಳು ಬಂದಿರುವ ಬೆನ್ನಲ್ಲೇ, ಉಕ್ರೇನ್ ಪುಟಿನ್ ಅವರ ಹೆಲಿಕಾಪ್ಟರ್‌ರನ್ನು ಗುರಿ ಯಾಗಿಸಿಕೊಂಡು ಡ್ರೋನ್ ದಾಳಿ ನಡೆಸಿದೆ ಎಂಬ ರಷ್ಯನ್ ಮಿಲಿಟರಿ ಕಮಾಂಡರ್ ಹೇಳಿಕೆ ಇದೀಗ ಜಾಗತಿಕ ಮಟ್ಟದಲ್ಲಿ ಗಮನ ಸೆಳೆದಿದೆ. ದಕ್ಷಿಣ ರಷ್ಯಾದಲ್ಲಿ ಎರಡು ಉಕ್ರೇನಿಯನ್ ಡ್ರೋನ್‌ಗಳನ್ನು ಹೊಡೆ ದುರುಳಿಸಿರುವುದಾಗಿ ಎಂದು ಹೇಳಿಕೊಂಡಿದೆ. ರಷ್ಯಾ ನಾಗರಿಕ ಮೂಲಸೌಕರ್ಯಗಳನ್ನು ಗುರಿಯಾಗಿಸಿಕೊಂಡು, ಉಕ್ರೇನ್ ಈ ದಾಳಿಗಳನ್ನು ನಡೆಸಿದೆ.

Tu-141 ಸ್ಟ್ರಿಝ್ ಸೋವಿಯತ್ ಕಾಲದ ಪತ್ತೆದಾರಿ ಡ್ರೋನ್ ಆಗಿದ್ದು, ಉಕ್ರೇನ್ ಇದನ್ನು ಅಟ್ಯಾಕ್ ಡ್ರೋನ್ ಆಗಿ ಮರುಬಳಕೆ ಮಾಡಿಕೊಳ್ಳುತ್ತಿದೆ ಎನ್ನಲಾಗಿದೆ. ಆದರೆ ರಷ್ಯಾದ ನಗರಗಳನ್ನು ಗುರಿಯಾಗಿಸಿಕೊಂಡು ಡ್ರೋನ್ ದಾಳಿ ನಡೆಸಿರುವ ಕುರಿತು, ಉಕ್ರೇನ್ ಇದುವರೆಗೂ ಯಾವುದೇ ಅಧಿಕೃತ ಹೇಳಿಕೆ ನೀಡಿಲ್ಲ. ಕೈವ್ ನಗರದ ಮೇಲಿನ ದಾಳಿಯನ್ನು ಖಂಡಿಸಿರುವ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ವ್ಲಾಡಿಮಿರ್ ಪುಟಿನ್ ಅವರನ್ನು ಸಂಪೂರ್ಣ ಹುಚ್ಚ ಎಂದು ಟೀಕಿಸಿದ್ದಾರೆ. ಒಟ್ಟಿನಲ್ಲಿ ಉಕ್ರೇನ್ ನಡೆಸಿದೆ ಎನ್ನಲಾದ ಈ ಡ್ರೋನ್ ದಾಳಿಯು ನಿಜವಾಗಿಯೂ ಪುಟಿನ್ ಅವರನ್ನು ಗುರಿಯಾಗಿಸಿಕೊಂಡಿತ್ತೇ ಅಥವಾ ಕೇವಲ ಆಯಕಟ್ಟಿನ ಮೂಲಸೌಕರ್ಯಗಳ ಮೇಲೆ ದಾಳಿ ಮಾಡುವ ವಿಶಾಲ ಪ್ರಯತ್ನವಾಗಿತ್ತೇ ಎಂಬ ಬಗ್ಗೆ ಊಹಾಪೋಹಗಳು ಹರಡಿವೆ.

**ಅಧಿಕೃತ ಹೇಳಿಕೆಯನ್ನು ಬಿಡುಗಡೆ**

**ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರ ಹೆಲಿಕಾಪ್ಟರ್‌ನ್ನು ಗುರಿಯಾಗಿಸಿಕೊಂಡು ಉಕ್ರೇನ್ ಡ್ರೋನ್ ದಾಳಿ ನಡೆಸಿದ್ದು, ಈ ದಾಳಿಯಲ್ಲಿ ಪುಟಿನ್ ಅವರು ಕೂದಲೆಳೆ ಅಂತರದಲ್ಲಿ ಪಾರಾಗಿದ್ದಾರೆ ಎಂದು ರಷ್ಯನ್ ಮಿಲಿಟರಿ ಕಮಾಂಡರ್ ಯೂರಿ ಕೋಟೆನೊಕ್ ಹೇಳಿದ್ದಾರೆ. ಆದರೆ ಪುಟಿನ್ ಅವರ ಹೆಲಿಕಾಪ್ಟರ್ ಮೇಲೆ ಡ್ರೋನ್ ದಾಳಿ ನಡೆದಿರುವುದನ್ನು ಕ್ರೆಮ್ಲಿನ್ ಆಗಲಿ, ಕೈವ್ ಆಗಲಿ ಯಾವುದೇ ಅಧಿಕೃತ ಹೇಳಿಕೆಯನ್ನು ಬಿಡುಗಡೆ ಮಾಡಿಲ್ಲ. ಹಾಗಿದ್ದರೆ ಪುಟಿನ್ ಹೆಲಿಕಾಪ್ಟರ್ ಮೇಲೆ ದಾಳಿ ನಡೆದಿರುವುದು ನಿಜವೇ?**

- ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಹೆಲಿಕಾಪ್ಟರ್ ಮೇಲೆ ಉಕ್ರೇನ್ ಡ್ರೋನ್ ದಾಳಿ ಮಾಡಿದ್ದು ನಿಜವೇ?
- ಮಾಸ್ಕೋ ಬಳಿಯ ಕೈಗಾರಿಕಾ ವಲಯದಲ್ಲಿ ಪುಟಿನ್ ಹೆಲಿಕಾಪ್ಟರ್ ಗುರಿಯಾಗಿಸಿ ಉಕ್ರೇನ್ ಡ್ರೋನ್ ದಾಳಿ?
- ಪುಟಿನ್ ಹೆಲಿಕಾಪ್ಟರ್ ಮೇಲೆ ದಾಳಿ ನಡೆದಿರುವುದು ನಿಜ ಎಂದ ರಷ್ಯನ್ ಮಿಲಿಟರಿ ಕಮಾಂಡರ್ ಯೂರಿ ಕೋಟೆನೊಕ್

# ಭಯೋತ್ಪಾದನೆಯ ವಿರುದ್ಧ ಭಾರತದ ಹೋರಾಟಕ್ಕೆ ಗಯಾನಾ ಬೆಂಬಲ

**ಜಾರ್ಜ್‌ಟೌನ್:** ಗಯಾನಾದ ಉಪಾಧ್ಯಕ್ಷ ಭರತ್ ಜಗದೇವ್, ಪ್ರಧಾನಿ ಮಾರ್ಕ್ ಫಿಲಿಪ್ಸ್ ಅವರು ಭಯೋತ್ಪಾದನೆಯ ವಿರುದ್ಧ ಭಾರತದ ಹೋರಾಟಕ್ಕೆ ತಮ್ಮ ದೇಶದ ಅಚಲ ಬೆಂಬಲವನ್ನು ಪುನರುಚ್ಚರಿಸಿದ್ದಾರೆ. ಕಾಂಗ್ರೆಸ್ ಸಂಸದ ಶಶಿ ತರೂರ್ ನೇತೃತ್ವದ ಸರ್ವಪಕ್ಷ ಸಂಸದೀಯ ನಿಯೋಗವು ಈ ವಿಷಯದ ಬಗ್ಗೆ ಭಾರತದ ನಿಲು ವನ್ನು ವಿವರಿಸಲು ಅವರನ್ನು ಭೇಟಿ ಮಾಡಿದೆ.



ಭಾರತದ ನಿಯೋಗವು ನಿನ್ನೆ ಇಲ್ಲಿಗೆ ಆಗಮಿಸಿತು. ನಿಯೋಗವು ಗಯಾನಾದ ಉಪಾಧ್ಯಕ್ಷ ಡಾ. ಭರತ್ ಜಗದೇವ್ ಅವರನ್ನು ಭೇಟಿ ಮಾಡಿತು. ನಿಯೋಗವು ಪಹಲ್ಗಾಮ್, ಆಪರೇಷನ್ ಸಿಂದೂರ್, ಸಿಂಧೂ ಜಲ ಒಪ್ಪಂದದ ಕುರಿತು ಭಾರತದ ನಿಲುವನ್ನು ವಿವರಿಸಿತು. ಇತ್ತೀಚಿನ ಘಟನೆಗಳ ಹಿನ್ನೆಲೆಯಲ್ಲಿ ಭಾರತದ ಕಳವಳಗಳ ಬಗ್ಗೆ ಅವರ ಬಲವಾದ ಸಹಾನುಭೂತಿ, ತಿಳುವಳಿಕೆಯ ಅಭಿವ್ಯಕ್ತಿಯ ಜೊತೆಗೆ, ತೈಲ, ಅನಿಲದ ಆವಿಷ್ಕಾರದ ನಂತರದ ಗಯಾನಾದ ದಾಖಲೆಯ 30% ವಾರ್ಷಿಕ ಆರ್ಥಿಕ ಬೆಳವಣಿಗೆ ಮತ್ತು ಅಭಿವೃದ್ಧಿ ಯೋಜನೆಗಳಿಗೆ ಸಂಬಂಧಿಸಿದ ಹಲವಾರು ವಿಷಯಗಳ ಬಗ್ಗೆಯೂ ನಮ್ಮ ಸಂಭಾಷಣೆ ನಡೆಯಿತು ಎಂದು ಅವರು ಹೇಳಿದರು. ಕೃಷಿಯಿಂದ ದೂರಸಂಪರ್ಕ, ಬ್ಯಾಂಕಿಂಗ್ ಮತ್ತು ಹೆದ್ದಾರಿ ಅಭಿವೃದ್ಧಿಯವರೆಗೆ ಭಾರತೀಯ ಕಂಪನಿಗಳಿಗೆ ಹೆಚ್ಚಿನ ಸಂಖ್ಯೆಯ ಅವಕಾಶಗಳನ್ನು ಉಲ್ಲೇಖಿಸಲಾಯಿತು.

ಗಯಾನಾ ಕೂಡ ಕಾರ್ಮಿಕರ ಕೊರತೆಯನ್ನು ಅನುಭವಿಸುತ್ತಿದೆ ಮತ್ತು ಭಾರತೀಯ ಕಾರ್ಮಿಕರನ್ನು ಸಹ ಸ್ವಾಗತಿಸುತ್ತದೆ ಎಂದು ತರೂರ್ ಹೇಳಿದರು. ಗಯಾನಾದ 59 ನೇ ಸ್ವಾತಂತ್ರ್ಯ ದಿನಾಚರಣೆಯ ಮುನ್ನಾದಿನದಂದು ಬರ್ಬೈಸ್‌ನಲ್ಲಿ ಭಾರತೀಯ ಸರ್ವಪಕ್ಷ ಸಂಸದೀಯ ನಿಯೋಗವನ್ನು ಪ್ರಧಾನಿ ಫಿಲಿಪ್ಸ್ ಆಯೋಜಿಸಿದ್ದರು. ಚರ್ಚೆಯು ಭಾರತ-ಗಯಾನಾ ಸಹಕಾರಕ್ಕೆ ಸಂಬಂಧಿಸಿದ ವ್ಯಾಪಕ ಶ್ರೇಣಿಯ ವಿಷಯಗಳನ್ನು ಒಳಗೊಂಡಿತ್ತು.

**ಭಾರತದ ಭಯೋತ್ಪಾದನೆಗೆ ಶೂನ್ಯ ಸಹಿ ಷ್ಣುತೆಯ ದೃಢ ನೀತಿಯನ್ನು ಒತ್ತಿಹೇಳಿತು ಎಂದು ಜಾರ್ಜ್ ಟೌನ್‌ನಲ್ಲಿರುವ ಭಾರತದ ಹೈಕಮಿಷನ್ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದೆ. ಗೌರವಾನ್ವಿತ ಉಪಾಧ್ಯಕ್ಷರು ಭಯೋತ್ಪಾದನೆಯ ವಿರುದ್ಧ ಭಾರತದ ಹೋರಾಟಕ್ಕೆ ಗಯಾನಾದ ಅಚಲ ಬೆಂಬಲವನ್ನು ಪುನರುಚ್ಚರಿಸಿದರು, ಎಂದು ಅದು ಹೇಳಿದೆ. ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ ತರೂರ್ ಅವರು ನಮ್ಮ ನಿಯೋಗವು ಅಧ್ಯಕ್ಷರ ಅರಮನೆಯಲ್ಲಿ ಜಗದೇವ್ ಅವರೊಂದಿಗೆ ಅತ್ಯುತ್ತಮ ಸಭೆ ನಡೆಸಿದೆ ಎಂದು ಹೇಳಿದರು.**

# ಮತ್ತೆ ಜಗತ್ತಿನ ಮುಂದೆ ಬೆತ್ತಲಾದ 'ಪಾಪಿ'ಸ್ತಾನ

**ಇಸ್ಲಾಮಾಬಾದ್:** ಭಾರತದ ವಿರುದ್ಧ ಗೊಗರೆದು ಕದನ ವಿರಾಮ ಘೋಷಿಸಿಕೊಂಡಿರುವ ಪಾಕಿಸ್ತಾನ ಮತ್ತೆ ತನ್ನ ನರಿಬುದ್ಧಿ ಪ್ರದರ್ಶಿಸಿದೆ. ಭಾರತದ ವಿರುದ್ಧದ ಹೋರಾಟದಲ್ಲಿ ನಾವು ಗೆದ್ದಿದ್ದೇವೆ ಎಂಬ ಸಂಭ್ರಮಾಚರಣೆ ನಡೆಸಿರುವುದು ಮಾತ್ರವಲ್ಲದೆ, ಪಾಕ್ ಪ್ರಧಾನಿ ಶಹಬಾಜ್ ಷರೀಫ್ ಅವರು ಸೇನಾ ಮುಖ್ಯಸ್ಥ ಅಸಿಮ್ ಮುನೀರ್‌ಗೆ ಬೆಂಕಿ ಉಗುಳುತ್ತಿರುವ ರಾಕೆಟ್‌ಗಳ ಫೋಟೋ ಗಿಫ್ಟ್ ನೀಡಿರುವುದು ವಿವಾದಕ್ಕೆ ಕಾರಣವಾಗಿದೆ. ಪಾಕಿಸ್ತಾನದ ಅತ್ಯುನ್ನತ ಮಿಲಿಟರಿ ಶ್ರೇಣಿ ಫೀಲ್ಡ್ ಮಾರ್ಷಲ್ ಹುದ್ದೆಗೆ ಬಡ್ತಿ ಪಡೆದ ಹಿನ್ನೆಲೆಯಲ್ಲಿ ಅಸಿಮ್ ಮುನೀರ್‌ಪಾಕಿಸ್ತಾನದ ರಾಜಕಾರಣಿಗಳಿಗಾಗಿ ಔತಣಕೂಟವನ್ನು ಆಯೋಜಿಸಿದ್ದರು.

ಈ ವೇಳೆ ಶಹಬಾಜ್ ಷರೀಫ್ ದೀರ್ಘ ವ್ಯಾಪ್ತಿಯ ರಾಕೆಟ್ ಲಾಂಚರ್‌ನಿಂದ ಕ್ಷಿಪಣಿ ಚಿಮ್ಮುತ್ತಿರುವ ಫೋಟೋವನ್ನು ಗಿಫ್ಟ್ ನೀಡಿದ್ದರು. ಶಹಬಾಜ್ ಷರೀಫ್ ಗಿಫ್ಟ್ ನೀಡುತ್ತಿರುವ ಫೋಟೋವನ್ನು ಪಾಕಿಸ್ತಾನ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿ ಕೊಂಡಿತ್ತು. ಈ ಫೋಟೋ ಹಂಚಿ ಕೊಂಡ ಬೆನ್ನಲ್ಲೇ ನೆಟ್ಟಿಗರು ಈ ಫೋಟೋದ ಸತ್ಯಾಸತ್ಯತೆ ಪರಿಶೀಲನೆ ಇಳಿದಾಗ



ಚೀನಾ ಸೇನೆಯ ಫೋಟೋ ಎನ್ನುವುದು ದೃಢಪಟ್ಟಿದೆ. 2017ರಲ್ಲಿ ಚೀನಾ ಪರೀಕ್ಷೆ ಮಾಡಿದ್ದ ಫೋಟೋ ಎಡಿಟ್ ಮಾಡಿ ಗಿಫ್ಟ್ ನೀಡಿರುವ ವಿಚಾರ ಬೆಳಕಿಗೆ ಬಂದಿದೆ.

ಈ ವಿಚಾರ ಬೆಳಕಿಗೆ ಬಂದ ಬೆನ್ನಲ್ಲೇ ನೆಟಿಗರು ಪಾಕಿಸ್ತಾನವನ್ನು ಫುಲ್ ಟ್ರೋಲ್ ಮಾಡಲು ಆರಂಭಿಸಿದ್ದಾರೆ. ವಿಜಯೋತ್ಸವ ಆಚರಿಸಲು ಪಾಕಿಸ್ತಾನಕ್ಕೆಯಾವುದೇ ಫೋಟೋ ಸಿಕ್ಕಿಲ್ಲ. ಈ ಕಾರಣಕ್ಕೆ ಚೀನಾ ಸೇನೆಯ ಫೋಟೋವನ್ನು ಎಡಿಟ್ ಮಾಡಿ ಗಿಫ್ಟ್ ನೀಡಿದ್ದಾರೆ ಎಂದು ನೆಟ್ಟಿಗರು ಕಮೆಂಟ್ ಮಾಡಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಈಗ ಈ ಫೋಟೋ ಭಾರಿ ವೈರಲ್ ಆಗಿದೆ.

# ಲತೇಹಾರ್ ಜಿಲ್ಲೆಯಲ್ಲಿ ಗುಂಡಿನ ಚಕಮಕಿ

**ಲತೇಹಾರ್:** ಜಾರ್ಖಂಡ್‌ನ ಲತೇಹಾರ್ ಜಿಲ್ಲೆಯಲ್ಲಿ ಸೋಮವಾರ ಭದ್ರತಾ ಪಡೆಗಳೊಂದಿಗೆ ನಡೆದ ಗುಂಡಿನ ಚಕಮಕಿಯಲ್ಲಿ ತನ್ನ ತಲೆಗೆ 5 ಲಕ್ಷ ರೂ. ಬಹುಮಾನ ಹೊಂದಿದ್ದ ನಿಷೇಧಿತ ಸಿಪಿಐ ಸದಸ್ಯನೊಬ್ಬ ಸಾವನ್ನಪ್ಪಿದ್ದಾನೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಕಾರ್ಯಾಚರಣೆಯ ಸಮಯದಲ್ಲಿ ಮತ್ತೊಬ್ಬ ಕೆಂಪು ಬಂಡುಕೋರನನ್ನು ಬಂಧಿಸಲಾಗಿದೆ ಎಂದು ಅವರು ಹೇಳಿದರು. ಮೌಹಾದಂಡ್ ಪೊಲೀಸ್ ಠಾಣೆ ವ್ಯಾಪ್ತಿಯ ದೌನಾದಲ್ಲಿನ ಕಾಡಿನಲ್ಲಿ ಭದ್ರತಾ ಪಡೆಗಳು ಮತ್ತು ಮಾವೋವಾದಿಗಳ ನಡುವೆ ಗುಂಡಿನ ಚಕಮಕಿ ನಡೆದಿದೆ ಎಂದು ಅವರು ಹೇಳಿದರು. ಮನೀಶ್ ಯಾದವ್ ಹತನಾದ ಕೆಂಪು ಉಗ್ರನಾಗಿದ್ದು ಈತನ ತಲೆಗೆ 5 ಲಕ್ಷ ರೂ. ಬಹುಮಾನ ಘೋಷಿಸಲಾಗಿತ್ತು. ಮತ್ತೊಬ್ಬ ಮಾವೋವಾದಿ ಕುಂದನ್ ಖೇರ್ವಾರ್ ಎಂಬಾತನನ್ನು ಬಂಧಿಸಲಾಗಿದೆ ಎಂದು ಪಲಮು ಡಿಐಜಿ ವೈಎಸ್ ರಮೇಶ್ ತಿಳಿಸಿದ್ದಾರೆ.

**ಮೋಸ್ಟ್ ವಾಂಟೆಡ್ ನಕ್ಸಲನ ಹತ್ಯೆ**


**ಜಿಲ್ಲೆಯಲ್ಲಿ ಭದ್ರತಾ ಪಡೆಗಳು ನಡೆಸಿದ ನಕ್ಸಲ್ ವಿರೋಧಿ ಕಾರ್ಯಾಚರಣೆಯಲ್ಲಿ ಜೆಜೆಎಂಪಿ ಮುಖ್ಯಸ್ಥ ಪಪ್ಪು ಲೋಹ್ರಾ ಸೇರಿದಂತೆ ಇಬ್ಬರು ಮಾವೋವಾದಿಗಳು ಸಾವನ್ನಪ್ಪಿದರು. ಲೊಹರ್ದಾಗ, ಗುಮ್ಲಾ, ಛತ್ರ, ಪಲಮು ಮತ್ತು ಲತೇಹರ್ ನಂತಹ ಹಲವಾರು ಜಿಲ್ಲೆಗಳಲ್ಲಿ ಕೊಲೆ, ಸುಲಿಗೆ, ಬೆಂಕಿ ಹಚ್ಚುವಿಕೆ ಸೇರಿದಂತೆ 98 ಪ್ರಕರಣಗಳಲ್ಲಿ ಲೋಹ್ರಾ ಬೇಕಾಗಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.**

# ರಷ್ಯಾ ಅಧ್ಯಕ್ಷ ಪುಟಿನ್‌ಗೆ ಹುಚ್ಚು ಹಿಡಿದಿರಬಹುದು: ಟ್ರಂಪ್

**ವಾಷಿಂಗ್ಟನ್:** ರಷ್ಯಾ ಅಧ್ಯಕ್ಷ ಪುಟಿನ್‌ಗೆ ಹುಚ್ಚು ಹಿಡಿದಿದ್ಯಾ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪ್ರಶ್ನಿಸಿದ್ದಾರೆ. ಉಕ್ರೇನ್ನ ಕೈವ್ ಮತ್ತು ಇತರೆ ನಗರಗಳ ಮೇಲೆ ರಷ್ಯಾ ಸತತ ಮೂರನೇ ದಿನವೂ ಡೋನ್ ಮತ್ತು ಕ್ಷಿಪಣಿ ದಾಳಿ ಮುಂದುವರೆಸಿದ್ದಕ್ಕೆ ಟ್ರಂಪ್ ಪುಟಿನ್ ರನ್ನು ಕಟುವಾಗಿ ಟೀಕಿಸಿದ್ದಾರೆ. ರಷ್ಯಾದ ಅಧ್ಯಕ್ಷ ಬ್ಲಾಡಿಮಿರ್ ಪುಟಿನ್ ಅವರೊಂದಿಗೆ ನಾನು ಯಾವಾಗಲೂ ಉತ್ತಮ ಸಂಬಂಧವನ್ನು ಹೊಂದಿದ್ದೇನೆ.

ಆದರೆ ಅವರಿಗೆ ಈಗ ಏನೋ ಆಗಿದೆ. ಅವರಿಗೆ ಹುಚ್ಚು ಹಿಡಿದಂತಿದೆ. ಪುಟಿನ್ ಅನಗತ್ಯವಾಗಿ ಹೆಚ್ಚಿನ ಸಂಖ್ಯೆಯ ಜನರನ್ನು ಕೊಲ್ಲುತ್ತಿದ್ದಾರೆ. ಉಕ್ರೇನ್ ಮೇಲೆ ರಷ್ಯಾದಿಂದ ದಾಳಿಗಳು ನಿರಂತರವಾಗಿ ಹೆಚ್ಚುತ್ತಿದೆ ಎಂದು ಟ್ರಂಪ್ ಕೆರಳಿ ಕೆಂಡವಾಗಿದ್ದಾರೆ.

ಉಕ್ರೇನ್ ನಗರಗಳ ಮೇಲೆ ವಿನಾ ಕಾರಣ ಕ್ಷಿಪಣಿಗಳು ಮತ್ತು ಡೋನ್ ಗಳಿಂದ ದಾಳಿ ಮಾಡಲಾಗುತ್ತಿದೆ. ಪುಟಿನ್ ಇಡೀ ಉಕ್ರೇನ್ ಅನ್ನು ವಶಪಡಿಸಿಕೊಳ್ಳಲು ಬಯಸಿದರೆ, ಅದು ರಷ್ಯಾದ ಪತನಕ್ಕೆ ಕಾರಣವಾಗುತ್ತದೆ ಎಂದು ಟ್ರಂಪ್ ಎಚ್ಚರಿಕೆ ನೀಡಿದ್ದಾರೆ.



ಇದೇ ಸಂದರ್ಭದಲ್ಲಿ ಅವರು, ಉಕ್ರೇನಿಯನ್ ಅಧ್ಯಕ್ಷ ವ್ಲಾಡಿಮಿರ್ ಝುಲೆನ್ಸಿ ಅವರ ಬಗ್ಗೆಯೂ ಅಸಮಾಧಾನ ವ್ಯಕ್ತಪಡಿಸಿದರು. ಝುಲೆನ್ಸಿ ಬಾಯಿಂದ ಹೊರಬರುವ ಎಲ್ಲವೂ ಸಮಸ್ಯೆಗಳನ್ನು ಸೃಷ್ಟಿಸುತ್ತದೆ, ಅದನ್ನು ನಿಲ್ಲಿಸಲೇಬೇಕು. ಮೂರು ವರ್ಷಗಳ ಯುದ್ಧ ಇನ್ನೂ ಕೊನೆಗೊಳ್ಳದಿರುವ ಬಗ್ಗೆಯೂ ಕಳವಳ ವ್ಯಕ್ತಪಡಿಸುತ್ತಿದ್ದಾರೆ. ಕಳೆದ ತಿಂಗಳು ರಷ್ಯಾ ಉಕ್ರೇನ್ ಮೇಲೆ ಮಾರಕ ದಾಳಿ ನಡೆಸಿದಾಗ ಟ್ರಂಪ್ ದಾಳಿಯನ್ನು ನಿಲ್ಲಿಸುವಂತೆ ಪುಟಿನ್‌ಗೆ ಮನವಿ ಮಾಡಿದ್ದರು. ರಷ್ಯಾದ ದಾಳಿಯಿಂದ ಝುಲೆನ್ಸಿ ಹತಾಶೆಗೊಂಡಿರುವುದು ಸಹಜ. ಜನವರಿ 20 ರವರೆಗೆ ಎಲ್ಲಾ ರೀತಿಯ ಸಹಾಯವನ್ನು ನೀಡುತ್ತಿದ್ದ ಅಮೆರಿಕ, ಈಗ ಮಿಲಿಟರಿ ಸಹಾಯವನ್ನು ಹಿಂತೆಗೆದುಕೊಳ್ಳುತ್ತಿದೆ. 30 ದಿನಗಳ ಕದನ ವಿರಾಮಕ್ಕಾಗಿ ರಷ್ಯಾವನ್ನು ಒತ್ತಾಯಿಸುತ್ತಿರುವ ಯುರೋಪಿಯನ್ ಒಕ್ಕೂಟ, ಬ್ರಿಟನ್ ಇತ್ತೀಚೆಗೆ ರಷ್ಯಾದ ಮೇಲೆ ಹೊಸ ನಿರ್ಬಂಧಗಳನ್ನು ವಿಧಿಸಿವೆ. ಆದರೆ ಹೊಸ ನಿರ್ಬಂಧಗಳನ್ನು ವಿಧಿಸುವಲ್ಲಿ ಅವರಿಗೆ ಬೆಂಬಲ ನೀಡಲು ಅಮೆರಿಕ ಅಧ್ಯಕ್ಷ ಟ್ರಂಪ್ ನಿರಾಕರಿಸಿದ್ದಾರೆ.

# ಕರ್ನಲ್ ಸೋಫಿಯಾ ಖುರೇಷಿ ಕುಟುಂಬದವರಿಂದ ಪ್ರಧಾನಿ ಮೋದಿಗೆ ಹೂಮಳೆ

**ಗಾಂಧಿನಗರ:** ಪಾಕಿಸ್ತಾನದ ವಿರುದ್ಧ ನಡೆದ ಆಪರೇಷನ್ ಸಿಂಧೂರ ಕಾರ್ಯಾಚರಣೆಯಲ್ಲಿ ಭಾಗಿಯಾಗಿ ದೇಶವೇ ಹೆಮ್ಮೆ ಪಡುವಂತೆ ಮಾಡಿದ್ದ ಭಾರತೀಯ ಸೇನಾ ಪಡೆಯ ಕರ್ನಲ್ ಸೋಫಿಯಾ ಖುರೇಷಿ ಕುಟುಂಬದ ಸದಸ್ಯರು ಗುಜರಾತ್‌ನ ವಡೋದರಾದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ರೋಡ್ ಶೋ ಕಾರ್ಯಕ್ರಮದಲ್ಲಿ ಭಾಗಿಯಾಗಿ ಮೋದಿ ಅವರ ಮೇಲೆ ಹೂವಿನ ಸುರಿಮಳೆಗೈದಿರುವ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಪ್ರಧಾನಿ ಮೋದಿ ಅವರು ಹತ್ತಿರ ಬರುತ್ತಿದ್ದಾಗ ಸೋಫಿಯಾ ತಾಯಿ ಹಲೀಮಾ ಬೀಬಿ ಸೇರಿದಂತೆ ಕುಟುಂಬ ಸದಸ್ಯರು ಪುಷ್ಪವೃಷ್ಟಿ ಮಾಡಿ ಸ್ವಾಗತಿಸಿದರು.

ಮಾಧ್ಯಮದ ಜೊತೆ ಮಾತನಾಡಿದ ಹಲೀಮಾ ಬೀಬಿ, ಪ್ರಧಾನಿ ಮೋದಿ ಅವರನ್ನು ಭೇಟಿಯಾಗಿದ್ದನ್ನು ನೋಡಿ ಸಂತೋಷ ವಾಯಿತು. ಮಹಿಳೆಯರು ಮತ್ತು ಸಹೋದರಿಯರು ಆಪರೇಷನ್ ಸಿಂಧೂರ ಬಗ್ಗೆ ಸಂತೋಷಪಟ್ಟಿದ್ದಾರೆ ಎಂದು ತಿಳಿಸಿದರು.




**ಮೋದಿ ಅವರ ರೋಡ್ ಶೋ**

ಕರ್ನಲ್ ಸೋಫಿಯಾ ಖುರೇಷಿ ಅವರ ಅವಳಿ ಸಹೋದರಿ ಶೈನಾ ಸುನ್ಸಾರಾ ಮಾತನಾಡಿ, ಮಹಿಳಾ ಸಬಲೀಕರಣಕ್ಕಾಗಿ ಪ್ರಧಾನಿ ಮೋದಿ ಅವರು ಬಹಳಷ್ಟು ಕೆಲಸ ಮಾಡಿದ್ದಾರೆ. ಸೋಫಿಯಾ ನನ್ನ ಅವಳಿ ಸಹೋದರಿ. ಸಹೋದರಿ ದೇಶಕ್ಕಾಗಿ ಏನಾದರೂ ಮಾಡಿದಾಗ, ಅದು ನನಗೆ ಮಾತ್ರವಲ್ಲದೆ ಇತರರಿಗೂ ಸ್ಫೂರ್ತಿ ನೀಡುತ್ತದೆ. ಆಕೆ ಇನ್ನು ಮುಂದೆ ನನ್ನ ಸಹೋದರಿ ಮಾತ್ರವಲ್ಲ, ದೇಶದ ಸಹೋದರಿ ಎಂದು ಹೇಳಿದರು.

ಸೋಫಿಯಾ ಖುರೇಷಿ ಭಾರತೀಯ ಸೇನೆಯಲ್ಲಿ ಲೆಫ್ಟಿನೆಂಟ್ ಕರ್ನಲ್ ಆಗಿದ್ದಾರೆ. ಪಾಕಿಸ್ತಾನ ಆಕ್ರಮಿತ ಕಾಶ್ಮೀರ, ಪಾಕಿಸ್ತಾನದಲ್ಲಿರುವ 9 ಭಯೋತ್ಪಾದಕ ನೆಲೆಗಳ ಮೇಲೆ ಭಾರತೀಯ ಸೇನೆ ಜಂಟಿ ದಾಳಿ ಮಾಡಿ ಉಗ್ರರ ನೆಲೆಗಳನ್ನು ನಾಶಪಡಿಸಿರುವ ಕುರಿತು ಸುದ್ದಿಗೋಷ್ಠಿಯಲ್ಲಿ ಇವರೇ ಮಾಹಿತಿ ನೀಡಿದ್ದರು. ಸೋಫಿಯಾ ಖುರೇಷಿ ಮೂಲತಃ ಗುಜರಾತ್‌ನವರು. ಆಪರೇಷನ್ ಸಿಂಧೂರ ಕಾರ್ಯಾಚರಣೆ ನಡೆದ ನಂತರ ಮೊದಲ ಬಾರಿಗೆ ತಮ್ಮ ತವರು ರಾಜ್ಯ ಗುಜರಾತ್‌ಗೆ ಭೇಟಿ ನೀಡಿರುವ ಮೋದಿ ಅವರು ಹಲವು ಯೋಜನೆಗಳಿಗೆ ಚಾಲನೆ ನೀಡಲಿದ್ದಾರೆ.

**ಪ್ರಧಾನಿಯವರನ್ನು ಹತ್ತಿರದಿಂದ ನೋಡುವುದು ತುಂಬಾ ಹೆಮ್ಮೆಯ ಕ್ಷಣವಾಗಿತ್ತು ಎಂದು ಹೇಳಿದರು. ಸೋಫಿಯಾಗೆ ಈ ಅವಕಾಶ ನೀಡಿದ್ದಕ್ಕಾಗಿ ನಮ್ಮ ರಕ್ಷಣಾ ಪಡೆಗೆ ನಾನು ಧನ್ಯವಾದ ಹೇಳುತ್ತೇನೆ. ಮಹಿಳೆ ಮಾಡದ ತಪ್ಪಿಗೆ ಅನುಭವಿಸಿದ ಶಿಕ್ಷೆಗೆ ಸೇಡು ತೀರಿಸಿಕೊಳ್ಳುವುದಕ್ಕಿಂತ ಉತ್ತಮ ಕ್ಷಣ ಇನ್ನೊಂದಿಲ್ಲ. ನಮ್ಮ ಮಹಿಳೆಯರು ಪುರುಷರಿಗಿಂತ ಯಾವ ರೀತಿಯಲ್ಲೂ ಕಡಿಮೆಯಿಲ್ಲ ಎಂಬುದನ್ನು ಶತ್ರುಗಳಿಗೂ ತೋರಿಸಿದ್ದಾರೆ ಎಂದರು.**

# ನಾವು ಕೇಂದ್ರ ಸರ್ಕಾರಕ್ಕೆ ಮಣಿದಿಲ್ಲ: ಸ್ಟಾಲಿನ್

**ಚೆನ್ನೈ:** ನೀತಿ ಆಯೋಗ ಸಭೆಯಲ್ಲಿ ಭಾಗವಹಿಸುವ ಬಗ್ಗೆ ಭಾರತದ ಅಭಿವೃದ್ಧಿ ಯೋಜನೆಗಳ ಕುರಿತು ಚರ್ಚೆಗಳನ್ನು ಪರಿಗಣಿಸುತ್ತಿರುವುದಾಗಿ ತಮಿಳುನಾಡು ಸಿಎಂ ಎಂ ಕೆ ಸ್ಟಾಲಿನ್ ಹೇಳಿದ್ದಾರೆ. ಈ ನಿಟ್ಟಿನಲ್ಲಿ ವಿರೋಧ ಪಕ್ಷಗಳ ಆರೋಪಗಳನ್ನು ಅವರು ತಿರಸ್ಕರಿಸಿದರು.ಮೇ 24 ರಂದು ನೀತಿ ಆಯೋಗ ಸಭೆಯಲ್ಲಿ ಭಾಗವಹಿಸುವ ಸುದ್ದಿ ಹರಡಿದ ತಕ್ಷಣ, ರಾಜಕೀಯ ಪ್ರತಿಸ್ಪರ್ಧಿಗಳು ಗಲಿಬಿಲಿಗೊಂಡರು ಮತ್ತು ಅವರು ಎಂದಿನಂತೆ ದುರುದ್ದೇಶವನ್ನು ತೋರಿಸಲು ಪ್ರಾರಂಭಿಸಿದರು ಎಂದು ಸ್ಟಾಲಿನ್ ಪಕ್ಷದ ಕಾರ್ಯಕರ್ತರಿಗೆ ಬರೆದಿದ್ದಾರೆ. ಹಿಂದಿನ ವರ್ಷಗಳಲ್ಲಿ ನಡೆದ ನೀತಿ ಸಭೆಯಲ್ಲಿ ಅವರು ಭಾಗವಹಿಸದಿರುವ ಬಗ್ಗೆ ಪ್ರಶ್ನೆಗಳನ್ನು ಕೇಳುವ ಮೂಲಕ ಅಂತಹ ವಿರೋಧಿಗಳು ಸಂತೋಷಪಟ್ಟರು ಎಂದು ಅವರು ಹೇಳಿದರು. ಅಲ್ಲದೆ, ಹಗರಣವೊಂದಕ್ಕೆ ಸಂಬಂಧಿಸಿದಂತೆ ಸರ್ಕಾರಿ ಸ್ವಾಮ್ಯದ ಮದ್ಯ ನಿಗಮ ಆವರಣದಲ್ಲಿ ಕೇಂದ್ರ ಸಂಸ್ಥೆ ನಡೆಸಿದ ಶೋಧದ ನಂತರ ಜಾರಿ ನಿರ್ದೇಶನಾಲಯದ ಕ್ರಮದಿಂದ ತಪ್ಪಿಸಿಕೊಳ್ಳಲು ಅವರು ಪ್ರಧಾನಿ ನರೇಂದ್ರ ಮೋದಿಯವರನ್ನು ಭೇಟಿ ಮಾಡುತ್ತಿದ್ದಾರೆ ಎಂಬ ಆರೋಪಗಳನ್ನು ಅವರು ಹೊರಿಸಿದ್ದಾರೆ ಎಂದು ಅವರು ಹೇಳಿದರು. ಡಿಎಂಕೆಯಂತೆ ಸಿಬಿಐ ಮತ್ತು ಇಡಿ ಸೇರಿದಂತೆ ಬೇರೆ ಯಾವುದೇ ಕೇಂದ್ರ ಸಂಸ್ಥೆಗಳು ಇದನ್ನು ಗುರಿಯಾಗಿಸಿಕೊಂಡಿಲ್ಲ. ಪ್ರಧಾನಿಗಳಾದ ಎ ಬಿ ವಾಜಪೇಯಿ ಮತ್ತು ಮನಮೋಹನ್ ಸಿಂಗ್ ಸೇರಿದಂತೆ ಅನುಭವಿ ರಾಷ್ಟ್ರೀಯ ನಾಯಕರಿಗೆ ತಮ್ಮ ಪಕ್ಷದ ಇಂತಹ ವೈಶಿಷ್ಟ್ಯದ ಬಗ್ಗೆ ತಿಳಿದಿತ್ತು. ಮುಖ್ಯಮಂತ್ರಿಗಳೊಂದಿಗೆ ಭಾರತದ ಭವಿಷ್ಯದ ಬೆಳವಣಿಗೆಯ ಬಗ್ಗೆ ಚರ್ಚಿಸಲು ಉದ್ದೇಶಿಸಲಾಗಿರುವುದರಿಂದ ಮತ್ತು ಕಳೆದ 4 ವರ್ಷಗಳ ದ್ರಾವಿಡ ಮಾದರಿ ಆಡಳಿತದಲ್ಲಿ ರಾಷ್ಟ್ರೀಯ ಬೆಳವಣಿಗೆಯಲ್ಲಿ ತಮಿಳುನಾಡಿನ ಪಾಲು ಬಹಳ ಮಹತ್ವದ್ದಾಗಿರುವುದನ್ನು ಪರಿಗಣಿಸಿ ನೀತಿ ಸಭೆಯಲ್ಲಿ ಭಾಗವಹಿಸಲು ನಿರ್ಧರಿಸಿದ್ದೇನೆ ಎಂದು ಮುಖ್ಯಮಂತ್ರಿ ಹೇಳಿದರು.



ಪ್ರಸ್ತುತ, ಭಾರತದ ಬೆಳವಣಿಗೆಯಲ್ಲಿ ತಮಿಳುನಾಡಿನ ಪಾಲು ಸುಮಾರು ಶೇ 10 ರಷ್ಟಿದ್ದು, ದ್ರಾವಿಡ ಮಾದರಿ ಸರ್ಕಾರದ ಉಪಕ್ರಮಗಳಿಂದಾಗಿ ಇದು ಶೇ. 15 ಕ್ಕೆ ಏರಲಿದೆ ಮತ್ತು ಸಭೆಯಲ್ಲಿ ವಿಶ್ವಾಸದಿಂದ ಇದನ್ನು ತಿಳಿಸಲಾಯಿತು.ರಾಜ್ಯದ ಅಭಿವೃದ್ಧಿ ಗುರಿಗಳನ್ನು (ಅಧಿಕಾರದಲ್ಲಿದ್ದಾಗ ರಾಷ್ಟ್ರೀಯ ಉದ್ದೇಶಗಳ ಜೊತೆಗೆ) ತೀವ್ರವಾಗಿ ಅನುಸರಿಸುವಂತೆಯೇ, ರಾಷ್ಟ್ರೀಯ ಭದ್ರತೆಯ ವಿಷಯದಲ್ಲೂ ಡಿಎಂಕೆ ನಿಜವಾದ ದೇಶಭಕ್ತಿಯ ಸಂಘಟನೆಯಾಗಿದೆ ಮತ್ತು ಪಕ್ಷದ ಸಂಸ್ಥಾಪಕ ಸಿಎನ್ ಅಣ್ಣಾದೊರೈ ಅವರ ಕಾಲದಿಂದಲೂ ಇದು ಪಕ್ಷದ ಲಕ್ಷಣವಾಗಿದೆ ಎಂದಿದ್ದಾರೆ.

# ಅಮೆರಿಕಗೆ ಬಾಂಗ್ಲಾ ಮಾರಾಟ ಮಾಡಲು ಯೂನಸ್ ಸರಕಾರ ಯತ್ನ

## ನಾನಾಗಲಿ ನನ್ನ ಪಕ್ಷ ಅಧಿಕಾರಕ್ಕಾಗಿ ದೇಶ ಮಾರಾಟದ ಬಗ್ಗೆ ಚಿಂತಿಸಿಲ್ಲ

**ಹೊಸದಿಲ್ಲಿ:** ಮೂಲಭೂತವಾದಿ ಉಗ್ರಗಾಮಿಗಳ ಹಿಡಿತಕ್ಕೆ ಸಿಲುಕಿರುವ ಬಾಂಗ್ಲಾದೇಶದ ಮಧ್ಯಂತರ ಸರಕಾರದ ಮುಖ್ಯಸ್ಥ ಮುಹಮ್ಮದ್ ಯೂನಸ್ ಅವರು ದೇಶವನ್ನು ಅಮೆರಿಕಗೆ ಮಾರಾಟ ಮಾಡಲು ಹೊರಟಿದ್ದಾರೆ, ಎಂದು ಮಾಜಿ ಪ್ರಧಾನಿ ಶೇಖ್ ಹಸೀನಾ ಆರೋಪಿಸಿದ್ದಾರೆ. ಅವಾಮಿ ಲೀಗ್ ಪಕ್ಷದ ಫೇಸ್‌ಬುಕ್ ಖಾತೆಯಲ್ಲಿ ಪೋಸ್ಟ್ ಮಾಡಲಾದ ಆಡಿಯೋ ತುಣುಕಿನಲ್ಲಿ ಮಾತನಾಡಿರುವ ಶೇಖ್ ಹಸೀನಾ, ನಮ್ಮ ತಂದೆ ಶೇಖ್ ಮುಜಿಬುರ್ ರೆಹಮಾನ್ ಅವರು ಯಾವ ದೇಶಕ್ಕೂ ತಲೆಬಾಗಿರಲಿಲ್ಲ. ಅಂದು ಸಹ ಸೇಂಟ್ ಮಾರ್ಟಿನ್ ದ್ವೀಪ ಪ್ರದೇಶದ ಮೇಲೆ ಹಕ್ಕುಸ್ವಾಮ್ಯ ಸ್ಥಾಪಿಸಲು ಯತ್ನಿಸಿದ ಅಮೆರಿಕದ ಪ್ರಯತ್ನವನ್ನು ತಡೆದಿದ್ದರು. ನಾನಾಗಲಿ ನನ್ನ ಪಕ್ಷವಾಗಲಿ ಅಧಿಕಾರಕ್ಕಾಗಿ ದೇಶವನ್ನು ಮಾರಾಟ ಮಾಡುವ ಚಿಂತನೆ ಸಹ ನಡೆಸಿರಲಿಲ್ಲ, ಎಂದು ಹೇಳಿದ್ದಾರೆ. ದೇಶದ ಸ್ವಾತಂತ್ರ್ಯಕ್ಕಾಗಿ ನಮ್ಮ ತಂದೆ ಕಾಲದಲ್ಲಿ ನಾವು ಶಸ್ತ್ರಾಸ್ತ್ರ ಹಿಡಿದು ಬೀದಿಗೆ ಇಳಿದಿದ್ದೆವು. ಆದರೆ, ದೇಶದ ಜನ ಆರಾಧಿಸಿದ ವ್ಯಕ್ತಿ, ದೇಶದ ಜನರಿಂದ ವಿಶ್ವಖ್ಯಾತಿ ಪಡೆದುಕೊಂಡ ವ್ಯಕ್ತಿ ಇಂದು ಅಧಿಕಾರಕ್ಕಾಗಿ ದೇಶವನ್ನೇ ಮಾರಾಟ ಮಾಡಲು ಹೊರಟಿದ್ದಾರೆ, ಎಂದು ಯೂನಸ್ ವಿರುದ್ಧ ಹಸೀನಾ ವಾಗ್ದಾಳಿ ನಡೆಸಿದರು.

**ಯಾವ ದೇಶಕ್ಕೂ ತಲೆ ಬಾಗಿರಲಿಲ್ಲ**


**ಯೂನುಸ್ ಅಧಿಕಾರಕ್ಕೆ ಬರಲು ತಮ್ಮ ಸರ್ಕಾರ ವರ್ಷಗಳ ಕಾಲ ಹೋರಾಡಿದ ಭಯೋತ್ಪಾದಕ ಸಂಘಟನೆಗಳನ್ನೇ ಬಳಸಿಕೊಂಡಿದ್ದಾರೆ ಎಂದು ಶೇಖ್ ಹಸೀನಾ ಆರೋಪಿಸಿದ್ದಾರೆ. ಭಯೋತ್ಪಾದಕ ದಾಳಿಯ ನಂತರ ನಾವು ಕಠಿಣ ಕ್ರಮ ಕೈಗೊಂಡಿದ್ದೇವೆ. ಹಲವಾರು ಭಯೋತ್ಪಾದಕರನ್ನು ಬಂಧಿಸಲಾಗಿತ್ತು. ಆದರೆ ಈಗ ಜೈಲುಗಳು ಖಾಲಿಯಾಗಿವೆ. ಎಲ್ಲರನ್ನೂ ಬಿಡುಗಡೆ ಮಾಡಲಾಗಿದೆ. ಬಾಂಗ್ಲಾದೇಶ ಈಗ ಭಯೋತ್ಪಾದಕರ ತಾಣವಾಗಿದೆ**

**–ಶೇಖ್ ಹಸೀನಾ, ಮಾಜಿ ಪ್ರಧಾನಿ**



**ಅವಾಮಿ ಲೀಗ್ ಪಕ್ಷ ನಿಷೇಧ ಕ್ರಮ ಕಾನೂನು ಬಾಹಿರ:** ಭಯೋತ್ಪಾದಕ ಚಟುವಟಿಕೆಗಳು, ಸರ್ವಾಧಿಕಾರಿ ಆಡಳಿತ ನಡೆಸಿದ ಆರೋಪದ ಮೇರೆಗೆ ಅವಾಮಿ ಲೀಗ್ ಪಕ್ಷವನ್ನು ನಿಷೇಧಿಸಬೇಕು ಎಂದು ಆಗ್ರಹಿಸಿ ವಿದ್ಯಾರ್ಥಿಗಳ ನೇತೃತ್ವದಲ್ಲಿ ಹೊಸದಾಗಿ ರಚನೆಯಾದ ನ್ಯಾಷನಲ್ ಸಿಟಿಜನ್ ಪಾರ್ಟಿ ಕಾರ್ಯಕರ್ತರು ಗುರುವಾರ ಢಾಕಾದಾದ್ಯಂತ ಪ್ರತಿಭಟನೆ ನಡೆಸಿದ್ದರು. ಇದಾದ ಬಳಿಕ ಪಕ್ಷ ನಿಷೇಧಿಸ ಲಾಗಿತ್ತು. ಮುಹಮ್ಮದ್ ಯೂನಸ್‌ಉಗ್ರಗಾಮಿ ಎಂದು ಟೀಕಿಸಿರುವ ಹಸೀನಾ, ತಮ್ಮ ರಾಜಕೀಯ ಪಕ್ಷ ಅವಾಮಿ ಲೀಗ್ ನಿಷೇಧಿಸಿರುವ ಕ್ರಮ ಕಾನೂನು ಬಾಹಿರ, ಅಸಾಂವಿಧಾನಿಕ, ಎಂದು ಹೇಳಿದರು.

**ಹಸೀನಾ ಬದಲು ಯೂನಸ್ ಮಧ್ಯಂತರ ಸರ್ಕಾರ:** ಜುಲೈ 2024ರಲ್ಲಿ ಬಾಂಗಾದೇಶದಲ್ಲಿ ರಾಜಕೀಯ ಸಂಘರ್ಷ ಭುಗಿಲೆದ್ದಾಗ ಹಸೀನಾ ಅವರ ಸರ್ಕಾರವು ವಿರೋಧ ಪಕ್ಷದ ನಾಯಕರನ್ನು ಮೌನಗೊಳಿಸಲು ಕಾರ್ಯಾಚರಣೆ ನಡೆಸಿತ್ತು. ಈ ವೇಳೆ 1,400 ಪ್ರತಿಭಟನಾಕಾರರು ಸಾವನ್ನಪ್ಪಿದ್ದರು. ಹಸೀನಾ ಭಾರತದಲ್ಲಿ ಸ್ವಯಂ-ದೇಶಭ್ರಷ್ಟರಾಗಿದ್ದಾರೆ, ಮಾನವೀಯತೆಯ ವಿರುದ್ಧದ ಅಪರಾಧಗಳ ಆರೋಪದ ಮೇಲೆ ಢಾಕಾದಿಂದ ಬಂಧನ ವಾರಂಟ್ ಅನ್ನು ಧಿಕ್ಕರಿಸಿದ್ದಾರೆ ಎಂದು ಆರೋಪಿಸಿದ್ದಾರೆ.



**ಮಧ್ಯಂತರ ಸರ್ಕಾರ ಮುನ್ನಡೆ**

**ದೇಶದ ಭದ್ರತೆ, ಸಾರ್ವಭೌಮತ್ವವನ್ನು ರಕ್ಷಿಸುವ ಹಿತದೃಷ್ಟಿಯಿಂದ ಬಾಂಗ್ಲಾದೇಶದ ಅಂತರರಾಷ್ಟ್ರೀಯ ಅಪರಾಧ ನ್ಯಾಯ ಮಂಡಳಿಯಲ್ಲಿ ಅವಾಮಿ ಲೀಗ್ ಮತ್ತು ಅದರ ನಾಯಕರ ವಿಚಾರಣೆ ಪೂರ್ಣಗೊಳ್ಳುವವರೆಗೆ ನಿಷೇಧವು ಜಾರಿಯಲ್ಲಿರುತ್ತದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಹಸೀನಾ ಅವರನ್ನು ಪ್ರಧಾನಿ ಹುದ್ದೆಯಿಂದ ಪದಚ್ಯುತಗೊಳಿಸಿದಾಗಿನಿಂದ ಬಾಂಗ್ಲಾದೇಶದ ಮಧ್ಯಂತರ ನಾಯಕ, ನೊಬೆಲ್ ಶಾಂತಿ ಪ್ರಶಸ್ತಿ ವಿಜೇತ ಮುಹಮ್ಮದ್ ಯೂನಸ್ ಮಧ್ಯಂತರ ಸರ್ಕಾರವನ್ನು ಮುನ್ನಡೆಸುತ್ತಿದ್ದಾರೆ.**

# ಮಿನಿ ನ್ಯೂಸ್

## ಭಾರಿ ಮಳೆಗೆ ಮುಳುಗಿದ ಮುಂಬೈ ಅಂಡರ್‌ಗ್ರೌಂಡ್ ಮೆಟ್ರೋ ನಿಲ್ದಾಣ

**ಮುಂಬೈ:** ಭಾರಿ ಮಳೆಯ ಕಾರಣ ಆಚಾರ್ಯ ಅತ್ರೆ, ಚೌಕ್ ಮತ್ತು ವರ್ಲಿ ನಡುವಿನ ಮೆಟ್ರೋ ಮಾರ್ಗ- 3 ರನ್ನು ಸ್ಥಗಿತಗೊಳಿಸಲಾಗಿದೆ. ಭಾರೀ ಮಳೆಯಿಂದಾಗಿ ಭೂಗತ ನಿಲ್ದಾಣವು ಜಲಾವೃತವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಸೋಮವಾರ ಬೆಳಿಗ್ಗೆ ಭೂಗತ ಆಚಾರ್ಯ ಅತ್ರೆ ಚೌಕ್ ನಿಲ್ದಾಣದಲ್ಲಿ ಪ್ರವಾಹ ವರದಿಯಾದ ನಂತರ ಮುಂಬೈ ಮೆಟ್ರೋ ರೈಲು ನಿಗಮ ಕಾರ್ಯಾಚರಣೆಯನ್ನು ಸ್ಥಗಿತ ಗೊಳಿಸಬೇಕಾಯಿತು. ಮೆಟ್ರೋ ನಿಲ್ದಾಣದೊಳಗಿನ ಪ್ರವಾಹವು 33 ಕಿಮೀ ಉದ್ದದ ಕೊಲಾಬಾ-ಬಿಕೆಸಿ-ಆರೆ ಜೆವಿಎಲ್‌ಆರ್ ಭೂಗತ ಮೆಟ್ರೋ ಕಾರಿಡಾರ್‌ನಲ್ಲಿರುವ ಮೆಟ್ರೋ ನಿಲ್ದಾಣದ ನಿರ್ಮಾಣ ಗುಣಮಟ್ಟ ಮತ್ತು ಮುಂಗಾರು ಸಿದ್ಧತೆಯ ಬಗ್ಗೆ ಕಳವಳ ವ್ಯಕ್ತಪಡಿಸಲಾಗಿದೆ. ಎಂಎಂಆರ್‌ಸಿ ಹೇಳಿಕೆಯಲ್ಲಿ ಸೋಮವಾರ ಹಠಾತ್, ತೀವ್ರವಾದ ಮಳೆಯಿಂದಾಗಿ, ಡಾ. ಆನಿ ಬೆಸೆಂಟ್ ರಸ್ತೆಯ ಉದ್ದಕ್ಕೂ ಆಚಾರ್ಯ ಆತ್ರೆ, ಚೌಕ್ ನಿಲ್ದಾಣದ ನಿರ್ಮಾಣ ಹಂತದಲ್ಲಿರುವ ಪ್ರವೇಶ, ನಿರ್ಗಮನ ರಚನೆಯಲ್ಲಿ ನೀರು ಸೋರಿಕೆಯಾಗಿದೆ ಎಂದು ವರದಿಯಾಗಿದೆ. ಪ್ರವೇಶ, ನಿರ್ಗಮನದಲ್ಲಿ ನಿರ್ಮಿಸಲಾದ ಆರ್‌ಸಿಸಿ ನೀರು-ಧಾರಣ ಗೋಡೆ ಕುಸಿದು ಈ ಘಟನೆ ಸಂಭವಿಸಿದೆ. ಮುನ್ನೆಚ್ಚರಿಕೆ ಕ್ರಮವಾಗಿ ಮತ್ತು ಪ್ರಯಾಣಿಕರ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು, ವರ್ಲಿ ಮತ್ತು ಆಚಾರ್ಯ ಆತ್ರೆ ಚೌಕ್ ನಡುವಿನ ರೈಲು ಸೇವೆಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ ಎಂದು ಸಂಸ್ಥೆ ತಿಳಿಸಿದೆ ಮೆಟ್ರೋ ಲೈನ್ 3 ಮುಂಬೈನ ಮೊದಲ ಸಂಪೂರ್ಣ ಭೂಗತ ಮೆಟ್ರೋ ಮಾರ್ಗವಾಗಿದ್ದು, ಪ್ರಸ್ತುತ ಹಂತ ಹಂತದ ನಿರ್ಮಾಣ ಹಂತದಲ್ಲಿದೆ.

**ರೈಲು ಸಂಚಾರ ವ್ಯತ್ಯಯ**

## ಪಾಕ್ ಮಾಜಿ ಅಧ್ಯಕ್ಷ ಪರ್ವೇಜ್ ಮುಷರಪ್ ವಂಶಸ್ಥರ ಆಸ್ತಿ ಹರಾಜು

**ಲಕ್ನೋ:** ಪಾಕಿಸ್ತಾನದ ಮಾಜಿ ಅಧ್ಯಕ್ಷ ಪರ್ವೇಜ್ ಮುಷರಫ್ ಅವರ ಪೂರ್ವಜರು ಉತ್ತರ ಪ್ರದೇಶದ ಬಾಗಪತ್ ಜಿಲ್ಲೆಯಲ್ಲಿ ಹೊಂದಿದ್ದ ಜಮೀನನನ್ನು ಶತ್ರು ಆಸ್ತಿ ಎಂದು ಘೋಷಿಸಿ ಹರಾಜು ಹಾಕಲಾಗಿದೆ. ಏ.22ರ ಪಹಲ್ಗಾಮ್ ದಾಳಿ. ಅದರ ಪ್ರತಿಕಾರಕ್ಕೆ ಭಾರತ ನಡೆಸಿದ ಆಪರೇಷನ್ ಸಿಂಧೂರದ ನಂತರ ಎರಡು ರಾಷ್ಟ್ರಗಳ ನಡುವೆ ಕದನ ವಿರಾಮ ಘೋಷಿಸಲಾಗಿದೆ. ಆದರೆ, ಪಾಕಿಸ್ತಾನದ ಮಾಜಿ ಅಧ್ಯಕ್ಷ ಪರ್ವೇಜ್ ಮುಷರಫ್ ಅವರ ಪೂರ್ವಜರು ಉತ್ತರ ಪ್ರದೇಶದ ಬಾಗ್ಪತ್ ಜಿಲ್ಲೆಯ ಬರೌತ್ ಪಟ್ಟಣದಲ್ಲಿ ಹೊಂದಿರುವ ಆಸ್ತಿಯನ್ನು 1.38 ಕೋಟಿ ರೂ.ಗೆ ಹರಾಜು ಹಾಕಲಾಗಿದೆ. ಬರೌತ್‌ನ ಕೊಟಾನಾ ಗ್ರಾಮದಲ್ಲಿ ಇರುವ ಸುಮಾರು 13 ಬಿಘಾ ಭೂಮಿಯನ್ನು ಶತ್ರು ಆಸ್ತಿ ಎಂದು ಘೋಷಿಸಲಾಗಿದೆ. ಈಗ ಅದು 1.38 ಕೋಟಿ ರೂ.ಗೆ ಮಾರಾಟವಾಗಿದೆ. ಈ ಭೂಮಿ ಮೊದಲು ಪರ್ವೇಜ್ ಮುಷರಫ್ ಅವರ ಸಹೋದರ ಡಾ. ಜಾವೇದ್ ಮುಷರಫ್, ಅವರ ಕುಟುಂಬದ ಹೆಸರಿನಲ್ಲಿತ್ತು ಆದರೆ 15 ವರ್ಷಗಳ ಹಿಂದೆ ಅದನ್ನು ಶತ್ರು ಆಸ್ತಿಯಾಗಿ ನೋಂದಾಯಿಸಲಾಗಿದೆ. ಈ ಆಸ್ತಿಗಳನ್ನು ಶತ್ರು ಆಸ್ತಿಗಳೆಂದು ಪರಿಗಣಿಸಿ ಸರ್ಕಾರಿ ದಾಖಲೆಗಳಲ್ಲಿ ನೋಂದಾಯಿಸಲಾಯಿತು. ಶತ್ರು ಆಸ್ತಿ ಇಲಾಖೆ ಈಗ ಉತ್ತರ ಪ್ರದೇಶದಾದ್ಯಂತ ಅಂತಹ ಆಸ್ತಿಗಳನ್ನು ಹರಾಜು ಹಾಕುತ್ತಿದೆ. ಮಾರ್ಚ್ 28 ರಂದು 171 ಶತ್ರು ಆಸ್ತಿಗಳನ್ನು ಹರಾಜು ಹಾಕಲಾಗಿದ್ದು, ಇದರಿಂದ ಸರ್ಕಾರಕ್ಕೆ 15 ಕೋಟಿ ರೂ.ಗೂ ಹೆಚ್ಚು ಆದಾಯ ಬಂದಿತ್ತು. ಈ ಆಸ್ತಿ ಲಕ್ನೋ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಹರಡಿಕೊಂಡಿವೆ.

## ರಾಹುಲ್ ಗಾಂಧಿ ಭಾರತದ ಪರವಾಗಿ ಮಾತನಾಡಿಲ್ಲ ; ಕಿಶನ್‌ರೆಡ್ಡಿ

**ಹೈದರಾಬಾದ್:** ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಹೇಳಿಕೆಗಳು ಮೇಕ್ ಇನ್ ಇಂಡಿಯಾದ ಮೂಲಾಶಯವನ್ನೇ ಬುಡ ಮೇಲು ಮಾಡಹೊರಟಂತಿದೆ ಎಂದು ಕೇಂದ್ರ ಸಚಿವ ಜಿ ಕಿಶನ್ ರೆಡ್ಡಿ ಆರೋಪಿಸಿದ್ದಾರೆ. ಕೆಲವು ವರ್ಷಗಳಿಂದ ರಾಹುಲ್ ಗಾಂಧಿ ನೀಡುತ್ತಿರುವ ಹೇಳಿಕೆಗಳನ್ನು ನೋಡಿದರೆ ಅವು ಭಾರತದ ಸಶಸ್ತ್ರ ಪಡೆಗಳನ್ನು ದುರ್ಬಲಗೊಳಿಸಲು, ನಮ್ಮ ಸ್ವದೇಶೀಕರಣ ಪ್ರಯತ್ನಗಳಿಗೆ ಅಡೆತಡೆ ಸೃಷ್ಟಿಸಲು ಮಾಡುತ್ತಿರುವ ಪ್ರಯತ್ನ ಎಂದೆನಿಸುತ್ತದೆ ಎಂದು ಅವರು ಎಕ್ಸ್ ಮಾಡಿದ್ದಾರೆ. ಬೇರೆ ದೇಶಗಳ ಡೋನ್‌ಗಳನ್ನು ಹೊಗಳುವುದರಿಂದ ಹಿಡಿದು ರಫೇಲ್ ಒಪ್ಪಂದವನ್ನು ಹಗರಣ ಎಂದು ಕರೆಯುವವರೆಗೆ ಅಗ್ನಿ ವೀರರನ್ನು ಟೀಕಿಸುವುದರಿಂದ ಹಿಡಿದು ನಮ್ಮ ಮೇಕ್ ಇನ್ ಇಂಡಿಯಾ ಪ್ರಯತ್ನಗಳಿಗೆ ಹಾನಿ ಮಾಡುವವರೆಗೆ, ರಾಹುಲ್ ಗಾಂಧಿ ಎಂದಿಗೂ ಭಾರತದ ಪರವಾಗಿ ಮಾತನಾಡಿಲ್ಲ ಎಂದಿದ್ದಾರೆ. ಭಾರತದವ ಆತ್ಮಸ್ಥೈರ್ಯ ಕುಗ್ಗಿಸಿ ಯಾರ ಪರವಾಗಿ ಮಾತನಾಡುತ್ತಿದ್ದಾರೆ ಎಂಬುದೇ ಅರ್ಥವಾಗುವುದಿಲ್ಲ ಎಂದು ಕಿಶನ್ ರೆಡ್ಡಿ ತಮ್ಮ ಪೋಸ್ಟ್‌ನಲ್ಲಿ ಬರೆದಿದ್ದಾರೆ.

ಆಪರೇಷನ್ ಸಿಂಧೂರ್ ಬಗ್ಗೆ ಪ್ರಶ್ನೆಗಳನ್ನು ಕೇಳಿದ್ದಕ್ಕಾಗಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿರುದ್ಧ ಕಿಶನ್ ರೆಡ್ಡಿ ವಾಗ್ದಾಳಿ ನಡೆಸಿದ್ದರು. ರಾಹುಲ್ ಗಾಂಧಿ ಹಾಗೂ ಕಾಂಗ್ರೆಸ್ ಪಾಕಿಸ್ತಾನದ ಧಾಟಿಯಲ್ಲಿ ಮಾತನಾಡುತ್ತಿದ್ದಾರೆ. ಭಾರತೀಯ ಸಶಸ್ತ್ರ ಪಡೆಗಳು ಆಪರೇಷನ್ ಸಿಂಧೂರ್ ಅನ್ನು ವಿಜಯಶಾಲಿಯನ್ನಾಗಿ ಮಾಡಿತು ಪಾಕಿಸ್ತಾನದಲ್ಲಿ ಭಯೋತ್ಪಾದಕ ನೆಲೆಗಳು ಮತ್ತು ಪ್ರಧಾನ ಕಚೇರಿಗಳು ನಾಶವಾಗಿವೆ, ಇಡೀ ದೇಶವು ಒಗ್ಗಟ್ಟಾಗಿದ್ದು ಸಶಸ್ತ್ರ ಪಡೆಗಳನ್ನು ಬೆಂಬಲಿಸುತ್ತಿದೆ. ಆದರೆ, ಕಾಂಗ್ರೆಸ್ ಪಕ್ಷವು ಪುರಾವೆ ಕೇಳುತ್ತಿದೆ ಎಂದು ಕಿಶನ್ ರೆಡ್ಡಿ ಆರೋಪಿಸಿದ್ದಾರೆ.

## ಹಿಮಾಚಲ ಪ್ರದೇಶ ರಾಜ್ಯ ಸಚಿವಾಲಯಕ್ಕೆ ಬಾಂಬ್ ಬೆದರಿಕೆ

**ಶಿಮ್ಲಾ:** ಹಿಮಾಚಲ ಪ್ರದೇಶ ರಾಜ್ಯ ಸಚಿವಾಲಯಕ್ಕೆ ಹುಸಿ ಬಾಂಬ್ ಬೆದರಿಕೆ ಬಂದಿದೆ. ಸಚಿವಾಲಯದಲ್ಲಿ ಬಾಂಬ್ ಇಡಲಾಗಿದೆ ಎಂದು ಹೇಳಿಕೊಳ್ಳುವ ಇಮೇಲ್ ಭದ್ರತಾ ಪಡೆಗಳನ್ನು ಬೆಚ್ಚಿಬೀಳಿಸಿದೆ ಆದಾಗ್ಯೂ, ಶೋಧದ ಸಮಯದಲ್ಲಿ ಅನುಮಾನಾಸ್ಪದ ವಸ್ತುಗಳು ಕಂಡು ಬಂದಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಸ್ಫೋಟಕ ವಸ್ತುವಿನ ಬಗ್ಗೆ ಮಾಹಿತಿ ಬಂದ ನಂತರ, ಬಾಂಬ್ ನಿಷ್ಕ್ರಿಯ ದಳ, ಶ್ವಾನ ದಳ ಗಳು ರಾಜ್ಯ ಸಚಿವಾಲಯಕ್ಕೆ ಧಾವಿಸಿ ಆವರಣದ ಸಂಪೂರ್ಣ ಶೋಧ ನಡೆಸಿದವು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ನಂತರ ಬಾಂಬ್ ಬೆದರಿಕೆ ಸುಳ್ಳು ಎಂದು ತಿಳಿದುಬಂದರೂ, ಮುನ್ನೆಚ್ಚರಿಕೆ ಕ್ರಮವಾಗಿ ಸಚಿವಾಲಯದಲ್ಲಿ ಭದ್ರತೆಯನ್ನು ಬಿಗಿಗೊಳಿಸಲಾಗಿದೆ ಎಂದು ಅವರು ಹೇಳಿದರು. ಅಧಿಕಾರಿಗಳ ಪ್ರಕಾರ, ಇಮೇಲ್‌ನ ಮೂಲವನ್ನು ಗುರುತಿಸಲು ಪ್ರಯತ್ನಗಳು ನಡೆಯುತ್ತಿವೆ. ಈ ವರ್ಷ ಸಚಿವಾಲಯಕ್ಕೆ ಬಾಂಬ್ ಬೆದರಿಕೆ ಇಮೇಲ್ ಬಂದಿರುವುದು ಇದು ಎರಡನೇ ಬಾರಿ. ಏಪ್ರಿಲ್‌ನಲ್ಲಿಯೂ ಸಹ, ಸಚಿವಾಲಯದಲ್ಲಿ ಬಾಂಬ್ ಬೆದರಿಕೆ ಕರೆ ಬಂದಿತ್ತು.




# ಮದುವೆಯಾದ್ಮೇಲೂ ಕೀರ್ತಿ ಸುರೇಶ್‌ಗೆ ಡಿಮ್ಯಾಂಡ್

## ಕೈತುಂಬಾ ಸಿನಿಮಾಗಳಲ್ಲಿ ಬ್ಯುಸಿ

'ಮಹಾನಟಿ' ಕೀರ್ತಿ ಸುರೇಶ್‌ಗೆ ಮದುವೆಯ ನಂತರವೂ ಸಾಲು ಸಾಲು ಸಿನಿಮಾ ಅವಕಾಶಗಳು ಅರಸಿ ಬರುತ್ತಿವೆ. ಮದುವೆಯಾದ್ಮೇಲೆ ನಟಿಗೆ ಬೇಡಿಕೆ ಹೆಚ್ಚಾಗಿದೆ. ಕೀರ್ತಿ ಮದುವೆಯಾದ್ಮೇಲೆಯೂ ಸಖತ್ ಆಯಕ್ಟೀವ್ ಆಗಿದ್ದಾರೆ. ತಮಿಳಿನ 'ರಿವಾಲ್ವರ್ ರೀಟಾ', 'ಕನ್ನಿವೇದಿ' ಚಿತ್ರಗಳ ಶೂಟಿಂಗ್ ನಡೆಯುತ್ತಿದೆ. ಸದ್ಯದಲ್ಲೇ ಈ ಚಿತ್ರಗಳ ಅಪ್‌ಡೇಟ್ ಸಿಗಲಿದೆ. ಇದರೊಂದಿಗೆ ಒಟಿಟಿಯಲ್ಲಿ ಪ್ರಸಾರ ವಾಗುವ ವೆಬ್ ಸರಣಿಯಲ್ಲೂ ಕಾಣಿಸಿ ಕೊಳ್ಳಲಿದ್ದಾರೆ. ವಿಜಯ್ ದೇವರಕೊಂಡ ಮುಂಬರುವ ಸಿನಿಮಾವೊಂದಕ್ಕೆ ಕೀರ್ತಿ ನಾಯಕಿಯಾಗಿ ನಟಿಸುವ ವಿಚಾರ ದಟ್ಟವಾಗಿದೆ.

ಈ ಬಗ್ಗೆ ಇನ್ನೂ ಅಧಿಕೃತ ಮಾಹಿತಿ ಸಿಗಬೇಕಿದೆ. ಇದರೊಂದಿಗೆ ಮಲಯಾಳಂನ ಖ್ಯಾತ ನಟನೊಂದಿಗೆ ನಟಿಸುವ ಅವಕಾಶ ಕೂಡ ಮಹಾನಟಿಗೆ ಅರಸಿ ಬಂದಿದೆ. ಅರ್ಧ ಡಜನ್ ಚಿತ್ರಗಳು ನಟಿಯ ಕೈಯಲ್ಲಿವೆ. ಒಟ್ನಲ್ಲಿ ಬಾಲಿವುಡ್ ಮತ್ತು ದಕ್ಷಿಣದ ಸಿನಿಮಾದಲ್ಲಿ ಅವರು ಸದ್ದು ಮಾಡ್ತಿದ್ದಾರೆ. 15 ವರ್ಷಗಳಿಂದ ಉದ್ಯಮಿ ಆಯಂಟೋನಿ ಜೊತೆ ಕೀರ್ತಿ ಡೇಟಿಂಗ್ ಮಾಡುತ್ತಿದ್ದರು. 2024ರ ಡಿಸೆಂಬರ್ 12ರಂದು ಬಹುಕಾಲದ ಗೆಳೆಯನೊಂದಿಗೆ ನಟಿ ಮದುವೆಯಾದರು. ಗೋವಾದಲ್ಲಿ ಅದ್ದೂರಿಯಾಗಿ ಮದುವೆ ನಡೆಯಿತು. ಮದುವೆ ಬಳಿಕ ಅವರು ನಟಿಸಿದ ಮೊದಲ ಬಾಲಿವುಡ್ ಸಿನಿಮಾ ರಿಲೀಸ್ ಆಗಿತ್ತು.




# 59ರಲ್ಲೂ 20ರ ಲುಕ್ ಕಿಂಗ್ ಫಿಟ್ನೆಸ್

## ಆಹಾರದ ಬಗ್ಗೆ ಬಹಳ ಜಾಗ್ರತೆ

ಅಭಿಮಾನಿಗಳಿಂದ್ ಕಿಂಗ್ ಖಾನ್ ಎಂದು ಕರೆಸಿಕೊಂಡಿರುವ ಶಾರುಖ್ ಖಾನ್, 59 ವರ್ಷ ವಯಸ್ಸಿನಲ್ಲೂ 20ರ ಹರೆಯದ ಯುವಕನಂತೆ ಸಕ್ರಿಯರಾಗಿದ್ದಾರೆ. ಈ ವಯಸ್ಸಿನಲ್ಲಿಯೂ ಅವರು ಹೇಗೆ ಇಷ್ಟೊಂದು ದಣಿವರಿಯದೆ ಕೆಲಸ ಮಾಡ್ತಾರೆ ಅಂತ ಅಭಿಮಾನಿಗಳಲ್ಲಿ ಒಂದು ಪ್ರಶ್ನೆಯಂತೂ ಮನೆ ಮಾಡಿರುತ್ತೆ. ಹಿಂದೆ ಸಂದರ್ಶನವೊಂದರಲ್ಲಿ ಶಾರುಖ್ ಖಾನ್ ತಮ್ಮ ಊಟದ ಶೈಲಿಯ ಬಗ್ಗೆ ಹೇಳಿಕೊಂಡಿದ್ದರು. ನಾನು ದಿನಕ್ಕೆ ಎರಡು ಬಾರಿ ಮಾತ್ರ ಊಟ ಮಾಡುತ್ತೇನೆ. ಬೆಳಿಗ್ಗೆ ತಿಂಡಿ ಮಾಡುವುದಿಲ್ಲ. ಮಧ್ಯಾಹ್ನ ಮತ್ತು ರಾತ್ರಿ ಮಾತ್ರ ಊಟ ಮಾಡುತ್ತೇನೆ. ಹೆಚ್ಚಿನ ಪ್ರಮಾಣದ ಆಹಾರ ತಿನ್ನುವುದಿಲ್ಲ. ನನಗೆ ಸರಳ ಆಹಾರ ಇಷ್ಟ ಎಂದು ಹೇಳಿಕೊಂಡಿದ್ದರು. ಮೊಳಕೆ ಕಾಳುಗಳು, ಬೇಯಿಸಿದ ಕೋಳಿ ಮಾಂಸ ಮತ್ತು ಬ್ರೊಕೊಲಿಯನ್ನು ತಿನ್ನುತ್ತೇನೆ. ನಾನು ಕೆಲವು ವರ್ಷಗಳಿಂದ ಪ್ರತಿದಿನ ಒಂದೇ ರೀತಿಯ ಆಹಾರವನ್ನು ಸೇವಿಸುತ್ತೇನೆ. ತಿನ್ನುವ ಆಹಾರದಲ್ಲಿ ಯಾವುದೇ ಬದಲಾವಣೆ ಇಲ್ಲ. ಆದರೆ ನಾನು ಅತಿಯಾಗಿ ತಿನ್ನುವವನಲ್ಲ ಎಂದಿದ್ದರು. ವಿಮಾನದಲ್ಲಿ ಪ್ರಯಾಣಿಸುವಾಗ ಅಥವಾ ಪಾರ್ಟಿಗೆ ಯಾರಾದ್ದಾದರೂ ಮನೆಗೆ ಹೋದಾಗ, ಅವರು ನನಗೆ ಬಡಿಸುವ ಯಾವುದೇ ಆಹಾರವನ್ನು ನಾನು ತಿನ್ನುತ್ತೇನೆ. ಅದು ಬಿರಿಯಾನಿಯಾಗಿರಲಿ, ಚಪಾತಿಯಾಗಿರಲಿ, ಪರೋಟಾ ಆಗಿರಲಿ, ತುಪ್ಪವಾಗಲಿ, ಲಸ್ಸಿಯಾಗಿರಲಿ, ಏನೇ ಕೊಟ್ಟರೂ ನಾನು ಬೇಡ ಎನ್ನದೇ ತಿನ್ನುತ್ತೇನೆ ಎಂದಿದ್ದರು. ಶಾರುಖ್ ಖಾನ್ ಮಾತ್ರವಲ್ಲ, ಸೂಪರ್ ಸ್ಟಾರ್ ರಜನಿಕಾಂತ್ ಕೂಡ ತಮ್ಮ ಆಹಾರದ ಬಗ್ಗೆ ಬಹಳ ಜಾಗ್ರತೆ ವಹಿಸುತ್ತಾರೆ ಸರಳವಾದ ಆಹಾರವನ್ನು ಮಾತ್ರ ತಿನ್ನುತ್ತಾರೆ. ರಜನಿಕಾಂತ್ ಹೆಚ್ಚು ಎಣ್ಣೆ ಅಥವಾ ಉಪ್ಪು ಇರುವ ಆಹಾರಗಳಿಂದ ದೂರ ಇರ್ತಾರೆ. ಬಹುಶಃ ಇದಕ್ಕೆ ಇರ್ಬೇಕು ರಜನಿಕಾಂತ್ 74 ನೇ ವಯಸ್ಸಿನಲ್ಲೂ ರೆಸ್ಟ್ ಇಲ್ದೆ ಸಿನಿಮಾ ಮಾಡೋದು! ರಜನಿಕಾಂತ್ ಅವರ ಜೊತೆ ನಡೆಯೋಕಾಗಲ್ಲ. ಅವರು ನಡಿತಾ ಇದ್ರೆ, ನಾವು ಓಡ್ತಾ ಇರ್ಬೇಕು ಅಂತ, ಕೀರ್ತಿ ಸುರೇಶ್ ಸೇರಿದಂತೆ, ಅನೇಕ ಯುವ ಕಲಾವಿದರು ಹೇಳಿಕೊಂಡಿದ್ದಾರೆ. ಇಷ್ಟಕ್ಕೆಲ್ಲ ಊಟವೇ ಕಾರಣ. ಅಷ್ಟಿಲ್ದೇ ಹಿರಿಯರು ಹೇಳ್ತಾರಾ, ಊಟ ಬಲ್ಲವನಿಗೆ ರೋಗ ಇಲ್ಲ ಅಂತ!

# ಡಕಾಯಿಟ್ ಚಿತ್ರದ ಟೀಸರ್ ಔಟ್



ಅಡವಿ ಶೇಷ್, ಮೃಣಾಲ್ ಠಾಕೂರ್, ಅನುರಾಗ್ ಕಶ್ಯಪ್ ನಟನೆಯ 'ಡಕಾಯಿಟ್' ಚಿತ್ರದ ಟೀಸರ್ ರಿಲೀಸ್ ಆಗಿದೆ. ಬಾಲಿವುಡ್ ನಟ ಅನುರಾಗ್ ಮತ್ತು ಅಡವಿ ಶೇಷ್ ಕಾಂಬಿನೇಷನ್ ಮಸ್ತ್ ಆಗಿದೆ. ಟೀಸರ್ ನೋಡಿರೋ ಅಭಿಮಾನಿಗಳಿಗೆ ಚಿತ್ರದ ಬಗ್ಗೆ ಕುತೂಹಲ ಮೂಡಿಸಿದೆ. ಟೀಸರ್ ಶುರುವಿನಲ್ಲೇ ಅಡವಿ ಶೇಷ್ ಖಡಕ್ ಡೈಲಾಗ್‌ನಿಂದ ಶುರುವಾಗಿದೆ. ಅನುರಾಗ್ ಕಶ್ಯಪ್ ಖಡಕ್ ಅವತಾರ, ಮೃಣಾಲ್ ನಟನೆ, ಹೀರೋ ಅಡವಿ ಶೇಷ್ ಅವರ ಆಕ್ಷನ್ ಸೀನ್ ನೋಡಿದ್ರೆ, ಭಯಂಕರ ಎಂದೆನಿಸುತ್ತಿದೆ. ಪ್ರೀತಿ, ದ್ರೋಹ, ಪ್ರತಿಕಾರದ ಕಥೆಯೇ ಡಕಾಯಿಟ್ ಚಿತ್ರವಾಗಿದ್ದು, ಇದರ ಬಗ್ಗೆ ಟೀಸರ್‌ನಲ್ಲಿ ಸುಳಿವು ಬಿಟ್ಟು ಕೊಟ್ಟಿದೆ. 'ಮಹಾರಾಜ' ಚಿತ್ರದ ಬಳಿಕ ಮತ್ತೊಮ್ಮೆ ದಕ್ಷಿಣದ ಸಿನಿಮಾ 'ಡಕಾಯಿಟ್'ನಲ್ಲಿ ಬಾಲಿವುಡ್ ನಟ ಕಮ್ ನಿರ್ದೇಶಕ ಅನುರಾಗ್ ಕಶ್ಯಪ್ ನಟಿಸಿದ್ದಾರೆ. ಈ ಸಿನಿಮಾದಲ್ಲೂ ಅವರಿಗೆ ಪವರ್‌ಫುಲ್ ಪಾತ್ರವೇ ಸಿಕ್ಕಿದೆ. ಈ ವರ್ಷದ ಅಂತ್ಯ ಡಿ.25ರಂದು ಸಿನಿಮಾ ರಿಲೀಸ್ ಆಗಲಿದೆ. ತೆಲುಗು, ತಮಿಳು, ಹಿಂದಿಯಲ್ಲಿ ರಿಲೀಸ್‌ಗೆ ಸಜ್ಜಾಗಿದೆ.

# ನನಗೆ ಫಹಾದ್ ಫಾಸಿಲ್ ಆಕ್ಟಿಂಗ್ ಇಷ್ಟ

ಬಾಲಿವುಡ್ ಬೆಡಗಿ ಆಲಿಯಾ ಭಟ್ ಅವರು ಕಾನ್ ಫಿಲ್ಮ್ ಫೆಸ್ಟಿವಲ್‌ನಲ್ಲಿ ದಕ್ಷಿಣದ ನಟನ ಬಗ್ಗೆ ನೀಡಿರುವ ಹೇಳಿಕೆವೊಂದು ವೈರಲ್ ಆಗಿದೆ. ಫಹಾದ್ ಫಾಸಿಲ್ ಅದ್ಭುತ ನಟ ಎಂದು ಕಾನ್ ಚಲನಚಿತ್ರೋತ್ಸವದ ಸಂದರ್ಶನವೊಂದರಲ್ಲಿ ನಟಿ ಕೊಂಡಾಡಿದ್ದಾರೆ. ಈ ಕಾರ್ಯಕ್ರಮದಲ್ಲಿ ಕೆರಿಯರ್, ಫ್ಯಾಮಿಲಿಗೆ ಸಂಬಂಧಿಸಿದ ಕೆಲ ಪ್ರಶ್ನೆಗಳನ್ನು ಆಲಿಯಾಗೆ ಕೇಳಲಾಗಿದೆ. ಆಗ ನೆಚ್ಚಿನ ನಟ ಯಾರು ಎಂದು ಎದುರಾದ ಪ್ರಶ್ನೆಗೆ ಥಟ್ ಅಂತ ಮಲಯಾಳಂ ನಟ ಫಹಾದ್ ಫಾಸಿಲ್ ಹೆಸರನ್ನು ನಟಿ ಹೇಳಿದ್ದಾರೆ.

ನನಗೆ ಫಹಾದ್ ಅವರ ಆಕ್ಟಿಂಗ್ ಇಷ್ಟ. ಅವರು ನಟಿಸಿರುವ 'ಆವೇಶಂ' ಚಿತ್ರ ನನ್ನ ನೆಚ್ಚಿನ ಸಿನಿಮಾಗಳಲ್ಲಿ ಒಂದು. ಅವರು ಅದ್ಭುತ ನಟ, ಅವರೊಂದಿಗೆ ಕೆಲಸ ಮಾಡಲು ಎದುರು ನೋಡುತ್ತಿದ್ದೇನೆ ಎಂದಿದ್ದಾರೆ.

ಅದಷ್ಟೇ ಅಲ್ಲ, ಮಲಯಾಳಂ ಸಿನಿಮಾಗಳ ಬಗ್ಗೆ ಆಲಿಯಾ ಮೆಚ್ಚುಗೆ ವ್ಯಕ್ತಪಡಿಸಿದರು. ಆಗ 'ಡಾರ್ಲಿಂಗ್ಸ್' ಎಂಬ ಸಿನಿಮಾದಲ್ಲಿ ಮಲಯಾಳಂ ನಟ ರೋಷನ್ ಮ್ಯಾಥ್ಯು ಅವರೊಂದಿಗೆ ನಟಿಸಿದ್ದೆ. ಅವರು ಅದ್ಭುತ ಪ್ರತಿಭೆ ಎಂದಿದ್ದಾರೆ. ನಟಿಯ ಮಾತು ಮಲಯಾಳಂ ಪ್ರೇಕ್ಷಕರಿಗೆ ಖುಷಿ ಕೊಟ್ಟಿದೆ. ಯಶ್ ರಾಜ್ ಫಿಲ್ಮ್ ನಿರ್ಮಾಣದ 'ಆಲ್ಫಾ' ಚಿತ್ರ, 'ಲವ್ ವಾರ್' ಸಿನಿಮಾದಲ್ಲೂ ಆಲಿಯಾ ನಟಿಸುತ್ತಿದ್ದಾರೆ.



# ದೀಕ್ಷಿತ್ ಶೆಟ್ಟಿ ನಿರ್ಮಾಣದ ವಿಡಿಯೋ ಚಿತ್ರದ ಟೀಸರ್ ರಿಲೀಸ್



ಬಹುಭಾಷಾ ನಟನಾಗಿ ಗುರುತಿಸಿಕೊಳ್ಳುತ್ತಿರುವ ಕನ್ನಡದ ನಟ ದೀಕ್ಷಿತ್ ಶೆಟ್ಟಿ ಈಗ ನಿರ್ಮಾಣಕ್ಕಿಳಿದಿದ್ದಾರೆ. ಅವರ ಚೊಚ್ಚಲ ನಿರ್ಮಾಣದ 'ವಿಡಿಯೋ' ಚಿತ್ರದ ಟೀಸರ್ ರಿಲೀಸ್ ಆಗಿದೆ. ಅಭಿಮಾನಿಗಳಿಂದ ಈ ಟೀಸರ್ ಉತ್ತಮ ರೆಸ್ಪಾನ್ಸ್ ಸಿಕ್ಕಿದೆ. ಮೊದಲ ಸಿನಿಮಾದಲ್ಲೇ ಹಾರರ್ ಕಥೆ ಹೇಳಲು ಹೊರಟಿದ್ದಾರೆ. 'ಧೀ ಸಿನಿಮಾಸ್' ನಿರ್ಮಾಣ ಸಂಸ್ಥೆ ಮೂಲಕ ದೀಕ್ಷಿತ್ ಹೊಸ ಪ್ರತಿಭೆಗಳಿಗೆ ಅವಕಾಶ ನೀಡಿದ್ದಾರೆ. 'ವಿಡಿಯೋ' ಚಿತ್ರದ ಟೀಸರ್‌ನಲ್ಲಿ ಹಾರರ್ ಕಥೆಯ ಸಣ್ಣ ಝಲಕ್ ಅನ್ನು ತೋರಿಸಲಾಗಿದೆ. 'ವಿಡಿಯೋ' ಎಂಬ ಭಿನ್ನ ಟೈಟಲ್ ಇಡಲಾಗಿದ್ದು, ಇದರ ಟೀಸರ್ ನೋಡಿ ಅಭಿಮಾನಿಗಳಲ್ಲಿ ಚಿತ್ರದ ಬಗ್ಗೆ ಕುತೂಹಲ ಮೂಡಿದೆ. ಯಶಸ್ಸಿನ ಬಳಿಕ ನಿರ್ದೇಶಕ ಶ್ರೀನಿಧಿ ಬೆಂಗಳೂರು ಜೊತೆ ದೀಕ್ಷಿತ್ ಕೈಜೋಡಿಸಿದ್ದಾರೆ. ಚಿತ್ರದಲ್ಲಿ ಭರತ್, ಜೀವನ್, ಪ್ರಿಯಾ ಜೆ ಆಚಾರ್ ಸೇರಿದಂತೆ ಅನೇಕರು ನಟಿಸಿದ್ದಾರೆ. ಪ್ರಸನ್ನ ಕುಮಾರ್ ಸಂಗೀತ, ಅವಿನಾಶ್ ಶಾಸ್ತ್ರಿ ಕ್ಯಾಮೆರಾ ಕೈಚಳಕ ಚಿತ್ರಕ್ಕಿದೆ. ತೆಲಗಿನಲ್ಲಿ ನಾನಿ, ಕೀರ್ತಿ ಸುರೇಶ್ ಜೊತೆ 'ದಸರಾ' ಸಿನಿಮಾದಲ್ಲಿ ನಟಿಸಿದ್ಮೇಲೆ ದೀಕ್ಷಿತ್‌ಗೆ ಬೇಡಿಕೆ ಹೆಚ್ಚಾಗಿದೆ. ಕನ್ನಡದ ಸಿನಿಮಾಗಳ ಜೊತೆ ರಶ್ಮಿಕಾ ಮಂದಣ್ಣ ಜೊತೆ 'ದಿ ಗರ್ಲ್‌ಫ್ರೆಂಡ್' ಚಿತ್ರ, ಶವರಾ ಚಿತ್ರ, ಮಲಯಾಳಂ 'ಏಂಜಲ್ ನಂ 16' ಸಿನಿಮಾದಲ್ಲಿ ನಟಿಸುತ್ತಿದ್ದಾರೆ.

# ಮುಂಬೈಗೆ ಮಣ್ಣು ಮುಕ್ಕಿಸಿದ ಪಂಜಾಬ್



ಪಾಯಿಂಟ್ ಟೇಬಲ್ ಬದಲಾವಣೆ!

2025ರ ಐಪಿಎಲ್‌ನ ಅಂತಿಮ ಲೀಗ್ ಪಂದ್ಯದಲ್ಲಿ ಶ್ರೇಯಸ್ ಅಯ್ಯರ್ ನೇತೃತ್ವದ ಪಂಜಾಬ್ ಕಿಂಗ್ಸ್ ವಿರುದ್ಧ ಮುಂಬೈ ಇಂಡಿಯನ್ಸ್ ಸೋಲುಂಡಿದೆ. ಈ ಸೋಲಿನಿಂದ ಹಾರ್ದಿಕ್ ಪಾಂಡ್ಯ ಪಡೆ ಪಾಯಿಂಟ್ ಪಟ್ಟಿಯಲ್ಲಿ 4ನೇ ಸ್ಥಾನ ಪಡೆದರೆ, 7 ವಿಕೆಟ್‌ಗಳಿಂದ ಜಯ ಸಾಧಿಸಿರುವ ಪಂಜಾಬ್ 19 ಅಂಕಗಳಿಂದ ಅಗ್ರ ಸ್ಥಾನಕ್ಕೆ ಏರಿದೆ.

ಜೈಪುರದ ಸವಾಯಿ ಮಾನ್ಸಿಂಗ್ ಸ್ಟೇಡಿಯಂನಲ್ಲಿ ನಡೆದ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ತಂಡದ ನಾಯಕ ಶ್ರೇಯಸ್ ಅಯ್ಯರ್ ಅವರು ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ಮೊದಲ ಬ್ಯಾಟಿಂಗ್ ಮಾಡಿ, ಆರಂಭದಲ್ಲೇ ಹಿನ್ನಡೆಗೆ ಒಳಗಾಯಿತು. ಓಪನರ್‌ಗಳಾಗಿ ಕ್ರೀಸ್‌ಗೆ ಆಗಮಿಸಿದ ರೋಹಿತ್ ಶರ್ಮಾ ಹಾಗೂ ರಯಾನ್ ರಿಕೆಲ್ಟನ್ ಬೇಗನೆ ಹೊರ ನಡೆದರು.

ರಯಾನ್ 27 ರನ್‌ಗೆ ವಿಕೆಟ್ ಒಪ್ಪಿಸಿದ್ರೆ ರೋಹಿತ್ ಶರ್ಮಾ 24 ರನ್‌ಗೆ ಔಟ್ ಆದರು. ಸೂರ್ಯಕುಮಾರ್ ಯಾದವ್ 3ನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗೆ ಆಗಮಿಸಿ 39 ಎಸೆತಗಳಲ್ಲಿ 6 ಬೌಂಡರಿ, 2 ಸಿಕ್ಸರ್‌ನಿಂದ ಹಾಫ್‌ಸೆಂಚುರಿ ಸಿಡಿಸಿದರು. 57 ರನ್ ಗಳಿಸಿ ಬ್ಯಾಟಿಂಗ್ ಮಾಡುವಾಗ ಎಲ್‌ಬಿಗೆ ಬಲಿಯಾದರು. ತಿಲಕ್ 1, ವಿಲ್ ಜಾಕ್ಸ್ 17, ಕ್ಯಾಪ್ಟನ್ ಹಾರ್ದಿಕ್ ಪಾಂಡ್ಯ 2 ಬೌಂಡರಿ, 2 ಸಿಕ್ಸರ್‌ನಿಂದ 15 ಬಾಲ್‌ಗೆ 26 ರನ್ ಸಿಡಿಸಿ ಔಟ್ ಆದರು. ನಮನ್ ಧೀರ್ 20 ರನ್‌ಗೆ ಅರ್ಷ್‌ದೀಪ್ ಸಿಂಗ್‌ಗೆ ವಿಕೆಟ್ ಒಪ್ಪಿಸಿದರು. ಹೀಗಾಗಿ 20 ಓವರ್‌ಗಳಲ್ಲಿ 7 ವಿಕೆಟ್‌ಗೆ 185 ರನ್‌ಗಳ ಗುರಿ ಯನ್ನು ಎದುರಾಳಿ ಪಂಜಾಬ್‌ಗೆ ನೀಡಿತ್ತು.

185 ರನ್‌ಗಳ ಟಾರ್ಗೆಟ್ ಬೆನ್ನು ಹತ್ತಿದ್ದ ಪಂಜಾಬ್ ಕಿಂಗ್ಸ್ ಪರ ಓಪನರ್ ಪ್ರಿಯಾಂಶ್ ಆರ್ಯ ಸಿಡಿಲಬ್ಬರದ ಬ್ಯಾಟಿಂಗ್ ಪ್ರದರ್ಶನ ಮಾಡಿದರು. ಕೇವಲ 28 ಎಸೆತದಲ್ಲಿ 8 ಬೌಂಡರಿ, 1 ಸಿಕ್ಸರ್‌ನಿಂದ ಅರ್ಧಶತಕ ಬಾರಿಸಿದರು. ಆದರೆ ಇನ್ನೊಬ್ಬ ಓಪನರ್ ಪ್ರಭಸಿಮ್ರನ್ ಸಿಂಗ್ ಕೇವಲ 13 ರನ್‌ಗೆ ವಿಕೆಟ್ ಕಳೆದುಕೊಂಡು ಪೆವಿಲಿಯನ್‌ಗೆ ನಡೆದರು. 62 ರನ್ ಗಳಿಸಿ ಬ್ಯಾಟಿಂಗ್ ಮಾಡುತ್ತಿದ್ದ ಆರ್ಯ, ಸೂರ್ಯಕುಮಾರ್‌ಗೆ ಕ್ಯಾಚ್ ಕೊಟ್ಟು ನಿರಾಸೆಗೆ ಒಳಗಾದರು.

ಪ್ರಭಸಿಮ್ರನ್ ಔಟ್ ಆದ ಬಳಿಕ ಕ್ರೀಸ್‌ಗೆ ಆಗಮಿಸಿದ್ದ ಜೋಶ್ ಇಂಗ್ಲಿಸ್ ಕೂಡ ಭರ್ಜರಿ ಬ್ಯಾಟಿಂಗ್ ಮಾಡಿದರು. 3ನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗೆ ಬಂದ ಜೋಶ್ ಇಂಗ್ಲಿಸ್, ಪ್ರಿಯಾಂಶ್ ಆರ್ಯಗೆ ಉತ್ತಮ ಸಾಥ್ ಕೊಟ್ಟರು. ಇದರಿಂದ ಕೇವಲ 29 ಬಾಲ್‌ಗಳಲ್ಲಿ ಅರ್ಧಶತಕ ಬಾರಿಸಿದರು. ಪಂದ್ಯದಲ್ಲಿ ಒಟ್ಟು 42 ಬಾಲ್‌ಗಳನ್ನು ಆಡಿದ ಜೋಶ್ ಇಂಗ್ಲಿಸ್ 9 ಬೌಂಡರಿ, 3 ಸಿಕ್ಸ್ ನೆರವಿನಿಂದ 73 ರನ್ ಸಿಡಿಸಿ ತಂಡಕ್ಕೆ ದೊಡ್ಡ ಕೊಡುಗೆ ನೀಡಿ ಎಲ್‌ಬಿಗೆ ಬಲಿಯಾದರು.

# ಮುಂಬೈ-ಪಂಜಾಬ್ ಪಂದ್ಯ ರದ್ದಾದರೆ ಯಾವೆರಡು ತಂಡಗಳಿಗೆ ಟಾಪ್ 2 ಸ್ಥಾನ?




ಐಪಿಎಲ್ 2025ರ ಲೀಗ್ ಹಂತ ಅಂತಿಮ ಹಂತ ತಲುಪಿದೆ. ಗುಜರಾತ್ ಟೈಟನ್ಸ್, ಪಂಜಾಬ್ ಕಿಂಗ್ಸ್, ಆರ್‌ಸಿಬಿ ಮತ್ತು ಮುಂಬೈ ಇಂಡಿಯನ್ಸ್ ಪ್ಲೇಆಫ್ ತಲುಪಿವೆ. ಆದರೆ ಟಾಪ್ 2 ಸ್ಥಾನಕ್ಕಾಗಿ ಪಂಜಾಬ್, ಆರ್‌ಸಿಬಿ ಮತ್ತು ಮುಂಬೈ ನಡುವೆ ಭಾರೀ ಸ್ಪರ್ಧೆ ಇದೆ.

ಮುಂಬೈ-ಪಂಜಾಬ್ ಪಂದ್ಯದ ಫಲಿತಾಂಶ ಮತ್ತು ಆರ್‌ಸಿಬಿಯ ಕೊನೆಯ ಪಂದ್ಯದ ಫಲಿತಾಂಶ ಟಾಪ್ 2 ನಿರ್ಧರಿಸುತ್ತದೆ. ಮಳೆಯಿಂದ ಪಂದ್ಯ ರದ್ದಾದರೆ ಪಂಜಾಬ್ 18 ಅಂಕಗಳೊಂದಿಗೆ ಟಾಪ್ 2 ರಲ್ಲಿ ಸ್ಥಾನ ಪಡೆಯುತ್ತದೆ. ಐಪಿಎಲ್ 2025 ರ ಲೀಗ್ ಹಂತವು ಅಂತಿಮ ಹಂತವನ್ನು ತಲುಪಿದ್ದು, ಪ್ಲೇಆಫ್ ಆಡುವ ನಾಲ್ಕು ತಂಡಗಳು ಯಾವುವು ಎಂಬುದು ಕೂಡ ನಿರ್ಧಾರವಾಗಿದೆ. ಗುಜರಾತ್ ಟೈಟನ್ಸ್, ಪಂಜಾಬ್ ಕಿಂಗ್ಸ್, ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಮುಂಬೈ ಇಂಡಿಯನ್ಸ್ ಈಗಾಗಲೇ ಅಗ್ರ ನಾಲ್ಕರಲ್ಲಿ ತಮ್ಮ ಸ್ಥಾನವನ್ನು ಖಚಿತಪಡಿಸಿವೆ. ಆದರೆ, ಯಾವ ತಂಡಗಳು ಲೀಗ್ ಹಂತವನ್ನು ಟಾಪ್-2 ರಲ್ಲಿ ಮುಗಿಸುತ್ತವೆ ಎಂಬುದು ಇನ್ನೂ ನಿರ್ಧರಿಸಲಾಗಿಲ್ಲ. ಅಗ್ರ-2 ಸ್ಥಾನ ಪಡೆಯುವ ತಂಡಗಳು ಕ್ವಾಲಿಫೈಯರ್-1 ರಲ್ಲಿ ಮುಖಾಮುಖಿಯಾಗುತ್ತವೆ. ಈ ಪಂದ್ಯದಲ್ಲಿ ಗೆದ್ದ ತಂಡ ನೇರವಾಗಿ ಫೈನಲ್‌ಗೇರುತ್ತದೆ. ಹೀಗಾಗಿ ಲೀಗ್ ಹಂತದಲ್ಲಿ ಉಳಿದಿರುವ 69 ನೇ ಪಂದ್ಯ ಮತ್ತು ಆರ್‌ಸಿಬಿಯ ಕೊನೆಯ ಲೀಗ್ ಪಂದ್ಯ ಮೊದಲೆರಡು ಸ್ಥಾನಗಳನ್ನು ನಿರ್ಧರಿಸಲಿವೆ.

**ಮುಂಬೈ-ಪಂಜಾಬ್ ಪಂದ್ಯ ರದ್ದಾದರೆ ಏನಾಗುತ್ತದೆ?**

ಲೀಗ್ ಹಂತದ ಪ್ರಸ್ತುತ ಅಂಕಪಟ್ಟಿಯ ಪ್ರಕಾರ, ಗುಜರಾತ್ ಟೈಟನ್ಸ್ 14 ಪಂದ್ಯಗಳಿಂದ 9 ಗೆಲುವು ಮತ್ತು 18 ಅಂಕಗಳೊಂದಿಗೆ ಮೊದಲ ಸ್ಥಾನದಲ್ಲಿದೆ. ಪಂಜಾಬ್ ಕಿಂಗ್ಸ್ ಮತ್ತು ರಾಯಲ್ ಚಾಲೆಂಜರ್ಸ್ ಬೆಂಗಳೂರು ಎರಡೂ 13 ಪಂದ್ಯಗಳಿಂದ 8 ಗೆಲುವುಗಳೊಂದಿಗೆ ತಲಾ 17 ಅಂಕಗಳನ್ನು ಹೊಂದಿವೆ. ಪಂಜಾಬ್‌ನ ಎನ್‌ಆರ್‌ಆರ್ +0.327 ಆಗಿದ್ದರೆ, ಆರ್‌ಸಿಬಿ +0.255 ಆಗಿದೆ. ಅದೇ ಸಮಯದಲ್ಲಿ, ಮುಂಬೈ ಇಂಡಿಯನ್ಸ್ 13 ಪಂದ್ಯಗಳಲ್ಲಿ 8 ಗೆಲುವು ಮತ್ತು 16 ಅಂಕಗಳೊಂದಿಗೆ ನಾಲ್ಕನೇ ಸ್ಥಾನದಲ್ಲಿದೆ.

ಮತ್ತೊಂದೆಡೆ, ಐಪಿಎಲ್ 2025 ರ 69 ನೇ ಪಂದ್ಯವು ಮುಂಬೈ ಇಂಡಿಯನ್ಸ್ ಮತ್ತು ಪಂಜಾಬ್ ಕಿಂಗ್ಸ್ ನಡುವೆ ನಡೆಯಲಿದೆ. ಈ ಪಂದ್ಯವು ಅಗ್ರ-2 ಸ್ಥಾನದ ಸ್ಪರ್ಧೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಈ ಪಂದ್ಯ ಮಳೆಯಿಂದ ಅಥವಾ ಇನ್ನಾವುದೇ ಕಾರಣದಿಂದಾಗಿ ರದ್ದಾದರೆ, ಎರಡೂ ತಂಡಗಳು ತಲಾ 1 ಅಂಕಗಳನ್ನು ಪಡೆಯುತ್ತವೆ. ಇದರಿಂದ ಪಂಜಾಬ್ ಕಿಂಗ್ಸ್ ತಂಡವು 14 ಪಂದ್ಯಗಳಿಂದ 18 ಅಂಕಗಳನ್ನು ಗಳಿಸಲಿದ್ದು, ಗುಜರಾತ್ ಟೈಟನ್ಸ್ ತಂಡಕ್ಕೆ ಸಮನಾಗಿರುತ್ತದೆ. ಆದರೆ ಗುಜರಾತ್ ಟೈಟನ್ಸ್, ಪಂಜಾಬ್‌ಗಿಂತ ಹೆಚ್ಚು ಪಂದ್ಯಗಳನ್ನು ಗೆದ್ದಿದೆ, ಆದ್ದರಿಂದ ಗುಜರಾತ್ ಅಗ್ರ -2 ರಲ್ಲಿ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಳ್ಳಲಿದೆ.

## ಆರ್‌ಸಿಬಿಯ ಭವಿಷ್ಯ ನಿರ್ಧಾರ

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ಇನ್ನೂ ಒಂದು ಪಂದ್ಯ ಬಾಕಿ ಇದ್ದು, ಅಗ್ರ-2 ಸ್ಥಾನ ಪಡೆಯುವ ಸುವರ್ಣಾವಕಾಶ ತಂಡಕ್ಕಿದೆ. ಆರ್‌ಸಿಬಿ ತನ್ನ ಕೊನೆಯ ಲೀಗ್ ಪಂದ್ಯದಲ್ಲಿ ಗೆದ್ದರೆ, 14 ಪಂದ್ಯಗಳಿಂದ 19 ಅಂಕಗಳನ್ನು ಸಂಪಾಧಿಸುವ ಮೂಲಕ ಅಗ್ರ -2 ರಲ್ಲಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳುತ್ತದೆ. ಆದರೆ ಆರ್‌ಸಿಬಿ ತನ್ನ ಕೊನೆಯ ಪಂದ್ಯದಲ್ಲಿ ಸೋತರೆ ತಂಡದ ಬಳಿ ಕೇವಲ 17 ಅಂಕಗಳು ಮಾತ್ರ ಉಳಿಯುತ್ತವೆ. ಆಗ ಗುಜರಾತ್ ಅಗ್ರ -2 ರಲ್ಲಿ ಸ್ಥಾನ ಪಡೆಯುತ್ತದೆ. ಮತ್ತೊಂದೆಡೆ, ಮುಂಬೈ ವಿರುದ್ಧದ ಪಂಜಾಬ್ ಕಿಂಗ್ಸ್ ಪಂದ್ಯ ರದ್ದಾದರೂ, 18 ಅಂಕಗಳೊಂದಿಗೆ ಅಗ್ರ -2 ರಲ್ಲಿ ಸ್ಥಾನ ಪಡೆಯುತ್ತದೆ.


# ಸಿಎಸ್‌ಕೆ ತಂಡಕ್ಕೆ ಮೇಜರ್ ಸರ್ಜರಿ



ಇಂಡಿಯನ್ ಪ್ರೀಮಿಯರ್ ಲೀಗ್ ಸೀಸನ್-18ರ ಮುಕ್ತಾಯದ ಬೆನ್ನಲ್ಲೇ ಚೆನ್ನೈ ಸೂಪರ್ ಕಿಂಗ್ಸ್ ತಂಡಕ್ಕೆ ಮೇಜರ್ ಸರ್ಜರಿಯಾಗುವುದು ಖಚಿತವಾಗಿದೆ. ಇಲ್ಲಿ ಕೆಲ ಆಟಗಾರರೊಂದಿಗೆ ತಂಡದ ಕೋಚಿಂಗ್ ಸಿಬ್ಬಂದಿಗಳಿಗೂ ಗೇಟ್ ಪಾಸ್ ನೀಡಲು ಸಿಎಸ್‌ಕೆ ಫ್ರಾಂಚೈಸಿ ಬಯಸಿದೆ. ಅದರಂತೆ ಮುಂದಿನ ಸೀಸನ್ ಗೂ ಮುನ್ನ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಬ್ಯಾಟಿಂಗ್ ಕೋಚ್ ಬದಲಾಗುವುದು ಬಹುತೇಕ ಖಚಿತ.

ಪ್ರಸ್ತುತ ಬ್ಯಾಟಿಂಗ್ ಕೋಚ್ ಆಸ್ಟ್ರೇಲಿಯಾದ ಮೈಕಲ್ ಹಸ್ಸಿ ಅವರನ್ನು ಕೈ ಬಿಡಲು ಫ್ರಾಂಚೈಸಿ ಬಯಸಿದೆ ಎಂಬ ಸುಳಿವನ್ನು ಸಿಎಸ್‌ಕೆ ತಂಡದ ಮಾಜಿ ಆಟಗಾರ ಸುರೇಶ್ ರೈನಾ ಬಹಿರಂಗಪಡಿಸಿದ್ದಾರೆ. ಗುಜರಾತ್ ಟೈಟಾನ್ಸ್ ಹಾಗೂ ಚೆನ್ನೈ ಸೂಪರ್ ಕಿಂಗ್ಸ್ ನಡುವಣ ಪಂದ್ಯದ ವೇಳೆ ಚಾನೆಲ್ ಚರ್ಚೆಯಲ್ಲಿ ಕಾಣಿಸಿಕೊಂಡಿದ್ದ ರೈನಾ, ಸಿಎಸ್‌ಕೆ ಫ್ರಾಂಚೈಸಿಯು ಮುಂದಿನ ಸೀಸನ್‌ಗೆ ಹೊಸ ಬ್ಯಾಟಿಂಗ್ ಕೋಚ್ ಅನ್ನು ನೇಮಿಸಿಕೊಳ್ಳಲು ಚರ್ಚೆಯಲ್ಲಿದೆ ಎಂದು ತಿಳಿಸಿದ್ದಾರೆ. ಇದೇ ವೇಳೆ ಪ್ಯಾನೆಲ್ ಚರ್ಚೆಯಲ್ಲಿದ್ದ ಆಕಾಶ್ ಚೋಪ್ರಾ, ಆ ಕೋಚ್ ಯಾರು ಎಂಬ ಪ್ರಶ್ನೆಯನ್ನು ಮುಂದಿಟ್ಟಿದ್ದಾರೆ. ಅಲ್ಲದೆ ಕೋಚ್ ಹೆಸರಿನ ಮೊದಲಕ್ಷರ 'ಎಸ್' ನಿಂದ ಪ್ರಾರಂಭವಾಗುತ್ತವೆಯೇ ಎಂದು ಪ್ರಶ್ನಿಸಿದರು. ಇದಾಗ್ಯೂ, ಹೆಸರು ಹೇಳದ ಸುರೇಶ್ ರೈನಾ, ''ಅವರು ಅತ್ಯಂತ ವೇಗದ ಅರ್ಧಶತಕ ಗಳಿಸಿದ್ದಾರೆ ಎಂಬ ಸುಳಿವನ್ನು ನೀಡಿದ್ದಾರೆ. ಕುತೂಹಲಕಾರಿ ವಿಷಯ ಎಂದರೆ ಚೆನ್ನೈ ಸೂಪರ್ ಕಿಂಗ್ಸ್ ಪರ ಅತ್ಯಂತ ವೇಗದ ಅರ್ಧಶತಕ ಬಾರಿಸಿರುವುದು ಸುರೇಶ್ ರೈನಾ. 2014 ರಲ್ಲಿ ಪಂಜಾಬ್ ಕಿಂಗ್ಸ್ ವಿರುದ್ಧ ಅವರು ಕೇವಲ 16 ಎಸೆತಗಳಲ್ಲಿ ಅರ್ಧಶತಕ ಸಿಡಿಸಿದ್ದರು. ಇದು ಚೆನ್ನೈ ಸೂಪರ್ ಕಿಂಗ್ಸ್ ಪರ ಮೂಡಿಬಂದ ಅತ್ಯಂತ ವೇಗದ ಅರ್ಧಶತಕವಾಗಿದೆ.

ಇದೀಗ ಅತ್ಯಂತ ವೇಗದ ಅರ್ಧಶತಕ ಬಾರಿಸಿದ ಬ್ಯಾಟರ್ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಹೊಸ ಬ್ಯಾಟಿಂಗ್ ಕೋಚ್ ಆಗಲಿದ್ದಾರೆ ಎಂದು ಸುರೇಶ್ ರೈನಾ ಬಹಿರಂಗಪಡಿಸಿದ್ದಾರೆ.



# ಆರ್‌ಸಿಬಿ ತಂಡಕ್ಕೆ ರೋಡೇಷಿಯನ್ ಆಟಗಾರ ಎಂಟ್ರಿ

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ಝಿಂಬಾಬ್ವೆ (ರೋಡೇಷಿಯನ್) ವೇಗಿ ಬ್ಲೆಸಿಂಗ್ ಮುಝುರಬಾನಿ ಎಂಟ್ರಿ ಕೊಟ್ಟಿದ್ದಾರೆ. ಈ ಬಾರಿಯ ಐಪಿಎಲ್ ಹರಾಜಿನಲ್ಲಿ ಕಾಣಿಸಿಕೊಂಡಿದ್ದ ಮುಝುರಬಾನಿಯನ್ನು ಯಾವುದೇ ಫ್ರಾಂಚೈಸಿ ಖರೀದಿಸಿರಲಿಲ್ಲ. ಆದರೆ ಇದೀಗ ಬದಲಿ ಆಟಗಾರನಾಗಿ ಆಗಮಿಸಿರುವ ಮುಝುರಬಾನಿ ಲಕ್ನೋದಲ್ಲಿ ಆರ್‌ಸಿಬಿ ತಂಡವನ್ನು ಕೂಡಿಕೊಂಡಿದ್ದಾರೆ.

ಆರ್‌ಸಿಬಿ ತಂಡದಲ್ಲಿದ್ದ ಸೌತ್ ಆಫ್ರಿಕಾ ವೇಗಿ ಲುಂಗಿ ಎನ್‌ಗಿಡಿ ತವರಿಗೆ ಮರಳಿದ್ದಾರೆ. ಮುಂಬರುವ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್ ಪಂದ್ಯದ ಅಭ್ಯಾಸಕ್ಕಾಗಿ ಎನ್‌ಗಿಡಿ ಅರ್ಧದಲ್ಲೇ ಟೂರ್ನಿ ತೊರೆದಿದ್ದಾರೆ. ಹೀಗಾಗಿ ಅವರ ಬದಲಿಗೆ ಬ್ಲೆಸಿಂಗ್ ಮುಝುರಬಾನಿಯನ್ನು ಆಯ್ಕೆ ಮಾಡಲಾಗಿದೆ. ಝಿಂಬಾಬ್ವೆ ಪರ 67 ಟಿ20 ಪಂದ್ಯಗಳಲ್ಲಿ ಬೌಲಿಂಗ್ ಮಾಡಿರುವ ಮುಝುರಬಾನಿ ಬರೋಬ್ಬರಿ 78 ವಿಕೆಟ್ ಕಬಳಿಸಿ ಮಿಂಚಿದ್ದಾರೆ. ಅದು ಕೂಡ ಪ್ರತಿ ಓವರ್‌ಗೆ 7.03 ಸರಾಸರಿಯಲ್ಲಿ ರನ್ ಬಿಟ್ಟು ಕೊಡುವ ಮೂಲಕ ಎಂಬುದು ವಿಶೇಷ. ಅಂದರೆ ಬ್ಲೆಸಿಂಗ್ ಮುಝುರಬಾನಿ ಟಿ20 ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಅತ್ಯುತ್ತಮ ಎಕಾನಮಿ ರೇಟ್ ಹೊಂದಿದ್ದಾರೆ. ಬ್ಲೆಸಿಂಗ್ ಮುಝುರಬಾನಿಯನ್ನು ಆಯ್ಕೆ ಮಾಡಲು ಮುಖ್ಯ ಕಾರಣ ಆರ್‌ಸಿಬಿ ತಂಡದ ಕೋಚ್ ಆಂಡಿ ಫ್ಲವರ್. ಝಿಂಬಾಬ್ವೆ ಮೂಲದವರಾಗಿರುವ ಫ್ಲವರ್‌ಗೆ ಮುಝುರಬಾನಿ ಸಾಮರ್ಥ್ಯದ ಬಗ್ಗೆ ತುಂಬಾ ಚೆನ್ನಾಗಿ ಗೊತ್ತಿದೆ.

# ಕಾವ್ಯಾ ತಂಡದಿಂದ ಸ್ಟಾರ್ ಆಟಗಾರರಿಗೆ ಗೇಟ್‌ಪಾಸ್!

ಐಪಿಎಲ್ 2025ರಲ್ಲಿ ನಿರಾಶಾದಾಯಕ ಪ್ರದರ್ಶನ ನೀಡಿದ ಸನ್‌ರೈಸರ್ಸ್ ಹೈದರಾಬಾದ್ ತಂಡ, ಮುಂದಿನ ಸೀಸನ್‌ಗಾಗಿ ತಮ್ಮ ತಂಡದಲ್ಲಿ ಮಹತ್ವದ ಬದಲಾವಣೆಗಳನ್ನು ಮಾಡಲು ಸಿದ್ಧವಾಗಿದೆ. ಮೊಹಮ್ಮದ್ ಶಮಿ, ಕಮಿಂದು ಮೆಂಡಿಸ್, ಮತ್ತು ಅಥರ್ವ ಟೈಡೆ ಅವರಂತಹ ಆಟಗಾರರನ್ನು ಬಿಡುಗಡೆ ಮಾಡುವ ಸಾಧ್ಯತೆಗಳಿವೆ. ಆದರೆ, ಹೆನ್ರಿಕ್ ಕ್ಲಾಸೆನ್, ಪ್ಯಾಟ್ ಕಮ್ಮಿನ್ಸ್, ಮತ್ತು ಟ್ರಾವಿಸ್ ಹೆಡ್ ಅವರಂತಹ ಪ್ರಮುಖ ಆಟಗಾರರನ್ನು ಉಳಿಸಿಕೊಳ್ಳಲು ನಿರ್ಧರಿಸಲಾಗುವುದು. ಐಪಿಎಲ್ 2025 ರ ಸೀಸನ್ ಸನ್‌ರೈಸರ್ಸ್ ಹೈದರಾಬಾದ್‌ಗೆ ನಿರೀಕ್ಷೆಯಂತೆ ನಡೆಯಲಿಲ್ಲ. 14 ಪಂದ್ಯಗಳಲ್ಲಿ ಕೇವಲ 6 ಪಂದ್ಯಗಳಲ್ಲಿ ಗೆದ್ದಿದ್ದ ತಂಡ, ಪ್ಲೇಆಫ್‌ನಲ್ಲಿ ಸ್ಥಾನ ಪಡೆಯುವಲ್ಲಿ ವಿಫಲವಾಯಿತು. ಕಳೆದ ಸೀಸನ್‌ನಲ್ಲಿ ಬಲಿಷ್ಠ ಬ್ಯಾಟಿಂಗ್ ಮತ್ತು ಬೌಲಿಂಗ್‌ಗೆ ಹೆಸರುವಾಸಿಯಾಗಿದ್ದ ಎಸ್‌ಆರ್‌ಹೆಚ್ ಈ ಬಾರಿ ತನ್ನ ಲಯವನ್ನು ಕಳೆದುಕೊಂಡಂತೆ ಕಾಣುತ್ತಿತ್ತು.

ಇದೀಗ ಎಸ್‌ಆರ್‌ಹೆಚ್ ಸೀಸನ್ ಮುಗಿದಿರುವುದರಿಂದ, ತಂಡದ ಒಡತಿ ಕಾವ್ಯಾ ಮಾರನ್ ಮತ್ತು ಆಡಳಿತ ಮಂಡಳಿಯು ಮೇಜರ್ ಸರ್ಜರಿಗೆ ತಯಾರಿ ನಡೆಸಿದೆ. ಆ ಪ್ರಕಾರ ಈ ಸೀಸನ್‌ನಲ್ಲಿ ಕಳಪೆ ಪ್ರದರ್ಶನ ನೀಡಿದ್ದ ಕೆಲವು ಆಟಗಾರರನ್ನು ಬಿಡುಗಡೆ ಮಾಡುವುದರ ಜೊತೆಗೆ ಟ್ರೇಡ್ ವಿಂಡೋ ಮೂಲಕ ಹೊಸ ಮುಖಗಳನ್ನು ತಂಡಕ್ಕೆ ಸೇರಿಸಿಕೊಳ್ಳುವ ತಯಾರಿಯಲ್ಲಿದೆ.



**Printed by : A. BALACHANDRA, Printed at : RAJHANS ENTERPRISES** No. 134, 4th Main Road, Industrial Town, Rajajinagar, Bengaluru - 560044, Karnataka. **Owned By, Published By, Editor :T. HOMBE GOWDA,** No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news

**ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966**